# ಮಹಾದೇವಿಯಕ್ಕಗಳ ವಚನಗಳು

ಸಂಪಾದಕರು

**ಡಾ.ಸಾ.ಶಿ.ಮರುಳಯ್ಯ**
**ಎಸ್. ಶಿವಣ್ಣ**

**ಪ್ರಸ್ತಾವನೆ**

೧

ವಿಶ್ವೇತಿಹಾಸದಲ್ಲಿ ಶತಶತಮಾನಗಳಿಂದಲೂ ಶೋಷಣೆಗೆ ಒಳಗಾದ ವರ್ಗಗಳು ಎರಡು: ಒಂದು ದಲಿತ, ಮತ್ತೊಂದು ಹೆಣ್ಣು. ದಲಿತ ಶಿಷ್ಟ ಸಮಾಜದ ತುಳಿತಕ್ಕೆ ಸಿಕ್ಕಿದ್ದರೆ, ಹೆಣ್ಣು ಪುರುಷ ಸಮಜದ ನಿಷ್ಠುರ ನಡತೆಗೆ ಸಿಕ್ಕು ಹಣ್ಣಾಗಿದ್ದಾಳೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ದಲಿತ ಕಾರ್ಮಿಕನಾಗಿ, ಗುಲಾಮನಾಗಿ ಗುರುತಿಸಲ್ಪಟ್ಟಿದ್ದರೆ, ಭರತಕಂಡದಲ್ಲಿ ಹೊಲೆಯ-ಮಾದಿಗ ಮೊದಲಾಗಿ ಕರೆಸಿಕೊಳ್ಳುವ 'ಪಂಚಮ'ನೆಂಬ ಹಣೆಪಟ್ಟಿ ಕಟ್ಟಿಸಿಕೊಂಡ ಅಸ್ಪೃಶ್ಯನೆನಿಸಿದ್ದಾನೆ; ಸದ ಶಿಷ್ಟರ ಸೇವೆಗಾಗಿ ನಿಂತ ದಸ್ಯುವಾಗಿದಾನೆ. ಅಲ್ಲಿನ ಗುಲಾಮ ಮಾರುಕಟ್ಟೆಯ ಮಾರಾಟದ ವಸ್ತುವಾಗಿದ್ದರೆ, ಇಲ್ಲಿನ ಪಂಚ ಜೀತಪದ್ಧತಿಯ ದಾಸನಾಗಿದ್ದಾನೆ. ಹೆಣ್ಣಿನದೂ ದಲಿತನಷ್ಟೆ ದಯನೀಯ ಪರಿಸ್ಥಿತಿ. ಅವನು ಪಂಚಮನಾದರೆ, ಇವಳು ಶೂದ್ರಳು; ಅವನು ಅಸ್ಪೃಶ್ಯನಾದರೆ, ಇವಳು ಅಶ್ಲೀಲೆ, ಅಮಂಗಲೆ. ಹೆಣ್ಣಿಗೆ ಎಲ್ಲೂ ಗೌರವದ ಸ್ಥಾನ ಸಿಕ್ಕಿಲ್ಲ. ಮನ್ನಣೆಯ ಮಣೆ ಪುರುಷನಿಗಷ್ಟೆ ಮೀಸಲು. ಅವಳು ಪುರುಷನ ಬೋಗವಸ್ತು. ಅವಳಿಗೆ ಅವಳದೇ ಆದ ಅಸ್ತಿತ್ವ ಇಲ್ಲ, ವ್ಯಕ್ತಿತ್ವವೂ ಇಲ್ಲ. ಇದ್ದರೂ ಅದಕ್ಕೆ ಮಾನ್ಯತೆ ಇಲ್ಲ, ಸಾಮಾಜಿಕ ಹಕ್ಕು ಬಾಧ್ಯತೆಗಳಿಂದ ಅವಳು ವಂಚಿತಳು. ಪ್ರತಿಭೆ ಇದ್ದರೂ ಪ್ರಕಾಶಕ್ಕೆ ಅವಕಾಶವಿಲ್ಲ. ಆರ್ಥಿಕವಾಗಿ ಅವಳು ಸ್ವಾಲವಂಬಿ ಅಲ್ಲ, ಸ್ವತಂತ್ರ ಜೀವನ ಅವಳ ಪಾಲಿಗೆ ಮೊದಲ ಕೊಂಬು. 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು' ಎಂದಾದರೆ, 'ಹೊಸಿಲು ದಾಟಿದ ಹೆಣ್ಣಿಗೆ ಒಕ್ಕತನವೇ ಇಲ್ಲ' ಎಂಬ ಭಾವನೆ. ಆಜೀವ ಪರ್ಯಂತ ಅವಳು ಕಣ್ಣೀರಲ್ಲಿ ಕೈ ತೊಳೆಯಬೇಕು. ಧಾರ್ಮಿಕಾಚರಣೆಗಳಲ್ಲೂ ಅವಳು ಬಹಿಷ್ಕೃತಳು. ಇದನ್ನೆಲ್ಲಾ ನೆನೆದರೆ ಹೆಣ್ಣಾಗಿ ಹುಟ್ಟುವುದೇ ಬೇಡ ಎನ್ನಿಸದರೆ ಆಶ್ಚರ್ಯವೇನಿಲ್ಲ. ಆ ಅನಿಸಿಕೆ ಭರತ ಖಂಡಕ್ಕೆ ಮಾತ್ರ ಸಿಮಿತ ಅಲ್ಲ, ಪೂರ್ವ-ಪಶ್ಚಿಮಗಳೆರಡರಲ್ಲೂ ಇದು ನಿತ್ಯಸತ್ಯ ಸ್ಥಿತಿ; ಮಾನವಾವತಾರದ ಕಾಲದಿಂದಲೂ ನಡೆದು ಬಂದ ಪದ್ಧತಿ. ಇದಕ್ಕೆ ಭೀತರಾಗಿ, ಹೆಣ್ಣಾಗಿ, ಹೊಲೆಯನಾಗಿ ಹುಟ್ಟುವುದೇ ಬೇಡ ಎಂಬ ಬೇಡಿಕೆ ಭಗವಂತನಲ್ಲಿ ! ಉತ್ತಮ ಕುಲದಲ್ಲಿ ಗಂಡಾಗಿ ಹುಟ್ಟುವುದೇ ಮಹಾಭಾಗ್ಯ ಎಂಬ ಹಿಗ್ಗು ! ಗ್ರೀಸ್‌ನ ಜಗದ್ವಿಖ್ಯಾತ, ಆದರ್ಶ ರಾಜ್ಯದ ಅಧ್ವರ್ಯು ಪ್ಲೇಟೊ ತನ್ನ ಜನನ ಹಾಗೂ ಜನ್ಮಭೂಮಿಯ ಬಗೆಗೆ ಅಭಿಮಾನ ತುಂಬಿ ಹೇಳುತ್ತಾನೆ;

Thank God, Iam forunate,
I have been when scoorates has born !
Thank God, I am fortunate,
I have been as Greek, not slave !
Thank God, I am forunate,
I have been as man, not Woman !

ಇದಕ್ಕಿಂತಲೂ ಕೀಳುಮಟ್ಟದ ಸ್ವಾರ್ಥ ಚಿಂತನೆ ಬೇರೊಂದಿರದು !

ಭಾರತದಲ್ಲಿ ವೇದ ಉಪನಿಷತ್ತುಗಳ ಕಾಲದಲ್ಲಿ, ಮಹಿಳೆ ತನ್ನ ಸ್ವಾತಂತ್ರ್ಯ ಸ್ವಾಭಿಮಾನ, ಸಮಾನತೆ, ಸ್ವಪ್ರತಿಷ್ಠೆಗಳನ್ನು ಉಳಿಸಿ ಬೆಳೆಸಿಕೊಂಡಿದ್ದಳು. ಋಷಿ ಮುನಿಗಳೊಡನೆ ಧರ್ಮ ಜಿಜ್ಞಾಸೆಯಲ್ಲಿ ತೊಡಗಿರುತ್ತಿದ್ದಳು. ಆದರೆ ಪುರಾಣ, ಇತಿಹಾಸಗಳ ಕಾಲದಲ್ಲಿ ಸಂಪೂರ್ಣ ದಾಸಳಾದಳು. ಪುರುಷನ ಬಳಿದೊತ್ತಾದಳು ಅನಂತರದ ದಿನಗಳಲ್ಲಿ ಅವಳಿಗೆ ಅವಹೇಳನ ಕಟ್ಟಿಟ್ಟ ಬುತ್ತಿಯಾಯಿತು. ಪ್ರಾಚೀನ ದ್ರಷ್ಟಾರರಾದ ಉಪನಿಷತ್ ಋಷಿಗಳ ಕಣ್ಣಿಗೆ ಕಂಡದ್ದು ಶುದ್ದ ಪರಿಶುದ್ದ ಪರಂಜ್ಯೋತಿ ಸ್ವರೂಪವಾದ ಆತ್ಮ ಮಾತ್ರ. ಆ ಆತ್ಮದಲ್ಲಿ ಹೆಣ್ಣೆಂದಾಗಲಿ, ಗಂಡೆಂದಾಗಲಿ, ಹೊಲೆಯನೆಂದಾಗಲಿ, ಹಾರುವೆನೆಂದಾಗಲಿ ಕಾಣಿಸಿಕೊಳ್ಳಲಿಲ್ಲ. ಅವರು ನಿತ್ಯವೂ ಶಾಂತಿಮಂತ್ರದ ಜೊತೆಯಲ್ಲಿ ಈ ರೀತಿ ಉದ್ಘೋಷಿಸಿದರು.

ಓಂ ಪೂರ್ಣಮದಃ ಪೂರ್ಣಮಿದಂ ಪೂರ್ನಾತ್ ಪೂರ್ಣಮುದಚ್ಯತೇ
ಪೂರ್ಣಸ್ಯ ಪೂರ್ಣಮಾದಾಯ ಪುರ್ಣಮೇವಾವಶಿಷ್ಯತೇ

ಎಂದು. 'ಅದು' ಅಂದರೆ (ಅಖಂಡವಾದ ಸಾಗದಂತಿರುವ) ಪರಮಾತ್ಮ ಪರಿಪೂರ್ಣ, 'ಇದು' ಅಂದರೆ (ಹನಿಯಂತಿರುವ) ಈ ಜೀವಾತ್ಮನೂ ಪರಿಪೂರ್ಣ; ಈ ಸ್ವಯಂ ಪರಿಪೂರ್ಣವಾದ ಜೀವಾತ್ಮ ಆ ಸ್ವಯಂ ಪರಿಪೂರ್ಣವಾದ, ಪರಮಾತ್ಮನಿಂದಲೇ ಬಂದುದಾಗಿದೆ. ಪೂರ್ಣದಲ್ಲಿ ಪೂರ್ಣವನ್ನು ಕಳೆದರೆ ಪೂರ್ಣವೇ ಉಳಿಯುತ್ತದೆ (೦-೦=೦)

ಹೀಗೆ ಪರಮಾತ್ಮನಿಂದಲೇ ಬೇರಾಗಿ ಬಂದ ಜೀವಾಥ್ಮ ಒಂದು ಶುದ್ಧ ತೇಜಸ್ಸು! ಅದು ಅವಿನಾಶಿನಿಯೂ ಅಹುದು. ನಿರಂಜನವೂ ಅಹುದು. ಅದಕ್ಕೆ ಹೆಣ್ಣುತನ, ಗಂಡುತನ, ಹೊಲೆತನ, ಹಾರುವತನ ಎಂಬ ಯಾವ ಸೋಂಕೂ ಇಲ್ಲ. ಆ ನಿರ್ಲಿಪ್ತ ನಿರ್ಮಲ ಜ್ಯೋತಿಯೇ ಅಣು ರೇಣು ತೃಣಕಾಷ್ಠದಲ್ಲೂ ಅಂತರ್ಗತವಾಗಿರುವ ಪರಮಾತ್ಮಾಂಶ ಚಿದಂಶ. ಈ 'ಆತ್ಮ ದರ್ಶನ' ಅಂದಿನ ದಾರ್ಶನಿಕರದಾಗಿತ್ತು. ಆದರೆ ಅನಂತರ ಬಂದ ಕರ್ಮಸಿದ್ಧಾಂತಿಗಳಿಗೆ ಆ ದರ್ಶನ ಅರ್ಥವಾಗಲಿಲ್ಲ. ಅರ್ಥವಾದರೂ ಅನುಷ್ಠಾನಕ್ಕೆ ತರುವ ಧರ್ಮಬುದ್ದಿ ಬರಲಿಲ್ಲ. ಬದಲಾಗಿ ವರ್ಣಭೇದ, ವರ್ಣಭೇದ, ಲಿಂಗಭೇದಗಳನ್ನು ಹುಟ್ಟುಹಾಕಿದರು.

ಉಪನಿಷತ್ಕಾರರನ್ನು ಅನುಮೋದಿಸಿ, ನಮ್ಮ ವಚನಕಾರರು ಮತ್ತು ವಚನಕಾರ್ತಿಯರು ಮುಂದುವರಿದು,

ಮೊಲೆ ಮುಡಿ ಬಂದರೆ ಹೆಣ್ಣಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ಇವೆರಡರ ನಡುವೆ ಸುಳಿವ ಆತ್ಮ
ಹೆಣ್ಣು ಅಲ್ಲ, ಗಂಡೂ ಅಲ್ಲ ಕಾಣಾ ರಾಮನಾಥ
– (ಜೇಡರ ದಾಸಿಮಯ್ಯನ ವಚನ)

ಎಂತಲೂ,
ಸ್ತ್ರೀಯಲ್ಲ ಪುರುಷನಲ್ಲ ನಪುಂಸಕನಲ್ಲ
ಆತ್ಮನೆಂದರಿಯಬಹುದಲ್ಲದೆ ಕಾಣಿಸಬಾರದು
– (ಚಂದಿಮರಸನ ವಚನ)

ಎಂತಲೂ ವಚಿಸಿ ಕೇವಲ ದೈಹಿಕ ರಚನೆಯಿಂದಷ್ಟೇ ಹೆಣ್ಣು ಗಂಡು; ಜ್ಯೋತಿ ಸ್ವರೂಪಿಯಾದ ಆತ್ಮಕ್ಕೆ ಹೆಣ್ಣುತನ, ಗಂಡುತನ ಎಂಬ ಬೇಧ ತಿಳಿದಿಲ್ಲ; ಆ ಬಗೆಯ ಭೇದ ಸರ್ವಥಾ ಸಲ್ಲ; ಆ ಬಗೆಯ ತಾರತಮ್ಯ ಸರ್ವಥಾ ಹೊಲ್ಲ ಎಂದು ಸ್ಪಷ್ಟೀಕರಿಸಿದರು. ಅದರೆ ಕರ್ಮಸಿದ್ಧಾಂತಿಗಳು ಕಿವುಡುಗೇಳಿದರು.

ಕರ್ಮಸಿದ್ಧಾಂತ ಮನುಕುಲಕ್ಕೆ ತಟ್ಟಿದ ಒಂದು ಕಳಂಕ. ಅದು ಹೇಳುತ್ತೆ; ಈ ಜನ್ಮದಲ್ಲಿ ಪಂಚಮನೋ, ಚಾಂಡಲನೋ, ದಟ್ಟದರಿದ್ರನೋ ಆಗಿ ಹುಟ್ಟುವುದಕ್ಕೆ ಅವನ ಪೂರ್ವಾರ್ಜಿತ ಕರ್ಮಕಾರಣ; ಉತ್ತಮ ಕುಲದಲ್ಲಿ ಸರ್ವ ಶ್ರೀಮಂತಿಕೆಯಲ್ಲಿ ಹುಟ್ಟಿದ್ದಕ್ಕೆ ಅವನ ಪೂರ್ವಾರ್ಜಿತ ಪುಣ್ಯ ಕಾರಣ ಎಂದು. ಈ ಸಿದ್ಧಾಂತ ಹೆಣ್ಣಿಗೆ ಅನ್ವಯವಾಗುವುದಿಲ್ಲ. ಏಕೆಂದರೆ ಅವಳು ಮನುಷ್ಯಳೇ ಅಲ್ಲ ! ಜಗತ್ತಿನ ಯಾವ ಧರ್ಮದಲ್ಲೂ ಅವಳಿಗೆ ಜಾಗವೇ ಇಲ್ಲ. ಅಂದ ಮೇಲೆ ಪುಣ್ಯವೆಲ್ಲಿ ಲಭಿಸಬೇಕು! ನಮ್ಮ ದೇಶದ ಸನಾತನ ಧರ್ಮವೊಂದರ ಪ್ರಕಾರ ಹೆಣ್ಣಿಗೆ ಮೋಕ್ಷ ಇಲ್ಲ, ಪೂರ್ವಾರ್ಜಿತ ಕರ್ಮದ ಫಲದಿಂದಾಗಿ ಒಬ್ಬನು ಈ ಜನ್ಮದಲ್ಲಿ ದಲಿತನೋ, ದರಿದ್ರನೋ, ಪಂಚಮನೋ, ಪಾಪಿಯೋ ಆಗಿ ಹುಟ್ಟಬಹುದು, ಆದರೆ ಈ ಜನ್ಮದಲ್ಲಿ ಪುಣ್ಯ ಸಂಚಯಗೊಳಿಸಿದರೆ ಮುಂದಿನ ಜನ್ಮದಲ್ಲಿ ಸತ್ಕುಲ ಪ್ರಸೂತನಾಗಿ ಶ್ರೇಷ್ಠ ಶ್ರೀಮಂತಿಕೆಯಲ್ಲಿ ಮೆರೆಯಬಹುದು. ಆದರೆ ಹೆಣ್ಣಿಗೆ ಈ ಪುಣ್ಯಾವಕಾಶವೂ ಇಲ್ಲ. ಅವಳು ಪಾಪದ ಮಗು. ಅವಳಿಗೆ ಮೋಕ್ಷವೇ ಇಲ್ಲ. ಅವಳು ಮೋಕ್ಷಕ್ಕೆ ಅರ್ಹಳಲ್ಲ. ಈ ಜನ್ಮದಲ್ಲಿ ಹೆಣ್ಣಾಗಿ ಹುಟ್ಟಿದವಳು ಸತ್ತು ಮುಂದಿನ ಜನ್ಮದಲ್ಲಿ ನಾಯಾದರೆ, ಹೆಣ್ಣು ನಾಯೇ ! ಕತ್ತೆಯಾದರೆ ಹೆಣ್ಣು ಕತ್ತೆಯೇ ! ಎಷ್ಟು ಸಾವಿರ ಜನ್ಮ ತಳೆದರೂ ಹೆಣ್ಣೇ ! ಮೋಕ್ಷ ಇಲ್ಲ !! ಏಕೆಂದರೆ ಅವಳು ಮೋಕ್ಷಬಾಹಿರೆ ! ದೇವರ ಕೋಣೆಯಲ್ಲಿ ಕುಳಿತು ತನ್ನ ಕೈಯಾರ ದೇವರನ್ನು ಪೂಜಿಸುವ ಅಧಿಕಾರವೂ ಅವಳಿಗಿಲ್ಲ; ಜೈನಧರ್ಮದಲ್ಲಿ ರಿಯಾಯಿತಿ ಉಂಟು. ಹತ್ತು ಜನ್ಮಗಳು ಹೆಣ್ಣಾಗಿ ಹುಟ್ಟಿದರೂ ಆ ಜೀವ ಹನ್ನೊಂದನೆಯ ಭವದಲ್ಲಿ ಗಂಡಾಗಿ ಹುಟ್ಟಿದರೆ ಅದು ಮೋಕ್ಷಕ್ಕೆ ಅರ್ಹವಾಗುತ್ತದೆ. ಬೌದ್ಧ ಧರ್ಮದ ಪ್ರಕಾರ ಹೆಣ್ಣು ಮಾಯೆ. ಅವಳು ಪ್ರವಜ್ಯಗೆ (ಬೌದ್ಧದೀಕ್ಷೆಗೆ) ಅನರ್ಹಳು. ಯಶೋಧರೆ ಮತ್ತು ಆಮ್ರಪಾಲಿಯರು ಬಂದು ತಮಗೂ ಪ್ರವಜ್ಯೆ ನೀಡಬೇಕೆಂದು ಬೇಡಿದಾಗ ಬುದ್ಧದೇವ ಹೇಳಿದ 'ಹೆಣ್ಣಿಗೆ ಪ್ರವಜ್ಯೆಯನ್ನಿತ್ತರ ಸಾವಿರ ವರ್ಷ ಬದುಕಬಹುದಾದ ನನ್ನ ಧರ್ಮ. ಕೇವಲ ಐದುನೂರು ವರ್ಷಗಳಲ್ಲೇ ಇಲ್ಲವಾಗತ್ತೆ' ಎಂದು. ಆದರೆ ಆ ಮಹಿಳಾ ಮಣಿಯರು ಬಿಡಲಿಲ್ಲ. ಬಲವಂತವಾಗಿ ಪಡೆದರು. ಅದರಿಂದ ತಿಳಿಯುವುದಿಷ್ಟೇ ! ಬೌದ್ಧಧರ್ಮದಲ್ಲೂ ಮೊದಲು ಹೆಣ್ಣಿಗೆ ಧಾರ್ಮಕ ಕ್ಷೇತ್ರದಲ್ಲಿ ಸರಿಯಾದ ಸ್ಥಾನ ಇರಲಿಲ್ಲ ಎಂಬುದು.

ಜಾನ್ ಬೌಕರ್ ಎಂಬುವರು ತನ್ನ 'World Religions' (1997) ಗ್ರಂಥದಲ್ಲಿ

i Egyptian ii Zoroastrian
iii Greek iv Roman
v. Norse vi Celtic

ಮೊದಲಾದ ದೇಶೀಯ ಧರ್ಮಗಳನ್ನು ಕುರಿತು ಬರೆಯುತ್ತಾ ಪ್ರಪಂಚದ ಪ್ರಾಚೀನ ಕಾಲದಿಂದಲೂ ಬೆಳೆದು ಬಂದ ಅನೇಕ ದೇಶೀಯ ಧರ್ಮಗಳ ಸ್ಥಾಪನೆ, ಅವುಗಳ ಸಿದ್ಧಾಂತ ಸಂಕೇತಾದಿಗಳನ್ನು ತಿಳಿಸುತ್ತಾ, ಚೀಣೀಯ ಧರ್ಮದ ಒಂದು ಸಂಕೇತ ಕೊಡುತ್ತಾರೆ. ಅದು ಚೆಂಡಿನಾಕಾರದಲ್ಲಿದೆ. ಅದರಲ್ಲಿ ಎರಡು ಭಾಗಗಳನ್ನು ಸ್ಪಷ್ಟಪಡಿಸಲಾಗಿದೆ; ಒಂದು Yin ಮತ್ತೊಂದು Yang ಇವುಗಳಲ್ಲಿ

'Yin' is associated with Darkness water and female ಎಂತಲೂ
'Yang' with light, activity air and male

ಎಂತಲೂ ಸೂಚಿಸಿರುವುದಾಗಿ ತಿಳಿಸುತ್ತಾನೆ (P. ೮೮)

ಇಲ್ಲಿ ವೇದ್ಯವಾಗುವುದು ಚೀಣೀ ಧರ್ಮಗಳಲ್ಲೂ ಹೆನ್ನು 'ಕತ್ತಲು' ಗಂಡು 'ಬೆಳಕು' ಎಂಬುದು.

ಜಗತ್ತಿನ ಮತ್ತೊಂದು ಧರ್ಮ ಪುರುಷ ಆಕಾಶ. ಸ್ತ್ರೀ ಭೂಮಿ ಎಂದು ಕೀಳು ಕಲ್ಪನೆ ತಳೆದಿದೆ

ಕ್ರೈಸ್ತ ಧರ್ಮದ ತಾಯಿ ಬೇರಾದ Judaism ನಲ್ಲಿ ಹೆಣ್ಣಿಗೆ ಸಮಾನತೆ ಇಲ್ಲ. ಇಂದಿಗೂ ಜ್ಯೂಗಳು (Jews) ಕಟ್ಟಾ ಸಂಪ್ರದಾಯವಾದಿಗಳು. ಜೆರೂಸಲೆಮ್‌ನ ಪ್ರಾರ್ಥನಾ ಮಂದಿರದಲ್ಲಿ ಗಂಡಸರಿಗೂ, ಹೆಂಗಸರಿಗೂ ಪ್ರತ್ಯೇಕ ಸ್ಥಳಗಳಿವೆ. ಜಾನ್ ಬೌಕರ್

Traditionally men and women pray separately in Judaism and in synagogue there is a partition between the seating allocated for men and for women. According to the Talmud, the 6th century Jewish law bok, this separation goes back to the days of the Temple in Jerusalem and it is enforced because women are perceived as a distractio to prayer. Women unlike men are expected to attend daily services and if they do go, their presence, except for Reform Jews, does not count toward a MINYAN A womans' responsibiliy is to keep a Jewish home, an important focus for Jewsih life and to bring up her children in the traditional way. Jewsihness is passed down through the mother (P.120) ಎಂದು ಹೇಳುತ್ತಾನೆ.

ಒಟ್ಟಿನಲ್ಲಿ ಯಾವುದೇ ಜಾಗತಿಕ ಧರ್ಮದಲ್ಲೂ ಹೆಣ್ಣಿಗೆ 'ಧರ್ಮದಾಯಿತ್ವ' ಇಲ್ಲ. ಅವಳು ಸರ್ವ ವಿಧದಲ್ಲೂ ಅನರ್ಹಳು. ಸಕಲ ಕ್ಷೇತ್ರಗಳಲ್ಲೂ ಅಪಾತ್ರಳು. ಆದರೆ ವೀರಶೈವ ಧರ್ಮದಲ್ಲಿ ಮಾತ್ರ ಮಹಿಳೆ ಪುರುಷನಷ್ಟೇ ಸಮಾನಸ್ಕಂಧಳು; ಅವಳು ಪುರುಷನಷ್ಟೇ ಸ್ವತಂತ್ರು; ಅವನಷ್ಟೇ ಗೌರವದ ಮಾತು ಬದುಕಬಲ್ಲಳು. ಅವನಂತೆಯೇ ದೇಹದ ಮೇಲೆ ಇಷ್ಟಲಿಂಗ ಧಾರಣೆ ಮಾಡಿಕೊಂಡು ಪೂಜಿಸಬಲ್ಲಳು. ಬದುಕಾದ ಮೇಲೆ ಪುರುಷನಂತೆಯೇ ಶಿವನಲ್ಲಿ ಐಕ್ಯಳಾಗಬಲ್ಲಳು. ಮೋಕ್ಷಕ್ಕೆ ಎಲ್ಲೂ ಅಡ್ಡಿ ಇಲ್ಲ, ಹೆಣ್ಣು ಎಂಬ ತಿರಸ್ಕಾರವಿಲ್ಲ; 'ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿ ಅಲ್ಲ, ಹೆಣ್ಣು ಪ್ರತ್ಯಕ್ಷ ಕಪಿಲ ಸಿದ್ಧ ಮಲ್ಲಿಕಾರ್ಜುನ' ಎಂಬ ಪೂಜ್ಯ ಭಾವನೆ ವೀರಶೈವರದ್ದು.

ಶರಣರಿಗೆ ಅನ್ವಯಿಸುವ ಮೋಕ್ಷ ಸಂಹಿತೆ ಶರಣೆಯರಿಗೂ ಅನ್ವಯವಾಗುತ್ತದೆ. ಸಮಾಜದಲ್ಲಿ ಮಹಿಳೆಗೆ ಸರ್ವವಿಧದಿಂದಲೂ ಸಮಭಾಗಿತ್ವ ಇದೆ ಎಂಬುದನ್ನು ತೋರಿಸಿಕೊಟ್ಟಿತು ವೀರಶೈವ; ಸೈದ್ಧಾಂತಿಸಿ ಸಂಸ್ಥಾಪಿಸಿತು ಕೂಡ. ಅದರ ಪರಿಣಾಮವಾಗಿ ಹನ್ನೆರಡನೆಯ ಶತಮಾನದಲ್ಲೂ ಅಕ್ಕ, ಮುಕ್ತಾಯಕ್ಕ ಮೊದಲಾದ ನೂರಾರು ಜನ ವಚನಕಾರ್ತಿಯರು ಸಾವಿರಾರು ಜನ ಶರಣೆಯರು, ಪ್ರಕಾಶಕ್ಕೆ ಬಂದರು. ಹೆಣ್ಣಿನ ಬದುಕಿನಲ್ಲಿ ಇಂತಹ ಬದಲಾವಣೆ ಆದದ್ದು ವಿಶ್ವೇತಿಹಾಸದಲ್ಲಿ ಇದೇ ಮೊದಲು, ಇದೇ ಕೊನೆ.

॥ ೨ ॥

ಧಾರ್ಮಿಕ, ಸಾಮಾಜಿಕ, ಅಸಮತೋಲನ, ಹೆಣ್ಣಿಗಾದ ಆಗುತ್ತಿದ್ದ ಅನ್ಯಾಯ, ವಿದ್ರೋಹ ಕುರಿತು ಜಗತ್ತಿನ ಯಾವ ವ್ಯಕ್ತಿಯೂ ತಲೆಕೆಡಿಸಿಕೊಂಡಿರಲಿಲ್ಲ. ಹೆಣ್ಣಿನ ಶೋಷಣೆ ತನ್ನ ಗುರಿ, ಅವಳ ಮೇಲಿನ ದಬ್ಬಾಳಿಕೆ ತನ್ನ ಆಜನ್ಮ ಸಿದ್ಧ ಹಕ್ಕು ಎಂಬ ದುರ್ಭಾವನೆಯನ್ನಿರಿಸಿಕೊಂಡೇ ಬಂತು ಈ ಪುರುಷ ಜಗತ್ತು. ಆದರೆ ಆ ಕುರಿತು ಮೊದಲು ಚಿಂತಿಸಿ, ಸ್ತ್ರೀ ಸಂವೇದನೆಯನ್ನು ಒಂದು ಕ್ರಾಂತಿ ರೂಪದಲ್ಲಿ ಸ್ವೀಕರಿಸಿದವರು ಹನ್ನೆರಡನೆಯ ಶತಮಾನದ ಕರ್ನಾಟಕದ ಕಲ್ಯಾಣ ರಾಜ್ಯದ ಎಲ್ಲರನ್ನ ಬಸವಣ್ಣ ! ಅವನೆತ್ತಿಕೊಂಡ ಸಮಾಜೋ-ಧಾರ್ಮಿಕ ಮಹಾಂದೋಲನದಲ್ಲಿ ಸತ್ರೀ ಪರವಾದ ಹೋರಾಟವೂ ಒಂದು. ಬಸವಣ್ಣ ಆ ಕ್ರಾಂತಿಯ ರೂವಾರಿಯಾದರೆ, ಅಕ್ಕಮಹಾದೇವಿ ಅವರ ಚಾಲಕನ ಶಕ್ತಿಯಾದಳು. ಅಣ್ಣನ ಕನಸನ್ನು ಅಕ್ಷರಶಃ ಆಗು ಮಾಡಿದ ಆದರ್ಶ ಮಹಿಳೆ ತಾನಾಗಿದ್ದಾಳೆ. 'ನಾಮದಲ್ಲಿ ಹೆಂಗೂಸು ಭಾವದಲ್ಲಿ ಗಂಡು ರೂಪು' (ಹೆ.ವ.೩೪) ಆಗಿ ಹೆಣ್ಣಿನ ಕಣ್ಣೀರು ತೊಡೆದ ತಾಯಿಯಾಗಿದಾಳೆ. ಬಾಳು ಕೆಟ್ಟವರಿಗೆ ಬಾಳೂ ಕೊಟ್ಟಿದ್ದಾಳೆ. ಬೆಳಕು ನೀಡಿದ್ದಾಳೆ. ಸ್ತ್ರೀಪರ ಕ್ರಾಂತಿಯ ಆದ್ಯ ಪ್ರವರ್ತಕಳಾಗಿದ್ದಾಳೆ. ಕನ್ನಡದ ಆದಿ ಕವಯಿತ್ರಿಯಾಗಿದ್ದಾಳೆ. ಅನುಪಮ ಅನುಭಾವಿಯೂ, ಅದ್ವಿತೀಯ ದಾರ್ಶನಿಕಳು ಆದ ಪುಣ್ಯವನಿತೆ ಎನಿಸಿದ್ದಾಳೆ.

ಅಕ್ಕ ಹೆಣ್ಣು ಕುಲದ ಹೆಮ್ಮೆ, ವ್ಯಕ್ತಿತ್ವದಲ್ಲಿ ಅವಳದು ಅತಿ ಎತ್ತರದ ನಿಲುವು. ಅವಳೇರಿದ ಎತ್ತರಕ್ಕೆ ಏರಲಾಗದಿದ್ದರೂ ಅವಳಾದ ಮೇಲೆ ಬಂದ ಬೆರಳೆಣಿಕೆಯ ವೀರ ವಿರಾಗಿಣಿಯರು ಕೆಲವರಿದ್ದಾರೆ. ಅವರಲ್ಲಿ ಹದಿನಾಲ್ಕನೆಯ ಶತಮಾನದ ಕಾಶ್ಮೀರದ ಅನುಭಾವಿ ಕವಿತ್ರಿ ಲಲ್ಲೇಶ್ವರಿ ಹಾಗೂ ಹದಿನಾರನೆಯ ಶತಮಾನದ ರಾಜಸ್ಥಾನದ ಸಾಧ್ವಿ, ಶಿರೋಮಣಿ ಮೀರಾಬಾಯಿ. ಇವರಿಬ್ಬರೂ ಅಕ್ಕನ ಸಮಾನ ಸಂಕಷ್ಟ ಸನಾಭಿಗಳು. ಫ್ರಾನ್ಸ್‌ನ ಸ್ವಾತಂತ್ರ್ಯಯೋಧ ಆರ್ಕಿನ ಜೋನ್ ಮತ್ತು ಪರ್ಷಿಯಾ ದೇಶದ ಕ್ರಾಂತಿಕನ್ಯೆ ರಬಿಯಾ ಬಾಸರಿ ಬಾಸರಿ ಇವರಿಬ್ಬರು ದೌರ್ಜನ್ಯಕ್ಕೆ ಬಲಿಯಾದಕ್ಕನ ಮಲಸಹೋದರಿಯರು.

ಅಕ್ಕನದು ಬಲವಂತ ವಿವಾಹವಾದರೆ, ಲಲ್ಲೇಶ್ವರಿಯದು ಬಾಲ್ಯವಿವಾಹ, ಪಾಂಪೊರದ ಓರ್ವ ಶೈವ ಬ್ರಾಹ್ಮಣ ಕೈ ಹಿಡಿದ. ಗಂಡ ಮುಗ್ಧ, ಅತ್ತ ಗಯ್ಯಾಳಿ, ಮಾವ ಸಾತ್ವಿಕ, ಅತ್ತೆಯ ಕಾಟ, ಅವಳಿಂದ ಪ್ರೇರಿತನಾದ ಗಂಡನ ಹುಚ್ಚುತನಗಳಿಂದಾಗಿ ಲಲ್ಲೇಶ್ವರಿ ಮನೆಬಿಟ್ಟು ಹೊರ ಹೊರಡಬೇಕಾಗುತ್ತದೆ. ಅಕ್ಕಣಮತೆ ಇವಳು ಬತ್ತಲೆಯಾಗಿ ಬೀದಿಗಿಳಿಯುತ್ತಾಳೆ. ಗುರುಸಿದ್ಧ ಶ್ರೀಕಂಠರ ಆಶೀರ್ವಾದ ಬೋಧೆಗಳು ಸಾಕಷ್ಟು ಲಭಿಸುತ್ತವೆ. ಅಂದು ಕಾಶ್ಮೀರದಲ್ಲಿ ಪ್ರಚಲಿತವಿದ್ದ ಸೂಫಿಗಳು ಈಕೆಯ ಪರಮ ಭಕ್ತರಾಗುತ್ತಾರೆ. 'ಲಲ್ಲ ಅರೀಫಾ' ಅಂದರೆ 'ಲಲ್ಲ ಮಹಾತ್ಮಳು' ಎಂದು

ಅವಳನ್ನು ಕೊಂಡಾಡುತ್ತಾರೆ. ಆಕೆಯ ಹುಟ್ಟು ಹೆಸರು ಯಾರಿಗೂ ಗೊತ್ತಿಲ್ಲ. ಆದರೆ ಮದುವೆಯಾದ ಮೇಲೆ ಗಂಡನ ಮನೆಯವರು ಆಕೆಯನ್ನು 'ಪದ್ಮಾವತಿ'ಎಂದು ಕರೆಯುತ್ತಿದ್ದಂತೆ. ಅಕ್ಕ ವಚನಗಳನ್ನು ಕನ್ನಡದಲ್ಲಿ ರಚಿಸಿದ್ದರೆ, ಲಲ್ಲೇಶ್ವರಿ 'ವಾಕ್' (ವಚನ) ಗಳನ್ನು ಕಾಶ್ಮೀರಿ ಭಾಷೆಯಲ್ಲಿ ರಚಿಸಿ ಹಾಡಿದ್ದಾಳೆ. ಪರಶಿವನ ಪದಭಕ್ತೆಯರಾದ ಇಬ್ಬರೂ ತಮ್ಮ ತಮ್ಮ ಭಾಷಾ ಸಾಹಿತ್ಯದಲ್ಲಿ ಭಕ್ತಿ ಕುಸುಮಾಂಜಲಿಯನ್ನು ಸಮರ್ಪಿಸಿದ್ದಾರೆ. ಅಕ್ಕ ಕನ್ನಡದ ಮೊತ್ತಮೊದಲ ಕವಯಿತ್ರಿ; ಲಲ್ಲೇಶ್ವರಿ ಕಾಶ್ಮೀರಿ ಭಾಷೆಯ ಮೊತ್ತಮೊದಲ ಕವಯಿತ್ರಿ.

ಲಲ್ಲೇಶ್ವರಿ ಅಕ್ಕನಂತೆ ರಾಣಿಯಾಗಿರಲಿಲ್ಲ. ಪಂಡಿತ ಕುಟುಂಬದ ಸೊಸೆಯಾಗಿದ್ದಳು. ಅಕ್ಕ ಯಾವುದೇ ಪವಾಡ ಮಾಡಿದವಳಲ್ಲ. ಆದರೆ ಲಲ್ಲೇಶ್ವರಿ ಅನೇಕ ಪವಾಡಗಳನ್ನು ಮೆರೆದ ಪವಾಡ ವನಿತೆ.

'ಹುಟ್ಟು ನಿರ್ವಾಣದಲ್ಲಿ ಮನೆಬಿಟ್ಟು ಅಲೆಯುತ್ತಿದ್ದೀಯಲ್ಲಾ, ಇದು ಸರಿಯೇ?! ಎಂದು ಕೇಳಿದ್ದಕ್ಕೆ ಹೇಳಿದಳಂತೆ, 'ನನಗಾರೂ ಗಂಡಸರೆ ಕಾಣುತ್ತಿಲ್ಲ!' ಎಂದರು, ಈ ಉತ್ತರ ಕಿವಿಗೆ ಬಿದ್ದಾಗ ಅಕ್ಕನ 'ಗಂಡಗಂಡರನ್ನೆಲ್ಲ ಹೆಂಡಹೆಂಡಿರಾಗಿ ಅಳುವ ಗರುವನ ಕಂಡೆ' ಎಂಬ ಮಾತು ನೆನಪಾಗುತ್ತದೆ. ಅವಳನ್ನು 'ಲಲ್ಲ ದೀದ' ಎನ್ನುತ್ತಿದ್ದರಂತೆ. ಕಾಶ್ಮೀರಿ ಭಾಷೆಯಲ್ಲಿ 'ಲಲ್ಲ' ಎಂದರೆ ಜೋಲುಬಿದ್ದ ಕಿಬ್ಬೊಟ್ಟೆಯೆಂತಲೂ, 'ದೀದ' ಎಮದರೆ 'ತಾಯಿ' ಎಂತಲೂ ಅರ್ಥ.೧ ಮಹಾದೇವಿ 'ಅಕ್ಕ'ನಾದಳು, ಲಲ್ಲೇಶ್ವರಿ 'ತಾಯಿ'ಯಾದಳು.

ಹೀಗೆ ಮಹಾದೇವಿಯಕ್ಕ ಮತ್ತು ಲಲ್ಲ ದೀದ ಅನುಭಾವಿ ಕವಯಿತ್ರಿಯರಾಗಿ ಪುರುಷರಷ್ಟೇ ಪ್ರಮಾಣದಲ್ಲಿ ಅಪರೋಕ್ಷ ಜ್ಞಾನಿಗಳು ಮಹಾತಪಸ್ವಿನಿಯರೂ ಆಗಿ ಬೆಳಗಿದ್ದಾರೆ. ಅಕ್ಕ ತನ್ನ ಆರಾಧ್ಯದೈವ ಚೆನ್ನಮಲ್ಲಿಕಾರ್ಜುನನಲ್ಲಿ ಐಕ್ಯಳಾದರೆ, ಲಲ್ಲೇಶ್ವರಿ ತನ್ನನ್ನೇ ತಾನು ಅಗ್ನಿಗರ್ಪಿಸಿಕೊಂಡಿದ್ದಾಳೆ. ಇದನ್ನು ಖಂಡ ಇವಳ ಗುರು ಸಿದ್ಧ ಶ್ರೀಕಂಠರು,

ಗವಚಾಠಗ್ವರಸ ಖಸಿಥಯಿ
ಸುಯವರ ದಿತಮ್‌ದೇವಾ !

ಗುರುವನೂ ಮೀರಿಸಿ, ಶಿಷ್ಯಳು ಮುಂದೆ ಸಾಗಿದಳು
ಓ ದೇವರೇ ನನಗೆ ಅಂಥದೇ ವರವ ದಯಪಾಲಿಸು !

ಎಂದು ಪರಮಾತ್ಮನಲ್ಲಿ ಪ್ರಾರ್ಥನೆ ಸಲ್ಲಿಸಿದರಂತೆ !

ಮರಣದಲ್ಲಷ್ಟೆ ಅಲ್ಲ ಬದುಕಿನಲ್ಲೂ ಬಾನೆತ್ತರಕ್ಕೇರಿದ ಲಲ್ಲೇಶ್ವರಿ ನಿಜಕ್ಕೂ ಧನ್ಯಳು !

---

೧. ಡಾ॥ ಪಂಚಾಕ್ಷರಿ ಹಿರೇಮಠ, ಮಹಾಯೋಗಿನಿ ಲಲ್ಲೇಶ್ವರಿ ೧೯೭೭

ಮೇರೆ ತೋ ಗಿರಿಧರ್ ಗೋಪಾಲ್
ದೂಸರೋ ನ ಕೋಯಿ

ಎಂದು ಶಪಥಗೈದು, ಅವನನ್ನೇ ಮನಸಾರ ಮೆಚ್ಚಿ, ಭಕ್ತಿಯ ಆದಿತ್ಯದಲ್ಲಿ ಅವನೆ ಮಾನಸಿಕ ಮಡದಿಯಾದ, ಚಿತ್ತೋಡಿನ ಯುವರಾಜನೊಡನೆ ಬಲಾತ್ಕಾರದ ಮದುವೆಯಾದ, ಆದರೆ ವಿರಸ ದಾಂಪತ್ಯದ ಜೊತೆಗೆ ವೈಧವ್ಯವನ್ನೂ ಪಡೆದ. ಅರಮನೆಯ ಚಿತ್ರ ಚಿತ್ರ ಹಿಂಸೆಗೆ ಹೇಸಿ, ತನ್ನ ಗಇರಿಧರ ಗೋಪಾಲನನ್ನು ಅಋಉಇಸಿ ಹೋಗಿ, ಅವನ ಪಾದಾರವಿಮದ ಸೃಇದ, ಹದಿನಾರನೆಯ ಶತಮಾನ ಕಂಡ ಮಹಾನ್ ಭಗವದ್ಭಕ್ತೆ, ಮೀರಾಬಾಯಿಯ ಬದುಕು ಬವಣೆ ಅಕ್ಕನಿಗೆ ತುಂಬ ಹತ್ತಿರವಾದದ್ದು, ಅವಳು ಗಿರಿಧರ ಗೋಪಾಲನ ಭಕ್ತೆ. ಇವಳು ಶ್ರೀ ಶೈಲಮಲ್ಲಿಕಾರ್ಜುನನ ಪದಭಕ್ತೆ, ಅವಳು ರಾಜಸ್ಥಾನೀ ಹಗೂ ಗುಜರಾತೀ ಭಾಷೆಗಳಲ್ಲಿ 'ಭಜನ್' ಗಳನ್ನು ರಚಿಸಿ ಹಾಡಿದ್ದರೆ, ಇವಳು ಕನ್ನಡದಲ್ಲಿ ವಚನ, ಸ್ವರವಚನಗಳನ್ನು ರಚಿಸಿ ವಂಚಿಸಿದ್ದಾಳೆ. ಇಬ್ಬರೂ ತಮ್ಮ ತಮ್ಮ ಭಾಷಾ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಇಬ್ಬರ ರಚನೆಗಳಲ್ಲೂ ಭಕ್ತಿಸ್ಥಾಯಿ, ಅದರಲ್ಲೂ ಸತಿಪತಿ ಭಾವದ ಅನನ್ಯ ಭಕ್ತಿ ಓತಪ್ರೋತ. ಈ ರೀತಿಯ ಭಕ್ತಿ ಪಥದಲ್ಲಿ ಇಬ್ಬರದೂ ದಿಟ್ಟ ಹೆಜ್ಜೆ.

ಆದರೆ ಮೀರಾಳಿಗೆ ಅಕ್ಕನಿಗಿದ್ದಂತೆ ಅರಮನೆ ಪ್ರತಿರೋಧವಿದ್ದರೂ ಸಾಮಾಜಿಕ ಚಳವಳಿಯ ಸಾಮೂಹಿಕ ಬೆಮಬಲ ಇಲ್ಲ. ಅವಳ ಮನೋಧರ್ಮವೂ ಸಾಮಾಜಿಕ ಪರಿವರ್ತ್ನೆಯ ಸ್ವರೂಪದ್ದಾಗಿರಲಿಲ್ಲ. ಅಕ್ಕ ಕ್ರಾಂತಿ ವನಿತೆ, ಮೀರಾ ಸಾತ್ವಿಕ ಸ್ವಭಾವದ ಶ್ರೀ ಲಲಿತ! ಸ್ತ್ರೀ ಶಕ್ತಿ ಸಂವರ್ಧನೆಯ ಸಂಕಲ್ಪ ಸ್ವೀಕರಿಸಿದ ಅಕ್ಕ, ಹಿಂದೆಯೇ ಗುರುತಿಸಿದಂತೆ, ಬಾಹ್ಯದಲ್ಲಿ ಹೆಣ್ಣು, ಭಾವದಲ್ಲಿ ಗಂಡು ! ಕ್ರಾಂತಿಯ ಕಹಳೆಯನ್ನೂದಿ ಜಗತ್ತನ್ನು ಜಾಗೃತಗೊಳಿಸಿದ ವೀರಯೋಧೆ ! ಮೀರಾ ತನ್ನ ಅರವತ್ತನೆಯ ವಯಸ್ಸಿನಲ್ಲಿ ಗೋಪಾನ ಪಾದ ಸೇರಿದ ದಾಖಲೆ ಇದ್ದರೆ, ಅಕ್ಕ ಐಕ್ಯಳಾದದ್ದಕ್ಕೆ ಮಾಹಿತಿ ಇಲ್ಲ.

ಸಾಮಾನ್ಯವಾಗಿ ನಮ್ಮ ಜಾನಪದರಲ್ಲಿ ಒಂದೇ ರೂಪದ ಘಟನೆಗಳು ಬೇರೆಡೆಯಲ್ಲೂ ಘಟಿಸಿದುವೆಂದು ಹೇಳುವ ಐತಿಹ್ಯ (Legends) ಗಳುಂಟು ಇವುಗಳನ್ನು ಸಂಚಾರೀ ಐತಿಹ್ಯಗಳು ((c) ಎಂದು ಕರೆಯುತ್ತಾರೆ. ಉದಾಹರಣೆಗೆ 'ಕೆರೆಗೆ ಹಾರ', ಕಲ್ಲನಗೇರಿ ಮಲ್ಲನಗೌಡನ ಸೊಸೆ 'ಭಾಗೀರಥಿ', 'ಕೆರೆಗೆ ಹಾರ' ವಾದಂತೆ. ಹುಳಿಯಾರು ಕೆಂಚವ್ವನೂ ಕೆರೆಗೆಹಾರವಾದಳೆಂಬ, ಅಕ್ಕ ಕಟ್ಟಿಸಿದ ಹೊಂಡದಲ್ಲಿ ನಿರು ಬರಲಿಲ್ಲ, ತಂಗಿ ಕಟ್ಟಿಸಿದ ಹೊಂಡದಲ್ಲಿ ನೀರು ಬಂದು ತುಂಬಿತು ಎಂಬ, ರಾಜ್ಯ ಕಟ್ಟಬಯಸಿದವರ ಹಾದಿಯಲ್ಲಿ ಮೊಲ ಬೇಟಿ ನಾಯಿಗಳನ್ನು ಅಟ್ಟಿಸಿಕೊಂಡು ಹೋದದ್ದನ್ನು ಕಂಡು 'ಇದು ಗಂಡು ಮೆಟ್ಟಿನ ಭೂಮಿ, ರಾಜ್ಯ ಸ್ಥಾಪನೆಗೆ ಇದೇ ಯೋಗ್ಯ ಸ್ಥಳ', ಎಂದು ಗುರುತಿಸಿ ರಾಜಧಾನಿ ನಿರ್ಮಿಸಿದ – ಏಕರೂಪದ ಘಟನೆಗಳು ಅನೇಕ ಕಡೆಗಳಲ್ಲಿ ಕಂಠಸ್ಥವಾಗಿ ಬೆಳೆದು ಬಂದಿರುವುದುಂಟು. ಈ ರೀತಿ ವಲಸೆ ಹೋಗುವ ಐತಿಹ್ಯಗಳಲ್ಲಿ ಕಾಣಸಿಗುವಂತೆ, ಅಕ್ಕ, ಲಲ್ಲ ದೀದ ಮತ್ತು ಮೀರಾರವರ ಬದುಕು, ಸಾಧನೆ, ಸ್ಥಿತಿಗಳಲ್ಲಿ ಏಕರೂಪತೆ ಕಂಡುಬರುವುದುಂಟು. ಆದರೆ ಇವರ ಬಾಳು ಐತಿಹ್ಯ ಅಲ್ಲ, ಇತಿಹಾಸ ! ಕಟ್ಟುಕತೆ ( Tale ) ಅಲ್ಲ, ವಾಸ್ತವತೆ !

ನಮಗೆ ತಿಳಿದಂತೆ ಅಕ್ಕನ ಮಲಸಹೋದರಿಯರು ಇಬ್ಬರು. ಒಬ್ಬಳು ಫ್ರಾನ್ಸ್‌ನ ಮಹಾಯೋಧೆ, ಅನನ್ಯ ದೈವಭಕ್ತೆ, ಸಂತಳ ಸ್ತರಕ್ಕೇರಿದ ಜೋನ್ ಆಫ್ ಆರ್ಕ್, ಮತ್ತೊಬ್ಬಳು ಪರ್ಷಿಯಾ ದೇಶದ ಕ್ರಾಂತಿ ಕನ್ಯೆಯ ರಬಿಯಾ ಬಾಸರಿ. ಆರ್ಕಿನ ಜೋನ್ ರಾಷ್ಟ್ರಪ್ರೇಮಿ, ರಾಷ್ಟ್ರ ಸ್ವಾತಂತ್ರ್ಯ ಪ್ರೇಮಿ. ಬರ್ಗಂಡಿಯಾ ಜನರ ಆಳ್ವಿಕೆಗೆ ಒಳಪಟ್ಟಿದ್ದ ಫ್ರಾನ್ಸ್ ದೇಶವನ್ನು ವಿಮುಕ್ತಗೊಳಿಸುವ ಸಲುವಾಗಿ, ಫ್ರಾನ್ಸಿನ ಯುವರಾಜ ಏಳನೆಯ ಚಾರ್ಲ್ಸ್‌ನನ್ನು ಪ್ರಚೋದಿಸಿ ಅಪೂರ್ಣ ಜಯಗಳಿಸಿದ ಜೋನ್ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಡಿದವಳು. ಆದರೆ ಮುಂದೆ ಅರಸನ ಬೆಂಬಲವಿಲ್ಲದೆ ಸೆರೆಸಿಕ್ಕಿ, ಬ್ರಿಟಿಷರ ಹೃದಯಹೀನ ನೀತಿಯಿಂದಾಗಿ 'ಮಾಟಗಾತಿ' ಎಂಬ ಹಣೆಪಟ್ಟಿ ಕಟ್ಟಿಕೊಂಡು, ೧೪೩೧ ಮೇ ೩೦ರಂದು ತನ್ನ ೧೯ನೆಯ ವಯಸ್ಸಿನಲ್ಲಿ ನಡುಬೀದಿಯಲ್ಲಿ ಅವರಿಟ್ಟ ಅಗ್ನಿಗಾಹುತಿಯಾದ ಹುತಾತ್ಮಳೆದಂದರೆ ಸಂತ ಜೋನ್ (Saint Joan) ಇವಳು ಅಕ್ಕನಂತೆ ಸ್ತ್ರೀಪರವಾದ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದವಳಲ್ಲ; ರಾಷ್ಟ್ರಕ್ಕಾಗಿ, ರಾಷ್ಟ್ರದ ವಿಮುಕ್ತಿಗಾಗಿ ಹೋರಾಡಿದ ಸ್ವಾತಂತ್ರ್ಯಯೋಧೆ.

`I am going to burn down Heaven with this flame and estinguish fire of Hell with this water, so that therese two vells may be removed and people may worship god for the love of god' ೨

'ಸ್ವರ್ಗ ಮತ್ತು ನರಕ ಎಂಬ ಎರಡೂ ಸೋಗಿನ ಬುರುಕಿಗಳನ್ನು ಈ ಕೈ ಪಂಜಿನಿಂದ ಕಿಚ್ಚಿಟ್ಟು ಸುಟ್ಟು ಈ ಕೈ ಬಕೆಟ್ ನೀರಿಂದ ತೊಳೆದು ಶುದ್ಧೀಕರಿಸುತ್ತೇನೆ. ತನ್ಮೂಲಕ ಸದ್ಭಕ್ತರು ಸಹಜ ಭಕ್ತಿಯಿಂದ ಭಗವಂತನನ್ನು ಆರಾಧಿಸಲು ಅವಕಾಶ ಕಲ್ಪಿಸಿಕೊಡುತ್ತೇನೆ'

---

೨

ಉತ್ತರ ಅಮೆರಿಕೆಯ ಸ್ಯಾನ್‌ಫ್ರಾನ್ಸಿಸ್ಕೋ ನಗರಕ್ಕೆ ಹತ್ತು ಮೈಲಿ ದೂರದಲ್ಲಿ ಒಂದು ಆಶ್ರಮ ಇದೆ. ಅದರ ಮಧ್ಯದಲ್ಲಿ ಸುವಿಶಾಲ ಪ್ರಾರ್ಥನಾ ಮಂದಿರ ಇದೆ. ಅಲ್ಲಿ ಪ್ರತಿದಿನವೂ ಪ್ರಾರ್ಥನೆ, ಪ್ರವಚನ, ಧ್ಯಾನಾದಿ ಸಾಮೂಹಿಕ ಕ್ರಿಯೆಗಳು ನಡೆಯುತ್ತವೆ. ಪ್ರಾರ್ಥನಾ ಮಂದಿರದ ಗೋಡೆಗಳಲ್ಲಿ ವಿಶ್ವದ ಅನೇಕ ಸಾಧುಸಂತರ ಚಿತ್ರಗಳಿವೆ. ನಮ್ಮ ಅಕ್ಕಮಹಾದೇವಿಯ ಭಾವಚಿತ್ರವೂ ಇದೆ. ಅವಳ ವಚನವೊಂದರ ಇಂಗ್ಲೀಷ್ ಅನುವಾದ ಕೂಡ ಇದೆ. ಅದರಂತೆ ರಬಿಯಾ ಬಾಸರಿಯ ಆಳೆತ್ತರದ ಒಂದು ಭಿತ್ತಿ ಚಿತ್ರ ಇದೆ. ಆ ಚಿತ್ರದ ಬಲಗೈಯಲ್ಲಿ ಒಂದು ಪಂಜು, ಎಡಗೈಯಲ್ಲಿ ನೀರು ತುಂಬಿದ ಒಂದು ಬಕೆಟ್ ಇದೆ. ಈ ಚಿತ್ರದ ಪಕ್ಕದಲ್ಲೇ ಪರ್ಷಿಯನ್ ಭಾಷೆಯ ಕವಿತೆಯ ಮೇಲೆ ಕಾಣಿಸಿದ ಇಂಗ್ಲೀಷ್ ಅನುವಾದ ಇದೆ.

– ಹೀಗೆಂದು ಘೋಷಿಸಿ, ಮಾನವನ ಬೌದ್ಧಿಕ, ಮಾನಸಿಕ ವಿಕಾಸಕ್ಕೆ ಅಡ್ಡಿಯುಂಟು ಮಾಡುತ್ತಿರುವ ಸ್ವರ್ಗ ಮತ್ತು ನರಕಗಳ ಕಲ್ಪನೆಯನ್ನು ಖಂಡತುಂಡವಾಗಿ ಕತ್ತರಿಸಿದ ಕ್ರಾಂತಿ ಕವಯಿತ್ರಿ ಪರ್ಷಿಯಾ ದೇಶದ ರಬಿಯಾ ಬಾಸರಿ. ಈಕೆ ನಮ್ಮ ಬಸವ ಸಿದ್ಧಾಂತಕ್ಕೆ ತುಂಬಾ ಹತ್ತಿರದವಳಾಗುತ್ತಾಳೆ. ಬಸವಣ್ಣ ನಮ್ಮ ಜನರ ಮೌಢ್ಯ ನಿವಾರಣೆಗಾಗಿ ಕೈಗೆತ್ತಿಕೊಂಡ ಅನೇಕ ಕ್ರಾಂತಿಕಾರಕ ಕಾರ್ಯಗಳಲ್ಲಿ ಸ್ವರ್ಗದ ಮೋಹ ಮತ್ತು ನರಕದ ಭೀತಿ ಕೂಡ ಒಂದು. ಈ ಮೋಹ ಮಾನವನ ಬೌದ್ಧಿಕ ಹಾಗೂ ಮಾನಸಿಕ ವಿಕಾಸಕ್ಕೆ ಮಾರಕ. ಅದನ್ನು ಕಂಡಾಬಟ್ಟೆ ಖಂಡಿಸುತ್ತಾನೆ ಬಸವಣ್ಣ. ನಮ್ಮ ಜನರಿಗಿರುವ ಸ್ವರ್ಗದ ಭ್ರಮೆ ಕಂಡು ಕೆಂಡಾಮಂಡಲವಾಗುತ್ತಾನೆ. 'ಸತ್ತು ಬೆರೆಸಿಹೆನೆಂದರೆ ಕಬ್ಬಿನ ತುದಿಯ ಮೆಲಿದಂತೆ!' ಎಂಬ ಸೊಗಸಾದ ಪರಿಣಾಮಕಾರಿ ಉಪಮಾನದ ಮೂಲಕ ಸ್ವರ್ಗದ ಮೋಹಿಗಳಿಗೆ ವಿವೇಕ ಹೇಳುತ್ತಾನೆ. ಅದರರ್ಥ ಸತ್ತಮೇಲೆ ಅಲ್ಲೆಲ್ಲೊ ತನಗೊಮದು ಪೀಠ ಮೀಸಲಿದೆ ಅದಕ್ಕಾಗಿ ನನ್ನೆಲ್ಲ ಶ್ರಮಸಾಧನೆ. ಭೂಮಿ ನಶ್ವರ, ಸ್ವರ್ಗ ಶಾಶ್ವತ ಎಂದು ಕಲ್ಪನಾ ಸ್ವರ್ಗಕ್ಕೆ ಕೈಚಾಚಿ, ಐಹಿತ ಸುಖಭೋಗ ಕರ್ತವ್ಯಗಳನ್ನೇ ಮರೆಯುವುದು ಬೇಡ. ಸ್ವರ್ಗ ಎಂಬುದು ಒಂದು ಭಾವನಾ ಪ್ರಪಂಚ. ಅದನ್ನೇ ನಂಬಿದರೆ, ಕಬ್ಬಿನ ತುದಿಯನ್ನು ಮೆದ್ದಂತಾಗುತ್ತದೆ ಎಂದಿದ್ದಾನೆ. ಕಬ್ಬಿನ ತುದಿ ಉಪ್ಪುಪ್ಪು

ಅಥವಾ ಸೌಳುಸೌಳು. ಅದನ್ನು ಯಾರೂ ಜಗಿಯುವುದಿಲ್ಲ. ಕಬ್ಬಿನ ಸಾರ ಇರುವುದು ಅದರ ಬುಡದಲ್ಲಿ, ಕಾಂಡದಲ್ಲಿ ತುದಿಯಲ್ಲಲ್ಲ. ಅದೇ ರೀತಿ ಜೀವನದ ಸಾರಸರ್ವಸ್ವ ಇರುವುದು ಇಹದಲ್ಲಿ ಅರ್ಥವಿಲ್ಲದ ಭಾವನಾ ಸ್ವರ್ಗದಲ್ಲಲ್ಲ. ಅರ್ಥವಿಲ್ಲದ್ದಕ್ಕೆ ಭ್ರಮಿಸಿ ಬಂಗಾರದ ಬಾಳನ್ನು ಹಾಳು ಮಾಡಿಕೊಳ್ಳಬೇಡಿ. ಭೂಮಿಗಿಂತ ಸ್ವರ್ಗ ಬೇರೊಂದಿಲ್ಲ. ಇಹವೇ ಸ್ವಗ! ಇಹವೇ ಸ್ವರ್ಗ ಎಂದು ತಿಳಿಯಹೇಳಿದ. ಕೆಲವರು ಆಕಾಶದ ಕಡೆಗೆ ತೋರ್‌ಬೆರಳು ಮಾಡಿ 'ಅದು ಮನೆ, ಇದು ಸುಮ್ಮನೆ' ಎಂದರೆ ಬಸವಣ್ಣ 'ಇದೇ ಮನೆ, ಅದು ಸುಮ್ಮಸುಮ್ಮನೆ!' ಎಂದು ಗೇಳಿಮಾಡಿದ.

ಅಣ್ಣನ ಈ ಜೀವನ ಸಿದ್ಧಾಂತಕ್ಕೂ ರಬಿಯಾ ಬಾಸರಿಯ ಕಾವ್ಯತತ್ತ್ವಕ್ಕೂ ಸಾಮ್ಯತೆ ಇದೆ. ಅಣ್ಣನ ಅನುಯಾಯಿಯಾದ ಅಕ್ಕನೂ ಇದೇ ಅಭಿಮತ ಉಳ್ಳವಳಾಗಿದ್ದಳು ಇಹದಲ್ಲಿದ್ದುಕೊಂಡೇ ಪರವನ್ನು ಸಾಧಿಸಿದ ಪುಣ್ಯವನಿತೆ.

ಈ ಕೆಲವು ನಿದರ್ಶನಗಳನ್ನಿತ್ತ ಉದ್ದೇಶ ಅಕ್ಕನ ಜೀವನ ಧ್ಯೇಯ ದರ್ಶನಗಳು ಅನ್ಯಥಾ ದುರ್ಲಭ ಎಂಬುದರ ನೆನಪು ಮಾಡಿಕೊಡುವುದು ಮತ್ತು ಪುರುಷರ ವಿರುದ್ಧ ಬಂಡೆದ್ದ ಸ್ತ್ರೀ ಶಕ್ತಿಯನ್ನು ಸಬಲೀಕರಣಗೊಳಿಸಿದ ನೂರಾರು ಮಹಿಳಾ ಮಣಿಯರ ಪ್ರೇರಕ ಶಕ್ತಿಯಾದ ಸ್ತ್ರೀ ಸಂಘಟನೆಗೆ ಓಂಕಾರ ಬರೆದ ವೀರವನಿತೆ ಅಕ್ಕಮಹಾದೇವಿ ಎಂಬುದನ್ನು ಸಾಬೀತುಪಡಿಸುವುದು. ಅಷ್ಟೇ ಅಲ್ಲದೆ ಅವಳಂತಹ ಸ್ತ್ರೀ ವಿಮೋಚನಾ ಹೋರಾಟಗಾರ್ತಿ, ಅಧ್ಯಾತ್ಮಕ ಉನ್ನತ ಶಿಖರಿ, ಭಕ್ತಿಯ ಭಾವುಕಿ, ಕಾವ್ಯಾಭಿವ್ಯಕ್ತಿಯ ಪ್ರತಿಭಾನ್ವಿತ ವ್ಯಕ್ತಿ ಬೇರೊಬ್ಬಳಿಲ್ಲ. ಅವಳ ವ್ಯಕ್ತಿತ್ವ ಭೂಮಿ, ಆಕಾಶವನ್ನು ತುಂಬಿ ನಿಲ್ಲುವಂಥದು.

॥ ೩ ॥

ಅಕ್ಕನಿಂದ ಆರಂಭವಾದ ಸ್ತ್ರೀ ಸ್ವಾತಂತ್ರ್ಯ (Feminism) ಹಾಗೂ ಅವಳ ಹಕ್ಕು, ಅಧಿಕಾರ ಹೋರಾಟಗಳು (rights and empowerment) ಕಲ್ಯಾಣದ ಮಹಾಕ್ರಾಂತಿಯ ನಂತರ ಕೆಲಕಾಲ ಸ್ಥಗಿತಗೊಂಡುದುಂಟು. ಅಕ್ಕನ ನಂತರ ಜಾಗತಿಕ ರಂಗದಲ್ಲಿ ಯಾವ ಮಹಿಳೆಯೂ ಸ್ತ್ರೀಪರ ಹೋರಾಟದ ಹೊಣೆ ಹೊರಲಿಲ್ಲ. ಹಸಿದವರೇ ತಮ್ಮ ಹಸಿವಿಯನ್ನು ಇಂಗಿಸಿಕೊಳ್ಳಬೇಕಾದ್ದರಿಂದ ಪಾಶ್ಚಾತ್ಯರಲ್ಲಿ, ಅದರಲ್ಲೂ ಮುಖ್ಯವಾಗಿ ಉತ್ತರ ಅಮೆರಿಕೆಯಲ್ಲಿ ಹದಿನೆಂಟನೆಯ ಶತಮಾನದಲ್ಲಿ ಸ್ತ್ರೀ ಸಂವೇದನೆ ಮತ್ತೆ ಜಾಗ್ರತವಾಯಿತು. ಅಮೆರಿಕೆಯ ದ್ವಿತೀಯ ಅಧ್ಯಕ್ಷ ಜಾನ್ ಆಡಮ್ಸ್‌ನ ಪತ್ನಿಯೂ ಆರನೆಯ ಅಧ್ಯಕ್ಷ ಜಾನ್ ಕ್ವಿನ್ಸಿ, ಆಡಮ್ಸ್‌ನ ತಾಯಿಯೂ ಆದ ಅಬಿಗೇಲ್ ಆಡಮ್ಸ್ ೧೭೭೬ರಲ್ಲಿ 'ಪುರುಷನ ಮರೆಯಲ್ಲಿ ಮಹಿಳೆ ರಾಜ್ಯವಾಳಬೇಕೇ? ಭಗವಂತನ ಸೃಷ್ಟಿಯಲ್ಲಿ ಎಲ್ಲರೂ ಸಮಾನರು ಅಂದ ಮೇಲೆ ಮಹಿಳೆ ಪುರುಷನಿಗೆ ಸರ್ವವಿಧದಲ್ಲೂ ಸಮಾನಸ್ಕಂಧಳಲ್ಲವೇ? ಭೋಗದಲ್ಲಿ ಸಮಪಾಲು ಬೇಡುವ ನೀವು (ಗಂಡಸರು) ಅವಳಿಗೆ ರಾಜಕೀಯದಲ್ಲಿ ಸಮಪಾಲು ಕೊಡಿ. ಕಡೆಯಪಕ್ಷ ಅವಳಿಗೆ ಮತ ನೀಡುವ ಹಕ್ಕಾದರೂ ಬೇಡವೆ?" ಎಂದು ಪ್ರಶ್ನಿಸಿದಳು. ತನ್ನ ಆಕ್ರೋಶವನ್ನು ಒಂದು ಕವನ ರೂಪದಲ್ಲಿ ಅಭಿವ್ಯಕ್ತಿಸಿ, ಬಾಸ್ಟನ್ ಪತ್ರಿಕೆಯೊಂದರಲ್ಲಿ ಪ್ರಕಟಿಸಿದಳು. ತಲೆ, ಪಾದ, ಹೃದಯ ಯಾವುದನ್ನೂ ಪುರುಷನಿಂದ ತೆಗೆದು ಮಹಿಳೆಗಿಟ್ಟಿಲ್ಲ ದೇವರು, ಅವಳು ಜೀವನದಲ್ಲಿ ಅರ್ಧಾಧಿಕಾರವುಳ್ಳವಳು.೩ ಎಂದು ಅಭಿವ್ಯಕ್ತಿಸಿದ್ದಾಳೆ ಆ ಕವಿತೆಯಲ್ಲಿ. ಪ್ರತಿಯೊಬ್ಬ ಪುರುಷನ ಪ್ರಗತಿಯ ಹಿನ್ನೆಲೆಯಲ್ಲಿ ಓರ್ವ ಮಹಿಳೆ ಇದ್ದಾಳೆ ಎಂಬ ಜಾಣ್ನುಡಿಗೆ ನಿಂತ ನಿದರ್ಶನವೋ ಎಂಬಂತಿದ್ದರೂ ಅಬಿಗೇಲ್ ಆಡಮ್ಸ್ ತುಂಬು

---

*೩

God took not woman from Man's Head
That she should domineer,
Not yet out of his feet that she
shold all hisBurden bear,
But never his Heart God did her take,
A Rib out of his side,
To shew that she is loving Mate,
And half-self should abide.

Abigall Adams, An American Woman, P.12.

Edited by : Oscar Handlin (New York, 1980)

ಸ್ವಾಭಿಮಾನಿ, ಸ್ತ್ರೀವಾದಿ ನೆಲೆಯಲ್ಲಿ ನಿಂತು ಮಹಿಳೆಯ ಪರವಾಗಿ ವಾದಿಸಿದರು. ಹಕ್ಕಿಗಾಗಿ ಹೋರಾಡಿದವಳು ಕೂಡ. ಆಕೆಯ ಮುಂದುವರಿದ ಅಭಿಪ್ರಾಯ ಒಂದೆಡೆ ಹೀಗೆ ಹೇಳುತ್ತದೆ :

I will never consent to have our sex considered in an inferior point of light. Let each planet shina in their own orbit. God and natrure designed it so. If a man is Lord, woman is LORDESS- that is what I contend for and if a woman does not hold the Reigns of Government, I see no reason for her not judging how they are conducted. 4

ಎಂದು.

ಪುರುಷ ಸೂರ್ಯನಂತೆ ಸ್ವಪ್ರಕಾಶಿತ ವಸ್ತುವೇನಲ್ಲ. ಮಹಿಳೆ ಒಮದು ಗ್ರಹವಾದರೆ, ಪುರುಷನೂ ಒಂದು ಗ್ರಹ. ಭಗವಂತನ ಅನುಗ್ರಹ ಪ್ರಭೆಯಿಂದ ಬೆಳಗುವ ಗ್ರಹ ಎರಡೂ ತಮ್ಮ ತಮ್ಮ ಪಥದಲ್ಲಿ ಬೆಳಗಲಿ. ಪುರುಷ ಒಡೆಯನೆನಿಸದರೆ ಮಹಿಳೆಯೂ ಅಷ್ಟೆ ಹೊಣೆ ಹೊತ್ತ ಒಡತಿ. ಅವನಿಗಿದ್ದಂತೆ ಇವಳಿಗೂ ಹಕ್ಕು ಅಧಿಕಾರಗಳುಂಟು. ಆಡಳಿತ ಸೂತ್ರ ಹಿಡಿಯುವ ಅರ್ಹತೆಯೂ ಉಂಟು ಎಂದು ಮಹಿಳೆಯ ಸಾಮರ್ಥ್ಯದ ಬಗೆಗೆ ಸ್ಪಷ್ಟನೆ ನೀಡಿದ್ದಾಳೆ.

ಶ್ವೇತಭವನದ ಈ ಘೋಷಣೆ ಪಾಶ್ಚಾತ್ಯ ಪಶುಗಳ ಕಿವಿ ತಮ್ಮಟೆ ತಟ್ಟಲು ಸುಮಾರು ಒಂದು ನೂರು ವರ್ಷಗಳೇ ಬೇಕಾದುವು. ಶತಮಾನದ ಸುದೀರ್ಘ ನಿದ್ರೆಯಿಂದ ಎಚ್ಚೆತ್ತವಳು ಮಹಿಳೆಯಲ್ಲ, 'ಪುರುಷ ಸರಸ್ವತಿ' ನಾವೆಯ ಹೆನ್ರಿಕ್ ಯೋಹಾನ್ ಇಬ್ಸನ್ (೧೮೨೮ ಮಾರ್ಚ್ ೨೦ ೧೯೦೬ ಮೇ ೨೩) ಎಂಬ ಶ್ರೇಷ್ಠ ನಾಟಕಕಾರ೫ ಇವನೊಬ್ಬ ಕ್ರಾಂತಿಕಾರಿ ಲೇಖಕ, ಸಮಾಜ ಸುಧಾರಕ, ಸಾಮಾಜಿಕ ಪರಿವರ್ತನೆಯ ಹಿರಿಯ ಕನಸು ಕಂಡವನು. ಇವನ ಕನಸುಗಳಲ್ಲಿ ಸ್ತ್ರೀ ಪರ ಚಿಂತನೆಯದೇ ಸಿಂಹಪಾಲು. ಸ್ತ್ರೀ ಶೋಷಣೆಯ ವಿರುದ್ಧ ತನ್ನ ಕಾಲದ ಯುರೋಪಿನ ಪುರುಷ ಶಕ್ತಿಯ ವಿರುದ್ಧ ಹರಿಹಾಯ್ದು, ಪಿಲ್ಲರ್ಸ್ ಆಫ್ ಸೊಸೈಟಿ (೧೮೭೭), 'ಎ ಡಾಲ್ಸ್ ಹೌಸ್' (೧೮೭೯), 'ಘೋಸ್ಟ್ಸ್' (೧೮೮೧) ಮೊದಲಾದ ನಾಟಕಗಳ

---

೪. Ibid, P. ೧೪೩.

೫. ಜಗತ್ಪ್ರಸಿದ್ಧ ರುದ್ರನಾಟಕಕಾರರಾದ (Tragedians) ಗ್ರೀಸಿನ ಈಸ್ಕೈಲಸ್, ಸೊಫೋಕ್ಲಿಸ್ ಮತ್ತು ಯೂರಿಪಿಡಿಸ್ – ಇವರು ಬಳಸಿ ಬೆಳೆಸಿದ ರುದ್ರವಸ್ತು ವಿನ್ಯಾಸವು (Tragic Element) ಸೆನೆಕ ಎಂಬ ಭಾಷಾಂತರಕಾರನ ಮೂಲಕ ಲ್ಯಾಟಿನ್ ಭಾಷೆಗೆ ಅನುವಾದಗೊಂಡು ಶೇಕ್ಸ್‌ಪಿಯರ್‌ನಲ್ಲಿ ಹೊಸ ಚೈತನ್ಯ ಪಡೆಯಿತಷ್ಟೆ. ಅವನಾದ ಮೇಲೆ ಬಂದ ಬಹುದೊಡ್ಡ ರುದ್ರನಾಟಕಕಾರನೆಂದರೆ ಹೆನ್ರಿಕ್ ಇಬ್ಸನ್.

ಮೂಲಕ ಹೆಣ್ಣಿಗಾಗುತ್ತಿದ್ದ ಅನ್ಯಾಯ, ಅನಾಹುತಗಳನ್ನು ಬಯಲಿಗೆಳೆದು ಬಹುದೊಡ್ಡ ಸಾಮಾಜಿಕ ಕ್ರಾಂತಿಯನ್ನು ಹುಟ್ಟು ಹಾಕಿದ. ಅಪ್ಪನಿಂದ ಬಳುವಳಿಯಾಗಿ ಪಡೆದ ಲೈಂಗಿಕ ರೋಗದಿಂದ ಓರ್ವ ದೊಡ್ಡ ಕಲಾವಿದನ ಬದುಕನ್ನು ಹಾಳುಗೈದ ಗಂಡನನ್ನು ಅವನ ವ್ಯಭಿಚಾರವೇ ಮೊದಲಾದ ದುರ್ನಡತೆಗಳಿಂದ ತಡೆಯಲು ಅಶಕ್ತಳಾದ ಹೆಂಡತಿಯ ನಿಸ್ಸಹಾಯಕ ಸ್ಥಿತಿಯನ್ನು ಹೃದಯ ವಿದ್ರಾವಕವಾಗಿ ಚಿತ್ರಿಸಿದ್ದಾನೆ. ದುರಂತವಸ್ತು ವಿನ್ಯಾಸವುಳ್ಳ ಈ ನಾಟಕ ಅಂದಿನ ಸಮಾಜದ ಕಣ್ಣು ತೆರೆಯಿಸಿತು. ಅದೇ ರೀತಿ 'ಎ ಡಾಲ್ಸ್ ಹೌಸ್' ನ ನಾಯಕಿ, ನೋರಾ ಹೆಲ್ಮರ್ ತನ್ನ ಗಂಡನ ಎಲ್ಲ ಹಿಂಸೆಗಳನ್ನೂ ಸಹಿಸಿ, ಕಡೆಗೆ ಸಿಡಿದೆದ್ದು, ಬಾಗಿಲ ಕದವನ್ನು 'ಭಡ್' ಎಂದು ಬೀಸಿ ಮನೆ ಬಿಟ್ಟು ಹೊರಟುಹೋಗುತ್ತಾಳೆ. ಇಬ್ಸನನ ಈ ಕ್ರಾಂತಿಕಾರಕ ಮನೋಧಮವನ್ನು ಜಗಜ್ಜಾಹೀರು ಮಾಡಿದವರು ಅಂದಿನ ಸುಪ್ರಸಿದ್ಧ ವಿಮರ್ಶಕರು. ನೋರಾ ಬೀಸಿದಾಗ ಆದ ಬಾಗಿಲ ಶಬ್ದ ಇಡೀ ಪಾಶ್ಚಾತ್ಯ ರಾಷ್ಟ್ರದಲ್ಲೆಲ್ಲಾ ಪ್ರತಿಧ್ವನಿಸಿತು. (The Thud of the door was reverberated in the whole western wordl) ಎಂದಿದ್ದಾರೆ. ಇವನ ಚಿಂತನಪರ ನಾಟಕಗಳಿಂದಾಗಿ ನಾರ್ವೇಜಿಯನ್ ಭಾಷೆಗೆ ಆತ್ಮವಿಶ್ವಾಸ ಮೂಡಿದ್ದುಂಟು.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ – ಬಾಗಿಲ ಕದವನ್ನು ಬೀಸಿ ಹೊರಟದ್ದು ಕಲಾರಂಗದ ಪಾತ್ರದಾಚರಣೆ. ಆದರೆ ಅಕ್ಕನದು ವಾಸ್ತವಿಕ ಜಗತ್ತಿನಲ್ಲಿ ನಡೆದ ನೈಜ ಘಟನೆ. ಅದು ಕಲ್ಪನೆ, ಇದು ಇತಿಹಾಸ.

ಇಬ್ಸನ ನಂತರ ಸ್ತ್ರೀಪರವಾಗಿ ಸ್ಪಂದಿಸಿದ ಮತ್ತೊಬ್ಬ ಮಹಾನ್ ನಾಟಕಕಾರ ಐರ್ಲೆಂಡಿನ ಜಾಜ್ ಬರ್ನಾರ್ಡ್ ಷಾ (೨೬ ಜುಲೈ ೧೯೫೬–೩ ನವೆಂಬರ್ ೧೯೫೦) ಇಬ್ಸನ್‌ನಿಂದ ಪ್ರಭಾವಿತನಾದ ಈತ ಅವನಂಥವೇ ಜೀವಂತ ಪಾತ್ರಳನು ಸೃಷ್ಟಿಸಿ ನಾಟಕಗಳನ್ನು ಬರೆದ. ಅವುಗಳಲ್ಲಿ ತುಂಬು ಜನಪ್ರಿಯತೆ ಗಳಿಸಿದ್ದು ' ಸೈಂಟ್ ಜೋನ್' (೧೯೨೩) ಫ್ರಾನ್ಸಿನ ಮುಕ್ತಿಗಾಗಿ ಸೇನಾನಿಯಂತೆ ವೇಷಧರಿಸಿ, ಹೋರಾಡಿ, ಅರೆ ಸ್ವಾತಂತ್ರ್ಯ ತಂದುಕೊಟ್ಟು, ಕಡೆಗೆ ಕುಹಿಕಿಗಳ ಕೈತ್ವಕ್ಕೆ ಸಿಕ್ಕು ನಡುಬೀದಿಯಲ್ಲಿ ಅಗ್ನಿಗೆ ಆಹುತಿಯಾದ ಅರ್ಕಿನ ಜೋನಳ ದುರಂತ ವಿಶ್ರಾಂತ ದಿವ್ಯಜೀವನವೇ ಈ ನಾಟಕದ ಕಥಾವಸ್ತು. ಬೆಂದು ಬೂದಿಯಾದದ್ದು ಜೋನಳ ದೇಹ ಮಾತ್ರ. ಆದರೆ ಅವಳು ಆತ್ಮರೂಪದಲ್ಲಿ ಬಂದು ನಾನು ಮತ್ತೆ ಮಾನವಳಾಗಿ ಫ್ರಾನ್ಸ್ ದೇಶದಲ್ಲಿ ಹುಟ್ಟಿ ಬರಲು ಬಯಸುತ್ತೇನೆ. ನೀವು ಸ್ವಾಗತಿಸುತ್ತೀರಾ?! ಎಂದು ಪ್ರಶ್ನಿಸಿದಾಗ, ಈ ಮೂಢ ಹಾಗೂ ಹೇಡಿ ಜನತೆ ಮಹಾತ್ಮರನ್ನು ಸ್ವಾಗತಿಸುವ ಬಗೆಗೆ ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತದೆ. ಆಗ ಅವಳಾತ್ಮ ನುಡಿಯುತ್ತದೆ;

O Lord Thou hast made this beautiful earth;
When will it be ready to receive Thy Saints?
How long, O ! Lord? How long!

ಓ ದೇವರೇ, ಸರ್ವಾಂಗ ಸುಂದರವಾದ ಈ ಜಗತ್ತನ್ನೇನೋ ಈ ಜಗತ್ತನ್ನೇನೋ ನೀನು ಸೃಷ್ಟಿಸಿದೆ. ಆದರೆ ನೀನು ಕಳುಹಿಸಿದ ಸಾಧುಸಂತರನ್ನು ಸ್ವಾಗತಿಸುವ ಚೈತನ್ಯವನ್ನು ಈ ಜಗತ್ತಿಗೆ ಎಂದು ಕೊಡುತ್ತೀಯೋ ತಮದೆ ಎಂದು ಕೊಡುತ್ತೀಯೋ ! ಎಂದು.

ಈ ಶ್ರೇಷ್ಠ ಧ್ಯೇಯವಾಕ್ಯದೊಂದಿಗೆ ನಾಟಕ ಮುಗಿಯುತ್ತದೆ.

ಇದು ಮಹಾಕಾವ್ಯದಲ್ಲಿ ಬರುವ ಮಹಾವಾಕ್ಯ. ಇಂದಿಗು ನಾವು ನಮ್ಮಲ್ಲಿಗ ಬಂದ ದೇವಮಾನವರನ್ನು ಸ್ವಾಗತಿಸುವ ಚೈತನ್ಯ ಪಡೆದಿಲ್ಲ. ಸಾಕ್ರೆಟೀಸ್ ಮತ್ತೆ ಬಮದರೆ ಹೆಮ್ಲಾಕ್ ತುಂಬಿದ ಬಟ್ಟಲು ಕೊಡುತ್ತೇವೆ, ಯೇಸುನಾಥನ್ನು ಶಿಲುಬೆಗೇರಿಸುತ್ತೇವೆ. ಪೈಗಂಬರ್ ಮೊಹಮ್ಮದರನ್ನು ಕಲ್ಲು ಬೀರಿ ಮೆಕ್ಕಾದಿಂದ ಮದೀನಾಕ್ಕೆ ಓಡಿಸುತ್ತೇವೆ. ಗಾಂಧೀಜಿಗೂ ಗುಂಡಿಡುತ್ತೇವೆ. ಸೀತೆಯನ್ನೇ ಸೂಳೆ ಎಂದ ಜನ ನಾವು ಮಹಾದೇವಿಯಕ್ಕನ ಉಟ್ಟ ಸೀರೆಯ ಕಿತ್ತು ಬಟ್ಟ ಬಯಲಿಗೆ ಅಟ್ಟಿ ಚಪ್ಪಾಳೆ ತಟ್ಟಿ ನಕ್ಕ ಜನ ನಾವು. ನಮ್ಮಲ್ಲೆಲ್ಲಿ ಬರಬೇಕು ಶ್ರೇಷ್ಠ ತಮ ಶಕ್ತಿಗಳನ್ನು ಸ್ವಾಗತಿಸುವ ಚೈತನ್ಯ !

ಈ ನಿದರ್ಶನಗಳ ಹಿನ್ನೆಲೆಯಲ್ಲಿ ನಾವು ಗುರುತಿಸಬೇಕಾದದ್ದು ಸ್ತ್ರೀಸಂವೇದನೆಯ ಸೂಕ್ಷ್ಮಗಳನ್ನು, ಅವು ದೃಶ್ಯಕಾವ್ಯವಾಗಿ ರಂಗಮಂಚವನ್ನೇರಿ ಎಚ್ಚರಿಸಿದುದನ್ನು ಎಲ್ಲಕ್ಕೂ ಮಿಗಿಲಾಗಿ ಅಕ್ಕನ ಅಸಾಧಾರಣ ವ್ಯಕ್ತಿತ್ವವನ್ನು.

॥ ೪ ॥

ಸಾಮಾಜಿಕ ಪರಿವರ್ತನೆಯ ಸಂದರ್ಭದಲ್ಲಿ ಮಹಿಳೆಯರೂ ಒಂದು ಮಹತ್ವದ ಪಾತ್ರ ಇದೆ ಎಂಬುದನ್ನು ಅಕ್ಕ ಈಗಾಗಲೇ ಸಾಬೀತುಪಡಿಸಿ ತೋರಿಸಿದ್ದಾಳೆ. ಮುಂದಿನ ಕ್ರಾಂತಿ ಕನ್ಯೆಯರಿಗೆ ಮಾರ್ಗದರ್ಶಕಳೂ ಆಗಿದ್ದಾಳೆ. ಅವಳಾದ ಮೇಲೆ ಅಂದರೆ ಹನ್ನೆರಡನೆಯ ಶತಮಾನದ ನಂತರ ಸ್ತ್ರೀ ವಿಮೋಚನೆ, ಸ್ತ್ರೀ ಸಮಾನತೆ ಕುರಿತ ನೈಜಾರ್ಥದ ಚಳವಳಿ ಆರಂಭವಾದದ್ದು ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಎನ್ನಬಹುದು. ಇದರ ಸೆಲೆ ಪುಟಿದೆದ್ದು ಉತ್ತರ ಅಮೆರಿಕ ಮತ್ತು ಫ್ರಾನ್ಸ್ ದೇಶಗಳಲ್ಲಿ ಈವರೆಗೆ ನಲವತ್ತಮೂರು ಮಂದಿ ಅಧ್ಯಕ್ಷರಾದರು. ಅವರಲ್ಲಿ ಒಬ್ಬಳಾದರೂ ಮಹಿಳೆ ಇದ್ದಾಳೆಯೇ? ಎಂಬ ಪ್ರಶ್ನೆಗೆ ವಿಚಾರಶೀಲ, ಪ್ರಗತಿಪರ ರಾಷ್ಟ್ರವಾದ ಉತ್ತರ ಅಮೆರಿಕಯ ಉತ್ತರ ಇಲ್ಲವಾದರೂ, ಸುಮಾರು ಇನ್ನೂರು ವರ್ಷಗಳ ಹಿಂದೆಯೇ ಅಮೆರಿಕೆಯ ಅಧ್ಯಕ್ಷನೊಬ್ಬನ ಪತ್ನಿಯೂ ಮತ್ತೊಬ್ಬನ ಮಾತೆಯೂ ಆಗಿದ್ದ ಅಬಿಗೇಲ್ ಆಂಡಮ್ಸಳ ಗುಡುಗನ್ನು ಕಿವುಡುಗೇಳಿದ್ದರೂ ಅಮೆರಿಕೆ ಈಗ ನವ ಜಾಗೃತಿಯ ಸೂತ್ರ ಹಿಡಿದಿದೆ. ಅಷ್ಟೇ ಅಲ್ಲ, ಹೆಣ್ಣಿನ ಹಕ್ಕಿನ ಬಗೆಗೆ ಅಮೆರಿಕೆಯಷ್ಟು ತಲೆಕೆಡಿಸಿಕೊಂಡ ರಾಷ್ಟ್ರ ಬೇರೊಂದಿಲ್ಲ ಎನ್ನುವಷ್ಟು ಮುಂದೆ ನಡೆದಿದೆ. ಫ್ರಾನ್ಸ್ ಅದರ ಜೊತೆಗೂಡಿದೆ. ಇಪ್ಪತ್ತನೆಯ ಶತಮಾನದಲ್ಲಿ ಪುರುಷರ ಗುಂಪಿನಲ್ಲಿ ಮಹಿಳೆ ಕಳೆದು ಹೋಗಿದ್ದಾಳೆ. ಅವಳನ್ನು ಮತ್ತೆ ಹುಡುಕಿ ತರುವಲ್ಲಿ ಸ್ತ್ರೀ ಪುರುಷರೆಲ್ಲರೂ ಶ್ರಮವಹಿಸಬೇಕೆಂದು ಕರೆಕೊಟ್ಟ ಅಂದಿನ ಸ್ತ್ರೀ ಚಳವಳಿಯ ಮುಖ್ಯ ವಕ್ತಾರರೆಂದರೆ ಸಿಮೋನ್ ದ ಬೋವಾ, ಜೂಲಿಯ ಕ್ರಿಸ್ತೇವ್ ಮತ್ತು ಕ್ರೇಟ್ ಮಿಲೆಟ್ ಎಂಬುವರು. ಇವರಿಂದ ಪ್ರಚೋದಿತವಾಗಿ ಜಾಗತಿಕ ವಲಯದಲ್ಲಿ ಉಸಿರಾಡುತ್ತಿರುವ ಸ್ತ್ರೀಪರ ಚಳವಳಿ ಬುಸುಗುಟ್ಟಿ ಕಾರ್ಯರೂಪಕ್ಕೆ ಬರುವಂತಾಯಿತು.

ಆಧುನಿಕ ಸ್ತ್ರೀ ಚಳವಳಿಯ ಮೂಲಭೂತ ತತ್ವಗಳನ್ನು ಮೊತ್ತ ಮೊದಲಿಗೆ ಫ್ರೆಂಚ್ ಚಿಂತಕಿ ಮತ್ತು ಸಾರ್ತನ್‌ನ ನಿಕಟವರ್ತಿ ಸಿಮೋನ್ ದ ಬೋವಾ (Simone de DBeauvior) ರಚಿಸಿದ "ದ್ವಿತೀಯ ಲಿಂಗ" (The Second Sex, 1949) ಗ್ರಂಥದಲ್ಲಿ ಕಾಣುತ್ತೇವೆ. ಬೋವಾ ಪ್ರಕಾರ ಪುರುಷ ತನ್ನನ್ನು ಮಾನವನೆಂದು ಗುರುತಿಸಿಕೊಳ್ಳುತ್ತಾನೆ; ಸ್ತ್ರೀ ತನ್ನನ್ನು ಸ್ತ್ರೀಯೆಂದೇ ಕರೆಸಿಕೊಳ್ಳುತ್ತಾಳೆ. ಎಂದರೆ ಸ್ತ್ರೀ, ಪುರುಷರ ನಡುವೆ ಇಂತಹ ಮೂಲಭೂತ ವ್ಯತ್ಯಾಸವಿದೆ. ಇತಿಹಾಸದ ಪ್ರಾರಂಭಿಕ ಘಟ್ಟದಿಂದಲೂ ಪುರುಷರ ಮಧ್ಯೆ ಹಂಚಿಹೋಗಿರುವ ಸ್ತ್ರೀಗೆ ಪ್ರತ್ಯೇಕ ಚರಿತ್ರೆಯಿಲ್ಲ, ಪ್ರತ್ಯೇಕ ಸಂಘಟನೆಯಿಲ್ಲ; ಪ್ರತ್ಯೇಕ ಅಸ್ತಿತ್ವವೂ ಇಲ್ಲ. ಇತಿಹಾಸದುದ್ದಕ್ಕೂ ಅವಳು ಪುರುಷನ ನೆರಳಾಗಿ ಬದುಕುತ್ತಾ ಬಂದಿದ್ದಾಳೆ. ಇಂತಹ ಅಸ್ತಿತ್ವವನ್ನು ಶಾಸಕರು, ದಾರ್ಶನಿಕರು, ಲೇಖಕರು ಮತ್ತು ವಿಜ್ಞಾನಿಗಲು "ಸ್ತ್ರೀಯ ಪರಾಧೀನ ಸ್ಥಿತಿ ದೈವಮಾನ್ಯವಾಗಿದೆ ಮತ್ತು ಈ ಪ್ರಪಂಚದಲ್ಲಿ ಉಪಯುಕ್ತವಾಗಿದೆ" ಎಂದು ಸಮರ್ಥಿಸುತ್ತಾ ಬಂದಿದ್ದಾರೆ. ಸ್ತ್ರೀ ತನಗಿಂತ ಕೀಳೆಂದು ಸಂಪೂರ್ಣ ನಂಬಿರುವ ಪುರುಷ ಅವಳನ್ನು ಕೀಳಾಗಿಯೇ ಕಾಣಲು ಎಲ್ಲಾ ಕ್ಷೇತ್ರಗಳಲ್ಲಿಯೂ ಬಗೆಬಗೆಯ ಸಮರ್ಥನೆಯನ್ನು ಶೋಧಿಸಿದ್ದಾನೆ. ಇಂತಹ ಸಮರ್ಥನೆಯನ್ನು ಬೋವಾ ಮುಖ್ಯವಾಗಿ ಜೈವಿಕ ಶಾಸ್ತ್ರ, ಅನುಭವ, ಸಂವಹನ (discourse), ಸುಪ್ರಪ್ರಜ್ಞೆ, ಸಾಮಾಜಿಕ ಆರ್ಥಿಕ ಸ್ಥಿತಿ. ಈ ಐದು ಕ್ಷೇತ್ರಗಳಲ್ಲಿ ಗುರುತಿಸುತ್ತಾಳೆ. (ಎಂದರೆ 'ಸ್ತ್ರೀ ಕೇವಲ ಸಂತಾನಕ್ರಿಯೆಗಾಗಿಯೇ ಇರುವ ಒಂದು ಗರ್ಭಕೋಶ' ವೆಂಬ ಜೈವಿಕ ವಾದ; ಸ್ತ್ರೀ ಮುಖ್ಯವಾಗಿ ಭಾವನಾಜೀವಿಯೆಂಬ ವಾದ ಇತ್ಯಾದಿ) ಇವುಗಳಲ್ಲಿ ಬೋವಾ ಮತ್ತು ಇತರ ಸ್ತ್ರೀ ಚಳವಳಿಕಾರರು 'ಸಂವಹನ' ವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸುತ್ತಾರೆ. ಡೇಲ್ ಸ್ಪೆಂಡರ್ ತನ್ನ "ಪುರುಷ ನಿರ್ಮಿತ ಭಾಷೆ" (Dale Spender, Man Made Language) ಗ್ರಂಥದಲ್ಲಿ ಸ್ತ್ರೀಯ ಪರಾಧೀನತೆಗೆ ಮುಖ್ಯ ಕಾರಣ ಪುರುಷ–ನಿರ್ಮಿತ ಹಾಗೂ ಪುರುಷ–ಪ್ರಧಾನ ಭಾಷೆ; ಯಾವುದು 'ಸತ್ಯ' ವೆನ್ನುವ ಪ್ರಶ್ನೆಗೆ ಉತ್ತರ 'ಯಾರು ಸಂವಹನವನ್ನು ನಿಯಂತ್ರಿಸುತ್ತಾರೆ' ಎಂಬುದನ್ನವಲಂಬಿಸಿದೆ ಎಂದು ವಾದಿಸಿದ್ದಾಳೆ.

ಸ್ತ್ರೀ ಚಳವಳಿಯ ಒಂದು ಮುಖ್ಯ ಮೈಲಿಗಲ್ಲೆಂದರೆ ೧೯೭೦ರಲ್ಲಿ ಹೊರಬಂದ ಕೇಟ್ ಮಿಲೆಟ್ ಬರೆದ "ಲೈಂಗಿಕ ರಾಜಕೀಯ" (Kate Millet, Sexual Politics) ಸ್ತ್ರೀಯರ ಪಾರತಂತ್ರ್ಯಕ್ಕೆ ಕಾರಣ ಪಿತೃಪ್ರಧಾನ ವ್ಯವಸ್ಥೆ ಎಂದು ವಾದಿಸುತ್ತ 'ರಾಜಕೀಯ' ಶಬ್ದವನ್ನೇ ಮಿಲೆಟ್ ನೂತನ ರೀತಿಯಲ್ಲಿ ಅರ್ಥೈಸುತ್ತಾಳೆ. "ಅಧಿಕಾರವನ್ನವಲಂಬಿಸಿದ ಒಂದು ಸಮೂಹಕ್ಕೂ ಮತ್ತು ಈ ಸಮೂಹದ ಮೇಲೆ ಹತೋಟಿ ಪಡೆದಿರುವ ಇನ್ನೊಂದು ಸಮೂಹಕ್ಕು ಇರುವ ಸಂಬಂಧವನ್ನು ನಾವು ರಾಜಕೀಯವೆಂದು ಕರೆಯಬಹುದು". ಈ ದೃಷ್ಟಿಯಿಂದ ಸ್ತ್ರೀಯರು ಪುರುಷರ ಲೈಂಗಿಕ ರಾಜಕೀಯಕ್ಕೆ ಬಲಿಯಾಗಿ ಅನಾದಿ ಕಾಲದಿಂದಲೂ ತಮ್ಮದೆಂದು ನಿರ್ಧರಿಸಲ್ಪಟ್ಟ ಬದುಕಿನ 'ಸಿದ್ಧಪಡಿಸಯಚ್ಚು' ಗಳಲ್ಲೇ ನರಳುತ್ತಿದ್ದಾರೆ. ಮಾನವಿಕ ಶಾಸ್ತ್ರಗಳಲ್ಲಿ ಬಳಸಲ್ಪಡುವ 'ಲಿಂಗಬೇಧ' ಮತ್ತು 'ಲಿಂಗ (Sex ಮತ್ತು Gender) ಇವುಗಳ ವ್ಯತ್ಯಾಸವನ್ನು ಒತ್ತಿ ಹೇಳುತ್ತಾ, 'ಲಿಂಗಭೇದ'ವು ಜೈವಿಕವಾಗಿ ನಿರ್ಧರಿಸಲ್ಪಟ್ಟಿದ್ದರೆ 'ಲಿಂಗಪ್ರಜ್ಞೆ'ಯನ್ನು ಶಿಕ್ಷಣ, ಸಂಸ್ಕೃತಿ, ಮತಧರ್ಮಗಳು ನಿರ್ಧರಿಸುತ್ತವೆಯೆಂದು ಮಿಲೆಟ್ ತೀರ್ಮಾನಿಸುತ್ತಾಳೆ. ಸಿಮೋನ್ ದ ಬೋವಾ, ಕೇಟ್ ಮಿಲೆಟ್, ಜರ್ಮೇನ್ ಗ್ರಿಯರ್ ಇವರುಗಳ ದೃಷ್ಟಿಯಲ್ಲಿ ಸ್ತ್ರೀಯರು ಸಮಾಜದ ಅಲ್ಪಸಂಖ್ಯಾತರಂತೆ, (ತಾವು ನಿಜವಾಗಿ ಅಲ್ಪಸಂಖ್ಯಾತರಲ್ಲದಿದ್ದರೂ) ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಶೋಷಣೆಗೊಳಗಾಗಿದ್ದಾರೆ; ಆದ್ದರಿಂದ ಇತರ ಅಲ್ಪಸಂಖ್ಯಾಥರಂತೆ ಸ್ತ್ರೀಯರೂ ಸಾಂಘಿಕವಾಗಿ ತಮ್ಮ ಹಕ್ಕುಬಾಧ್ಯತೆಗಳಿಗಾಗಿ ಹೋರಾಡಲೇಬೇಕು ಎಂಬ ಆಗ್ರಹ ಇದೆ. ೬

ಇತ್ತೀಚೆಗೆ ಅಮೆರಿಕೆಯ ಪೌರತ್ವ ಪಡೆದಿರುವ ಇರಾಕಿ ಮುಸ್ಲಿಂ ಮಹಿಳೆ ಮೆಹ್ನಾಜ್ ಅಫ್ಘಾಮಿ ಎಂಬ ಓರ್ವ ಕ್ರಿಯಾಶೀಲ ಮಹಿಳೆ ತನ್ನ (Faith and Freedom) ಎಂಬ ಗ್ರಂಥದಲ್ಲಿ ಮುಸ್ಲಿಂ ಮಹಿಳೆಗೆ ಆಗುತ್ತಿರುವ ಅನ್ಯಾಯಗಳ ಬಗೆಗೆ ಚರ್ಚಿಸಿದ್ದಾಳೆ. ಅವಳಿಗೆ ಹಾಕಿರುವ ಬುಕಾ ಕುರಿತು ಪ್ರಶ್ನಿಸಿದ್ದಾಳೆ. ಮತ್ತೆ –

"Unless a substantial number of women ina Community come to believe they have rights and demand to exercise them, rights remain an abstraction, Rights and Empowervment are – interconnected'7 ಎಂದು ಅಭಿಪ್ರಾಯಪಟ್ಟಿದ್ದಾಳೆ. ಅವಳು ಜಗತ್ತಿನಾದ್ಯಂತರಿವು ಮುಸ್ಲಿಂ

———

೬ (ಸಿ.ಆರ್. ರಾಮಚಂದ್ರನ್, ಸಾಹಿತ್ಯ ವಿಮರ್ಶೆ, ಪುಟ. ೭೪–೭೫ (೧೯೯೭)

೭ See, `In the shadow of inequality written Nighat Gandhi, THE HINDU, Sunday Magzine, dated October 19 2003.

ಮಹಿಳೆಯನ್ನು ಕುರಿತು ಹೇಳಿದ್ದಾದರೂ, ಎಲ್ಲ ಮತ ಸಂಪ್ರದಾಯಕ್ಕೆ ಸೇರಿದ ಮಹಿಳೆಯರಿಗೆ, ಅವರವರ ಹಕ್ಕುಬಾಧ್ಯತೆಗಳ ಬಗೆಗೆ ಎಚ್ಚರಿಕೆ ನೀಡಿದ್ದಾಳೆ. ಅವಳು ಮುಂದಿಟ್ಟಿರುವ ಸಮಸ್ಯೆ ಜಾಗತಿಕ ಸಮಸ್ತ ಮಹಿಳಾ ಸಮಸ್ಯೆಯಾಗಿದೆ. ಪ್ರತಿಯೊಬ್ಬ ಮಹಿಳೆಯೂ ತನ್ನ ಹಕ್ಕು ಬಾಧ್ಯತೆಗಳನ್ನು ಅರಿತು ನಡೆಯದಿದ್ದೆ, ಅವಳ ಶ್ರಮ ಬರಿಯ ಭ್ರಮೆ ಮಾತ್ರವಾಗುತ್ತದೆ ಎಂಬ ಕಟುಸತ್ಯದ ಕಡೆಗೆ ಗಮನ ಸೆಳೆದಿದ್ದಾರೆ. ಎಚ್ಚೆತ್ತ ಮುಸಲ್ಮಾನ ಪುರುಷರೂ ಪವಿತ್ರ ಕುರಾನಿನ ತತ್ತ್ವಗಳನ್ನು ನಿಜವಾದ ರೀತಿಯಲ್ಲಿ ಅರ್ಥೈಸಲೆತ್ನಿಸಿದ್ದಾಳೆ.೮

ಬಹುಶಃ ಮೆಹ್ನಾಜ್ ಅಫ್ಘಾನಿಯ ಪ್ರಭಾವವೇ ಇದ್ದಿರಬೇಕು. ಇಂಗ್ಲೆಂಡ್ ತುಸು ಎಚ್ಚರಗೊಂಡು ಓರ್ವ ಮಹಿಳೆಯನ್ನು ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಉಪಕುಲಪತಿಯಾಗಿ ಇತ್ತೀಚೆಗೆ ನೇಮಕ ಮಾಡಿದೆ. ಆ ಕುರಿತ ಪತ್ರಿಕೆ ವರದಿ ಹೀಗಿದೆ.

Cambridge gets first woman V.C

The Cambridge University today crossed and 800 year old barrier when Allison Richard took over as its ever woman vice-chanceller, signalling and end to the male monopoly of top posts at one of Britain's oldest universities.

The appointment of the leading anthropologist and former cambridge graduate was hailed as a sign of chaning times in a country where women still get lower wages than their male colleagues doing the same job and upward mobility among female academics is slow compared even to the Third World.9.

ಪ್ರೊ.ಎಲ್ಲಿಸನ್ ರಿಚರ್ಡ್ ಕೂಡ ಮೂವತ್ತು ವರ್ಷಗಳ ಕಾಲ ಉತ್ತರ ಅಮೆರಿಕೆಯಲ್ಲಿದ್ದು ಬಂದವಳು. ಯಾಲೆ ವಿಶ್ವವಿದ್ಯಾಲಯದಲ್ಲಿ ಕೆಲಕಾಲ ಸೇವೆ ಸಲ್ಲಿಸಿದವಳು. ಆಕೆಯ ಆಯ್ಕೆಯಿಂದಾಗಿ ಬ್ರಿಟನ್ ಈಗಿಗ ಹೆಣ್ಣಿನ ಬಗೆಗೆ ಕಣ್ತೆರೆಯುತ್ತಿರುವುದು ಮಹಿಳೆಯ ಅಭ್ಯುದಯದ ಶುಭಸೂಚನೆ.

ಮಹಿಳೆಯ ಉತ್ಥಾನ ಉದ್ಧಾರಗಳು ಮಹಿಳೆಯಿಂದಲೇ ಆಗಬೇಕು. ಅನ್ಯರಿಂದ ಅದು ಸಾಧ್ಯವಿಲ್ಲ. ಅನ್ಯರು ಅಂದರೆ ಪುರುಷರು. ಸ್ತ್ರೀವಾದವೆಂದರೆ ಮಹಿಳೆ ತನ್ನನ್ನು ತಾನು ತಿಳಿದುಕೊಳ್ಳುವುದು (Self awareness). ನಾನು ಯಾರು? ನನ್ನ ಶಕ್ತಿ ಎಷ್ಟು? ಎಂಬುದನ್ನರಿಯುವುದು. ಇಪ್ಪತ್ತನೆಯ ಶತಮಾನದಲ್ಲಿ ಕಮ್ಯುನಿಸಂ

—

8 Ibid.
9. The Hindu, Thursady October 2, 2003

ಕಮ್ಯುನಿಸಂ ಪ್ರಜಾಪ್ರಭುತ್ವ ಮತ್ತು ಸ್ತ್ರೀವಾದಗಳು ಭೂಗಿಲೆದ್ದುವು. ಆದರೆ ಕಮ್ಯುನಿಸಂ ಸತ್ತುಹೋಯಿತು. ಸ್ತ್ರೀವಾದ ಮೊಳಕೆ ಬರಲೇಬಲ್ಲ. ಪ್ರಜಾಪ್ರಭುತ್ವ ಬೇತಾಳವಾಗಿ ಬೆಳದು ತನ್ನ ದುರ್ಲಾಬ ನಡೆಯುತ್ತಿದೆ.ಇದನ್ನು ತಿಳಿದು ಹೆಣ್ಣು ಎಚ್ಚೆತ್ತುಕೊಳ್ಳಬೇಕಾದ ಕಾಲ ಸನ್ನಿಹಿತವಾಗಿದೆ ಎಂಬು ಕೂಗು ಕೇಳಿಬರುತ್ತಿದೆ. ಅವಳ ಉದ್ಧಾರಕ್ಕೆ ಪುರುಷರು ಅಷ್ಟಾಗಿ ಮುಂದೆ ಬರುವುದಿಲ್ಲ. ಹೆಣ್ಣು ಹೊಸ್ತಿಲು ದಾಟಿದರೆ ತಾನೆಲ್ಲಿ ಸೌಟು ಹಿಡಿಯಬೇಕಾಗುತ್ತದೋ ಎಂಬ ಭೀತಿ ಆ ಪುರುಷ ಸಂದೋಹಕ್ಕೆ, ಪುರುಷರ ಮಾತು ಅಂತಿರಲಿ ಸ್ತ್ರೀಯರೇ ಸ್ತ್ರೀ ವಿಮೋಚನೆಯನ್ನು ಅನುಮೋದಿಸುತ್ತಿಲ್ಲ. ಅವರೇ ಮೀನಾ-ಮೇಷ ಎಣಿಸುತ್ತಿದ್ದಾರೆ. ಇಲ್ಲವಾಗಿದ್ದರೆ ಮಹಿಲೆ ಎಂದೋ ತನ್ನದಾದ ಮೂವತ್ತಮೂರು ಮೀಸಲು ಸ್ಥಾನಗಳನ್ನು ಭಾರತ ಸಂವಿಧಾನದಲ್ಲಿ ಪಡೆದುಕೊಳ್ಳುತ್ತಿದ್ದಳು. ಇಂದು ಸ್ತ್ರೀಯರು ಸಂಘಟಿತರಾಗುವ ಅನಿವಾರ್ಯತೆ ಇದೆ. ಅಲ್ಲೊಬ್ಬ, ಇಲ್ಲೊಬ್ಬ ಮಹಿಳೆಯ ಭಾಷಣದಿಂದ ಗುರಿ ಸಾಧಿತವಾಗುವುದಿಲ್ಲ. ಅದನ್ನೊಂದು ಮಹಾ ಆಂದೋಲವಾಗಿಯೇ ಸ್ವೀಕರಿಸಬೇಕ; ಸಿಡಿದೇಳಬೇಕು. ಅದು ಸಾಹಿತ್ಯಿಕ ಚಳವಳಿಯ ರೂಪದಲ್ಲಿ ಹೊರಬೀಳಬೇಕು. ಪುರುಷರ ಸಹಕಾರ ಸಹಾನುಭೂತಿಗಳನ್ನು ಸಾಕಷ್ಟು ಗಿಟ್ಟಿಸಿಕೊಳ್ಳಬೇಕು. ಇಲ್ಲವಾದರೆ ಚಳವಳಿ ಯಶಸ್ವಿಯಾಗುವುದಿಲ್ಲ, ಗುರಿ ತಲುಪಲು ಸಾಧ್ಯವಾಗುವುದಿಲ್ಲ. ಬದುಕಿನ ಸ್ಥಿತ್ಯಂತರತೆಯಲ್ಲಿ ಸಾಹಿತ್ಯಿಕ ಚಳವಳಿಯದು ಅತ್ಯಂತ ಮಹತ್ವದ ಪಾತ್ರ. ವಿಶ್ವ ಸಾಹಿತ್ಯ ವಲಯದಲ್ಲಿ ಅನೇಕ ಸಾಹಿತ್ಯಿಕ ಚಳವಳಿಯದು ಅತ್ಯಂತ ಮಹತ್ವದ ಪಾತ್ರ, ವಿಶ್ವ ಸಾಹಿತ್ಯ ವಲಯದಲ್ಲಿ ಅನೇಕ ಸಾಹಿತ್ಯಿಕ ಚಳವಳಿಗಳಾಗಿವೆ. ಕನ್ನಡದಲ್ಲೂ ಚೆತ್ತಂಆಣ-ಬೆದಂಡೆ ಚಳವಳಿ, ಚಂಪೂ ಚಳವಳಿ, ವಚನ ಚಳವಳಿ, ದೇಸೀ ಚಳವಳಿ, ಕೀರ್ತನಸಾಹಿತ್ಯ ಚಳವಳಿ, ರಮ್ಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ ಮೊದಲಾದ ಅನೇಕ ಚಳವಳಿಗಳಾಗಿವೆ. ಆದರೆ ವಚನ ಸಾಹಿತ್ಯವನ್ನು ಬಿಟ್ಟರೆ, ಉಳಿದಾವ ಚಳವಳಿಯ ಮಹಿಳಾಂದೋಲನಕ್ಕೆ ಮನ ಮಾಡಿದಂತಿಲ್ಲ; ವಚನಕಾರರು ದಲಿತೋಯದಕ್ಕೆ ದುಡಿದಷ್ಟೇ ಮೆಯ ಉದ್ಧಾರಕ್ಕೂ ದುಡಿದಿದ್ದರೆ, ಇಂದು ಮಹಿಳಾ ಸಂವೇದನೆ ದಲಿತ-ಬಂಡಾಯಗಳಲ್ಲಿ ತಲೆ ಎತ್ತಿದೆ. ಬಂಡಾಯ ಕವಿಯಿತ್ರಿಯೊಬ್ಬಳು ಗರ್ಜಿಸುತ್ತಾಳೆ:

**ಚಿಲ್ಲರೆಯಾಗುತ್ತಿದ್ದೇನೆ**

ಪೈಸೆ ಪೈಸೆಯಾಗಿ ನಾ ವೃದ್ಧಿ ಹೊಂದುತಲಿದ್ದೆ
ಹತ್ತು –ನೂರರ ಮೊತ್ತವಾಗದಿದ್ದರೂ ಕೊನೆಗೆ
ರೂಪಾಯಿ ನೋಟಾದರೂ ಆಗುತ್ತಿದ್ದೆ
ಆದರೇನು ಗೆಳೆಯಾ, ತಾಳಿ ಕಟ್ಟಿದ ಕ್ಷಣದಿಂದಲೇ
ನೀ ನನ್ನ ಚಿಲ್ಲರೆಯಾಗಿಸಿಬಿಟ್ಟೆ !

ನನ್ನ ಬುದ್ಧಿ-ಕೌಶಲ್ಯ-ಪ್ರತಿಭೆಗಳೇನಿದ್ದರೂ
ನಿನ್ನ ಹೊಟ್ಟೆ ನೆತ್ತಿ ಜೋಪಾನ ಮಾಡುವಷ್ಟಕ್ಕೆ
ನನ್ನ ಅಂಗಾಂಗಳು ನಿನ್ನ ಇಂದ್ರಿಯಗಳಿಗೆ
ಸ್ಫೂರ್ತಿ-ಚೇತನ, ಖುಷಿ ನೀಡುವಷ್ಟಕ್ಕೆ
ಸೀಮಿತವೆಂದು ನಿರ್ಣಯಿಸಿರುವ ನಿನ್ನ
ಶತಮಾನಗಳ ಗೊಡ್ಡು ನಂಬಿಕೆಗೆ
'ಧಿಕ್ಕಾರ' ಕ್ಕಿಂತ ಮಿಗಿಲಾದ
ಶಕ್ತಿಯುತ ಶಬ್ಧಕ್ಕಾಗಿ ಹುಡುಕುತ್ತಿದ್ದೇನೆ!
ಹಾಲುಣಿಸಿ ತಣಿಸುವ ನನ್ನ
ಜೀವಪೋಷಕ ಮೊಲೆಗಳಿಗಿಂತಲೂ
ಕತ್ತರಿಗೆ ಸಿಕ್ಕಿ ಕಸವಾಗಿ ಬಿಡಬಹುದಾದ
ನಿನ್ನ ಗಡ್ಡಮೀಸೆಗಳೇ ಮಿಗಿಲೆಂದು
ಬೀಗುವ ನಿನ್ನ ಮೂರ್ಖತೆಗೆ ಅಚ್ಚರಿಗೊಳ್ಳುತ್ತಿದ್ದೇನೆ
'ತಂದೆತನ' ನಿನ್ನ ಬದುಕಿನ ಒಂದಂಶ ಮಾತ್ರವಾದರೆ
ಆ ಮಾತು ಅನ್ವಯಿಸುವುದು ನನ್ನ 'ತಾಯ್ತನ'ಕ್ಕೂ ಕೂಡ
ಎಂಬ ಕಿವಿಮಾತೊಂದು ನಿನಗೆ ಹೇಳಲು
ಸಮಯ ಕಾಯುತ್ತಿದ್ದೇನೆ..

ಎಂದು – (ಲಲಿತಾ ನಾಯಕ್, ಬಿದಿರುಮೆಲೆ ಕಂಟಿಯಲಿ)

ಆದರೂ ಅದು ಪ್ರಚಂಡ ಚಳವಳಿಯ ಸ್ವರೂಪ ತಾಳಿಲ್ಲ.

ಮೇಲೆ ಕಾಣಿಸಿದ ಯಾವುದೇ ಚಳವಳಿಯಲ್ಲಿ ತಮ್ಮನ್ನು ಗುರುತಿಸಿಕೊಳ್ಳದಿದ್ದರೂ ದೇಸೀರಚನೆಯ ಮಹಿಳಾಮಣಿ ಸಂಚಿಯ ಹೊನ್ನಮಮ್ ಹೆಳವನಕಟ್ಟೆ ಗಿರಿಯಮ್ಮ, ಆಧುನಿಕ ಲೇಖಕಿಯಾದ ನಂಜನಗೂಡು ತಿರುಮಲಾಂಬ, ಅನುಪಮಾ ನಿರಂಜನ, ಸಾರಾ ಅಬೂಬಕರ, ಬಾನು ಮುಷ್ತಾಕ್, ಪ್ರತಿಭಾ ನಂದಕುಮಾರ್ ಮೊದಲಾದವರು ಲೇಖಕರಲ್ಲಿ ಕುವೆಂಪು, ಬೇಂದ್ರೆ, ನಿರಂಜನ ಮೊದಲಾದವರು ಸ್ತ್ರೀ ಪರವಾದಿಗಳಿದ್ದಾರೆ.

ಸ್ತ್ರೀಯರು ಸಂಘಟಿತರಾಗಬೇಕು ಎಂಬುದು ಹಲವರ ಆಶಯ. ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ–ಅದರಲ್ಲೂ ಕೇವಲ ಎರಡು ಮೂರು ದಶಕಗಳಲ್ಲಿ ದಲಿತ ಚಳವಳಿ ತುಂಬು ಯಶಸ್ಸು ಪಡೆಯಿತು. ಹೇಗೆ? ಬಾಬಾ ಸಾಹೇಬ ಅಂಬೇಡ್ಕರ್‌ರಂತಹ ಮಹಾನುಭಾವರು ಬೆನ್ನೆಲುಬಾಗಿ ನಿಂತಿದ್ದರಿಂದ, ಮಹಿಳಾ ಆಂದೋಲನದ ಯಶಸ್ಸಿಗೆ ಅಂತಹ ಒಂದ ನಾಯಕತ್ವ ಬೇಕು. ದಲಿತ–ಬಂಡಾಯದ ಮುಖಂಡರೇ ಅದರ ನಾಯಕತ್ವ ವಹಿಸಿಕೊಳ್ಳಬೇಕು. ಅನೇಕ ಜನ ಬಂಡಾಯಗಾರ್ತಿಯರಿದ್ದಾರೆ. ಅವರನ್ನು ಪ್ರೋತ್ಸಾಹಿಸಿ ಕಾರ್ಯೋನ್ಮುಖರಾಗುವಂತೆ ಮಾಡಬೇಕು. ಆದರೆ, 'ಇನ್ನೂ ಕೇವಲ ಮೂರು–ನಾಲ್ಕು ದಶಕಗಳ ಇತಿಹಾಸವಿರುವ 'ಸ್ತ್ರೀ ನಿಷ್ಠ' ವಿಮರ್ಶೆಯ ಇಂದಿನ ಸಂಧಿಕಾಲದಲ್ಲಿ ಸಹಜವಾಗಿಯೇ ಆಂತರಿಕ ವಿರೋಧಗಳು ಹಾಗೂ ಭಿನ್ನಾಭಿಪ್ರಾಯಗಳು ಕಂಡುಬರುತ್ತವೆ. ಮುಖ್ಯವಾಗಿ ಮಾರ್ಕ್ಸ್‌ವಾದಿ ಧೋರಣೆಯುಳ್ಳ ಮಿಶಲ್ ಬ್ಯಾರಟ್, ಜೂಲಿಯ ಕ್ರಿಸ್ಟೆವ ಮುಂತಾದವರು ಒಂದು ಪ್ರಮುಖ ಕವಲನ್ನು ಪ್ರತಿನಿಧಿಸಿದರೆ, ಜೇನ್ ಗ್ಯಾಲಪ್ ಮುಂತಾದವರು ಮತ್ತೊಂದು ವರ್ಗವನ್ನು ಪ್ರತಿನಿಧಿಸುತ್ತಾರೆ. ಸ್ತ್ರೀಕೇಂದ್ರಿತ ವಿಚಾರ ಪ್ರಣಾಲಯ ಮೂಲದಲ್ಲಿರುವ ಸಮಸ್ಯೆಯೆಂದರೆ; ಸ್ತ್ರೀಯು ಪುರುಷನಿಗಿಂತ ಯಾವ ರೀತಿಯಲ್ಲೂ ಭಿನ್ನಳ್ಳ ಎಂದು ನಂಬಿ ಪುರುಷರೊಡನೆ ಸಮಾನತೆಗೆ ಹೋರಾಡಬೇಕೇ ಅಥವಾ ಪುರುಷನಿಗಿಂತ ಪ್ರಜ್ಞೆಯಲ್ಲಿ, ಪ್ರತಿಸ್ಪಂದನೆಯಲ್ಲಿ ಸ್ತ್ರೀಭಿನ್ನಳು ಮತ್ತು ಈ ಭಿನ್ನತೆಯೇ ಸ್ತ್ರೀಯ ವಿಶಿಷ್ಟ ಶಕ್ತಿ ಎಂದು ಮುಂದುವರಿಯಬೆಕೆ? ಎಂಬುದು. ಮೊದಲಿನ ಪೀಳಿಗೆಯ ಕೇಟ್ ಮಿಲೆಟ್ ಮುಂದುವರಿಯಬೇಕೇ? ಎಂಬುದು. ಮೊದಲಿನ ಪೀಳಿಗೆಯ ಕೇಟ್ ಮಿಲೆಟ್ ಮುಂತಾದವರು ಪುರುಷಸಮಾನತೆಗೆ ಒತ್ತುಕೊಟ್ಟರೆ ಇತ್ತೀಚೆಗಿ ಜೂಲಿಯ ಕ್ರಿಸ್ಟೆವ ಮುಂತಾದವರು ಸ್ತ್ರೀಯ ವಿಶಿಷ್ಟ ಭಿನ್ನತೆಯನ್ನು ಎತ್ತಿ ಹಿಡಿಯುತ್ತಾರೆ. ಪುರುಷ ಕಲ್ಪಿತ 'ನಿಯತಗಳು ಮತ್ತು ನಿಶ್ಚಿತಗಳು' (fixities and definities) ಇವುಗಳನ್ನು ಮರಿ ಸ್ತ್ರೀ–ಸಂವಹನದ (feminist discourse) ನಾನಾ ಸಾಧ್ಯತೆಗಳುಳ್ಳ ಹಾಗೂ ಯಾವುದೇ ರೀತಿಯ ಕಟ್ಟುಪಾಡಿಗೆ (ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ) ಒಳಪಡದ ಮುಕ್ತ ಪ್ರಜ್ಞೆಯೇ ಸ್ತ್ರೀ–ಸಾಹಿತ್ಯದ ಸ್ವೋಪಜ್ಞ ಕೊಡುಗೆಯಾಬಲ್ಲುದೆಂದು ಜೂಲಿಯ ಕ್ರಿಸ್ಟೆವ ಸಿದ್ಧಾಂತಿಸುತ್ತಾಳೆ. ಈಗಲ್‌ಟನ್ ಹೇಳುವಂತೆ, ಸ್ತ್ರೀ ಚಳವಳಿ ಹಾಗೂ ಸ್ತ್ರೀ ನಿಷ್ಠ ವಿಮರ್ಶೆ ಇಲ್ಲಿಯವರೆಗೆ ಕಂಡುಬರದಿದ್ದಂತಹ ರಾಜಕೀಯ–ಸಾಂಸ್ಕೃತಿಕ ಏಕತೆಯನ್ನು ಸಫಲವಾಗಿ ಬೆಳೆಸಿದೆ ಮತ್ತು ಮಾರ್ಕ್ಸ್‌ವಾದಿ ವಿಮರ್ಶೆಯಂತೆಯೇ ಸ್ತ್ರೀನಿಷ್ಠ ವಿಮರ್ಶೆಯೂ ನಮ್ಮ ಸಾಹಿತ್ಯಿಕ ಪ್ರಜ್ಞೆಯ ಪರಿಧಿಯನ್ನು ಅಪಾರವಾಗಿ ವಿಸ್ತರಿಸಿದೆ. ೧೦

ಈ ಸಿದ್ಧಾಂತಕ್ಕೂ ಮಹಿಳೆ ಬದ್ಧಳಾಗುವ ಅನಿವಾರ್ಯತೆ ಇದೆ.

॥ ೫ ॥

ಭಾರತೀಯರಾದ ನಾವು ಪಡೆದುಕೊಂಡದ್ದಕ್ಕಿಂತ ಕಳೆದುಕೊಂಡದ್ದೇ ಹೆಚ್ಚು. ನಮ್ಮ ಪ್ರಾಚೀನ ಸಾಹಿತ್ಯಕ್ಕಂತೂ ಇದು ತುಂಬಾ ಒಪ್ಪುವ ಮಾತು. ತಮ್ಮ ಹೆಸರು ಕುಲಗೋತ್ರಗಳನ್ನು ಹೇಳಿಕೊಳ್ಳುವುದು ಶ್ರೇಯಸ್ಕರವಲ್ಲ ಎಂದು ಭಾವಿಸಿದ ನಮ್ಮ ಅನೇಕ ಕವಿಗಳು ಅಜ್ಞಾತರಾಗಿ, ಅವರ ಕೃತಿಗಳು ಅನಾಥವಾಗಿ ಉಳಿದಿರುವುದುಂಟು. ಐತಿಹಾಸಿಕ ಪ್ರಜ್ಞೆಯಿಲ್ಲದ ಭಾರತೀಯರು 'ಕಡಲೆ ತಿಂದು ಕೈ ತೊಳೆದುಕೊಂಡಂತೆ'ಮ ಉಂಡುಂಟ್ಟು ಮೋಜು ಮಾಡಿ ಯಾವುದೇ ಘಟನೆಯನ್ನು ದಾಖಲಿಸುವ ಗೋಜಿಗೆ ಹೋಗಲಿಲ್ಲ. ಅದರಿಂದಾಗಿ ನಮ್ಮ ಬಹು ಮಂದಿ ಕವಿ, ಕಲಾವಿದ, ಸಂತ, ಸಾಹಿತಿಯ

———

೧೦ ಪೂರ್ವೋತ್ತ, ಸಾಹಿತ್ಯ ವಿಮರ್ಶೆ ೭೭

ಮಾಹಿತಿಯೂ ನಮಗೆ ದೊರೆಯುತ್ತಿಲ್ಲ. ಕೃತಿ ಇದ್ದರೆ ಕರ್ತೃ ಇಲ್ಲ; ಕರ್ತೃ ಇದ್ದರೆ ಕೃತಿ ಇಲ್ಲ; ಎರಡೂ ಇದ್ದರೆ ಅವರ ಜನ್ಮಜಾತಕ ಮೊದಲೇ ಇಲ್ಲ–ಇಂತಹ ವಿಪರ್ಯಾಸ ಸರ್ವೇಸಾಧಾರಣ. ಕನ್ನಡದಲ್ಲಿ ಹೆಚ್ಚು, ಕಡಿಮೆ ಎಲ್ಲ ವಚನಕಾರರಿಗೂ ಈ ಮಾತು ಅನ್ವಯಿಸುತ್ತದೆ. ಅಕ್ಕನೂ ಅವರಲ್ಲಿ ಒಬ್ಬಳು! ಅವಳ ಜನನ, ಬಾಲ್ಯ ಕುರಿತು ವಿವರಗಳು ಹರಿಹರಾದಿ ಕವಿಗಳ ಸ್ವಕೋಲ ಕಲ್ಪಿತಗಳು ಎನ್ನಿಸುತ್ತವೆ. ಅವಳ ಬವಣೆ, ಬಂಧನ, ಬಿಡುಗಡೆಗಳಿಗೆ ಅವಳ ವಚನಗಳೇ ಆಧಾರ. ಅವುಗಳಲ್ಲೇ ಹುಡುಕುವುದು ಸೂಕ್ತ.

**ಮದುವೆ :**

ಮಹಿಳೆಗೆ ಸಾಮಾಜಿಕ ನ್ಯಾಯ (Social Justice) ದೊರಕಿಸಿಕೊಡುವ ಸ್ತುತ್ಯ ಪ್ರಯತ್ನದಲ್ಲಿ ತನ್ನನ್ನು ತೊಡಗಿಸಿಕೊಂಡ ಸಾಹಸಶೀಲೆ, ಮುಕ್ತಿವನಿತೆ ಮಹಾದೇವಿಯಕ್ಕನ ವ್ಯಾಜ್ಯದಲ್ಲಿ ಆಧುನಿಕರನ್ನು ಕಾಡುವ ಹಲವು ಸಮಸ್ಯೆಗಳಿವೆ. ಮುಖ್ಯವಾಗಿ ಅವಳ

ಮದುವೆ, ಅನುಭವ ಮಂಟಪಕ್ಕೆ ಅವಳು ಬತ್ತಲೆ ಬಂದ ಪ್ರಸಂಗ, ಐಕ್ಯಸ್ತರದಲ್ಲಿ ಶ್ರೀಶೈಲದ ಕದಳಿ ಹೊಕ್ಕಳೆಂಬ ಕಲ್ಪನೆ ಇತ್ಯಾದಿ ಇತ್ಯಾದಿ. ಆದರೆ ಇವು ಅಪರಿಹಾರ್ಯ ಸಮಸ್ಯೆಗಳೇನಲ್ಲ. ಇವುಗಳಿಗೆ ಅಕ್ಕನೇ ಉತ್ತರವಾಗಿದ್ದಾಳೆ !

ಮೊದಲನೆಯದಾಗಿ, ಅಕ್ಕನಿಗೆ ಮದುವೆ ಆಗಿತ್ತು. ಕೌಶಿಕನೆಂದು ಕರೆಸಿಕೊಳ್ಳುವ ಬಳ್ಳಿಗಾವೆಯ ಭೂಪ ಕಸಪಯ್ಯನೊಡನೆ, ಆದರೆ ಅವಳಿಗೆ ಮದುವೆಯೇ ಆಗಿರಲಿಲ್ಲ. ಅವಳ ಆಧ್ಯಾತ್ಮಪತಿ ಚೆನ್ನಮಲ್ಲಿಕಾರ್ಜುನನ ಹೊರತು ಬೇರಾವ ಗಂಡಸೂ ಅವಳ ಕೈ ಹಿಡಿದಿರಲಿಲ್ಲ ಎನ್ನುತ್ತದೆ ಎಂದು ವಾದ. ಆದರೆ ಆ ವಾದಕ್ಕೆ ಸಮರ್ಥನೆ ಸಾಲದು. ವೀರಶೈವಕ್ಕೆ ಮದುವೆ ಮೈಲಿಗೆ ಅಲ್ಲ. 'ಸತಿಪತಿಗಳೊಂದಾದ ಭಕ್ತಿ ಹಿತಪ್ಪುದು ಶಿವಂಗೆ' ಎಂಬುದು ಆ ಧರ್ಮದ ಶಿಷ್ಟ, ಸಂಹಿತೆ, ವಿಧವಾ ವಿವಾಹವನ್ನೂ ಸ್ವಾಗತಿಸುವಷ್ಟು ಹೃದಯ ವೈಶಾಲ್ಯವುಳ್ಳ ವೀರಶೈವಕ್ಕೆ, ಕನ್ಯೆಯೋರ್ವಳ ವಿವಾಹ ಹೊಲ್ಲ ಎಂಬ ಮಡಿತನ ಸಲ್ಲ. ಇವೆಲ್ಲ ಇತ್ತೀಚಿನ ಕೃತಕ ಸೃಷ್ಟಿಗಳು, ವಾಸ್ತವವಾಗಿ ಅಕ್ಕನಿಗೆ ವಿವಾಹ ಆಗಿತ್ತು. ಅದಕ್ಕೆ ಹತ್ತಾರು ವಚನಗಳೇ ಸಾಕ್ಷಿ ಹೇಳುತ್ತವೆ;

ಹೆಣ್ಣುಗಂಡಿನ ವಿವಾಹ ಪೂರ್ವದಲ್ಲಿ ಎರಡೂ ಕಡೆಯ ಹಿರಿಯರು ನಡೆಸುವ ಕೊಳ್‌ಕೊಡೆಯ ಮಾತುಕತೆಯಿಂದ ಆರಂಭವಾಗಿ ವಿವಾಹ ಕಾರ್ಯ ನಡೆದು ಕತ್ತಲು ಬೆಳಕು ಏಕಕಾಲದಲ್ಲಿ ಏಕತ್ರ ಸಂಧಿಸಲಾಗದಂತಹ ವೈಚಿತ್ರ್ಯ. ಆತ್ಮಾನುಸಂಧಾನ ನಿರತಳಾದ ತನ್ನೊಡನೆ ಯಾವುದೇ ಲೋಕಾನುಸಂಧಾನ ಸೂಕ್ತವಲ್ಲ ಎಂಬ ನಿವೇದನೆ, ಆರಾಧ್ಯ ದೈವ ಕುರಿತ ಅರ್ತತೆ, ವಿರಸ ದಾಂಪತ್ಯದ ಬಂಧನದಿಂದ ಬಿಡುಗಡೆ, ಅನುಭಾವದ ನಿಚ್ಚಣಿಗೆ ಏರಿ ಅನುಭವ ಮಂಟಪದ ಪ್ರವೇಶದವರೆಗಿನ ಎಲ್ಲಾ ಸ್ಪಷ್ಟ ಮಾಹಿತಿಗಳೂ ಅನುಕ್ರಮವಾಗಿ ಆಕೆಯ ವಚನಗಳಲ್ಲಿ ದೊರೆಯುತ್ತವೆ.

ಮದುವೆಯ ಪ್ರಸ್ತಾಪ ಬಂದು ಮನೆಯಲ್ಲಿ ಮಾತುಕತೆ ನಡೆಯುವಾಗ, ಕನ್ಯೆಯ ಅಭಿಪ್ರಾಯ ಕೇಳಿದಾಗ, ಅಕ್ಕ, ಕೇಳಿದವರಿಗೆ ಕೊಟ್ಟ ಉತ್ತರ ಈ ವಚನ –

ಪರರೊಡತಣ ಮಾತು ನಮಗೇತಜಿದಯ್ಯ !
ಪರರೊಡತಣ ಗೊಟ್ಟಿ ನಮಗೇತಜಿದಯ್ಯ !
ಲೋಕದ ಮಾನವರೊಡನೆ ನಮಗೇತಜಿ ವಿಚಾರವಯ್ಯಾ
ಚೆನ್ನಮಲ್ಲಿಕಾರ್ಜುನನ ಒಲವಿಲ್ಲದವರೊಡೆನ
ಮನಗೇತಜಿ ವಿಚಾರವಯ್ಯ ?
– (ವಚ. ೪೩)

ತಾನು ಚೆನ್ನಮಲ್ಲಿಕಾರ್ಜುನನ ಒಲವೆಣು, ಅವನನ್ನುಳಿದು ಪರಪುಷರ ಸಂಗಡ ಮಾತನಾಡುವುದು ಸಭ್ಯತೆ ಅಲ್ಲ ಎನ್ನುತ್ತಾಳೆ. ಚೆನ್ನಮಲ್ಲಿಕಾರ್ಜುನನ ಒಲವಿಲ್ಲದವರೊಡನೆ ಎಂಬಲ್ಲಿ ತನ್ನ ಆರಧ್ಯ ದೈವಕ್ಕೆ ಇಷ್ಟವಾಗದವರು ತನಗೂ ಇಷ್ಟವಾಗುವವರಲ್ಲ ಎಂಬ ಧ್ವನಿ ಇದೆ.

ಒತ್ತಾಯ ಮದುವೆ ಹೆಗಲೇರಿಕೊಂಡಾಗ ತನ್ನ ಸ್ವಾಮಿಗೆ ಮೊರೆಯಿಡುತ್ತಾಳೆ.

ಸಾವಿರ ಹೊನ್ನಿಂಗೆ ಸಾದ ಕೊಂಡು ಸುಣ್ಣವ ಬೆರಸಿದಂತೆ ಮಾಡಿದೆಯಯ್ಯಾ
ನೂಱು ಲಕ್ಷದ ಬೆಲೆಗೆ ರತ್ನವ ಕೊಂಡು
ಮಡುವಿನಲ್ಲಿ ಇಟ್ಟಂತೆ ಮಾಡಿದೆಯಯ್ಯಾ
ಚೆನ್ನಮಲ್ಲಿಕಾರ್ಜುನಯ್ಯ
ಎನ್ನ ಮುಟ್ಟಿ ಪಾವನವ ಮಾಡಿ,
ಕಷ್ಟ ಸಂಸಾರಿಗೊಪ್ಪಿಸುವಂತೆ ಮಾಡಿದೆಯಯ್ಯಾ !
– (ವಚ. ೪೬)

– ಎಂತಹ ಅನ್ಯಾಯ! ಮತ್ತೆ ಆಕ್ಷೇಪಿಸುತ್ತಾಳೆ; 'ನೆಳಲ ತಂಪಿನಲ್ಲಿ ಬೆಳೆದ ಸಸಿಗೆ ಉರಿಯಬೇಲಿಯ ಕಟ್ಟುವರೆ ಅಯ್ಯಾ ! – (ವಚ. ೪೫) ಎಂದು. ಆಧ್ಯಾತ್ಮದ ತಣ್ಣೆಳಲ ತಂಪಿನಲ್ಲಿ ಆನಂದದಿಂದಿದ್ದವಳಿಗೆ ವಿವಾಹವೆಂಬ ಲೋಕಬಂಧನದ ಬೇಲಿ ಹಾಕುವುದು ನ್ಯಾಯವೆ?' ದಿಟಕೊಬ್ಬ ಗಂಡ, ಸಟೆಗೊಬ್ಬ ಗಂಡನಲ್ಲ – (ವಚ. ೪೮) ನನಗೆ ಈ ಮದುವೆ ಇಷ್ಟವಿಲ್ಲ ಬೇಡಾ..ಬೇಡಾ.. ಬೇಡ.. ಎಂದಾಗ ಬಹುಶಃ ರಾಜನ ಅಂತಹಪುರ ಸ್ತ್ರೀಯರು ಒಲಿಸಲು ಯತ್ನಿಸಿದರೆಂದು ತೋರುತ್ತದೆ. ಅವರಿಗೆ ಆತ್ಮ

ಗಿರಿಯಲಲ್ಲದೆ ಹುಲುಮೊರಡೊಳಾಡುವುದೆ ನವಿಲು ?
ಕೊಳನಲ್ಲದೆ ಕಿಱುವಳ್ಳಕ್ಕೆಳಸುವುದೆ ಹಂಸೆ ?
ಮಾಮರ ತಳಿತಲ್ಲದೆ ಸರಗೈವುದೆ ಕೋಗಿಲೆ ?
ಪರಿಮಳವಿಲ್ಲದ ಪುಷ್ಪಕ್ಕಱುಗುವುದೇ ಭ್ರಮರ ?
ಎನ್ನದೇವ ಚೆನ್ನಮಲ್ಲಿಕಾರ್ಜುನನಲ್ಲದೆ ಪರಪುರುಷನು
ಎನ್ನ ಮನಸ್ಸಿಂಗೆ ಸೊಗಸುವರೆ ಕೆಳದಿ ?
– (ವಚ. ೫೪)

– ಎಂದು ಪ್ರಶ್ನೆಗೆ ಪ್ರಶ್ನೆಯ ರೂಪದ ಉತ್ತರವೀಯುತ್ತಾಳೆ. ಬಲಾತ್ಕಾರದ ಮದುವೆ ನಿಶ್ಚಯವಾದಾಗ–

ಕಾಯದ ನುಂಪನೊಬ್ಬ ಕಂಡು ಬಯಸಿದನು
ಅವರಿಗೆ ಮಾಂಸದ ಬೆಲೆ ಮಾಡಿ ಕೊಡುವೆನು
ತನ್ನ ಪ್ರಾಣದೊಡೆಯರಿಗೆ ಎನ್ನ ಹೃದಯದವ ಸೂಜಿಗೊಡುವೆನು !
ಚೆನ್ನಮಲ್ಲಿಕಾರ್ಜುನ ದೇವಯ್ಯನು ಮುನಿದು
ಭವಿಗೆ ಮಾಜಿದಡೆ ಹೊಲಬುಗೆಡದಿರಾ ಮನವೆ !

– (ವಚ. ೬೨)

ಎಂತು ಆತ್ಮಸಾಂತ್ವನ ಮಾಡಿಕೊಳ್ಳುತ್ತಾಳೆ.

ಮದವಣಗಿತ್ತಿಯನ್ನು ಅಲಂಕರಿಸಿ ಬಂದ ಕೆಳದಿಯರಿಗೆ ಹೇಳುತ್ತಾಳೆ

ಗುರುಪಾದ ತೀರ್ಥವೆ ಮಂಗಳ ಮಜಜ್ಜನವೆನಗೆ
ವಿಭೂತಿಯೇ ಒಳಗುಂದದರಿಸಿನವೆನಗೆ
ದಿಗಂಬರವೆ ದಿವ್ಯಾಂಬರವೆನಗೆ
ಶಿವನ ಪಾದದ ರೇಣುವೆ ಅನುಲೇಪನವೆನಗೆ
ರುದ್ರಕ್ಷಿಯೆ ಮೈದೊಡಿಗೆ ಎನಗೆ
ಶರಣರ ಪಾದವೆ ಶಿರದಲ್ಲಿ ತೊಂಡಿಲು ಬಾಸಿಗವೆನಗೆ
ಚೆನ್ನಮಲ್ಲಿಕಾರ್ಜುನನ ಮದವಳಿಗೆಗೆ
ಬೇಜಿ ಶೃಂಗಾರವೇಕೆ ಹೇಳಿರವ್ವಾ ?

– (ವಚ. ೬೩)

ಎಂದು. ಮತ್ತೆ ಒತ್ತಾಯ ಮಾಡಿದ ಅವರನ್ನು ತರಾಟೆಗೆ ತೆಗೆದುಕೊಳ್ಳುತ್ತಾಳೆ. 'ಬಂಜೆ ಬೆನೆಯನಜೆಯಳು, ಬಲದಾಯಿ ಮುದ್ದಬಲ್ಲಳೆ? ನೊಂದವರ ನೋವ ನೋಯದವರೆತ್ತ ಬಲ್ಲರು?' ಎಂದು

ಮದುವೆ ಆಯಿತು. ಗಂಡನ ಮನೆಗೆ ಹೆಣ್ಣನ್ನು ಕರೆದೊಯ್ಯುವಾಗ –

ಗಂಡ ನೀನು ಹೆಂಡತಿಯಾನು ಮತ್ತೊಬ್ಬರಿಲ್ಲಯ್ಯ
ನಿನ್ನ ಬೆಂಬಳಿಯಲಾನು ಮೆಚ್ಚಿ ಬಂದೆ
ಕಂಡ ಕಂಡವರೆಲ್ಲ ಬಲು ಹಿದ ಕೈ ಹಿಡಿದರೆ
ಗಂಡಾ, ನಿನಗೆ ಸೈರಣೆಯೆಂತಾಯಿತ್ತು ಹೇಳಾ?
ಚೆನ್ನಮಲ್ಲಿಕಾರ್ಜುನಯ್ಯಾ?
ನಿನ್ನ ತೋಲ ಮೇಲಣವಳನನ್ಯರೆಳದೊಯ್ಯುವರೆ
ನೋಡುತಿಹುದುಚಿತವೆ ಕರುಣಿಗಳರಸಾ ?

– (ವಚ. ೬೭)

ಎಂದು ಅಕ್ಕ ತನ್ನ ಆರಾಧ್ಯ ಮೂರ್ತಿಗೆ ಮೊರೆಯುಡುತ್ತಾಳೆ. ನಿನ್ನ ತೋಲ ಮೇಲಣವನ್ನು ಅನ್ಯನೊಬ್ಬ ಸೆಳೆದೊಯ್ಯುತ್ತಿದ್ದರೆ ನಿಜಗಂಡನಾದ ನೀನು ಮಿಳಮಿಳನೆ ನೋಡುತ್ತಾ ನಿಲ್ಲುವುದು ಯೋಗ್ಯವೆ? ಈ ಮಾತುಗಳಲ್ಲಿ ಕೇಳಿದವರ ಕರುಳು ಹಿಂಡುವಂಥವು. ಈ ಆರ್ತತೆಯಲ್ಲಿ ಅವಳ ಅಸಹಾಯಕತೆಯೂ ವೇದ್ಯ.

ಇಷ್ಟೆಲ್ಲ ಅನಿಷ್ಟ ಘಟನೆಗಳ ಅಂತ್ಯದಲ್ಲಿ, ಬಹುಶಃ ಅಂತಃಪುರದಲ್ಲಿ ಅರಸ ಭೋಗಕ್ಕೆಳೆಸಿದಾಗ, ಅವನಲ್ಲಿ ವಿನಂತಿಸಿಕೊಳ್ಳುತ್ತಾಳೆ:

ಊರ ಮುಂದೆ ಹಾಲತೊಜಿ ಇರಲು
ನೀರಡಸಿ ಬಂದೆನಲ್ಲಯ್ಯ ನಾನು,
ಬಜಿದೊಜಿವೋದಳೆನೆನ್ನನಪ್ಪದಿರಯ್ಯ
ನೀನೊಂತಿರ್ದ ಕಾರಣ ಬಂದೆನಲ್ಲಯ್ಯಾ

ಹೆಜೆಗೆ ಕೂತವಳ ತೆಗೆದಪ್ಪುವನೆಗ್ಗ ನೋಡಾ ।
ಈ ಸೂನೆಗಾಱಂಗೆ ಕುಱಿಯ ಮಾಱುವರೆ ?
ಮಾಱಿದರೆಮ್ಮವರೆನ್ನ ನಿನಗೆ !
ಎನ್ನತ್ತ ಮುಂದಾಗದಿರುವ, ಎನ್ನ ಮೇಲೆ ಕಾಲನಿಡದಿರು
ಚೆನ್ನಮಲ್ಲಿಕಾರ್ಜುನಂಗೆ ಸಲೆ ಮಾಱುವೋದವಳಾನು.

– (ವಚ.೭೩)

ಈ ವಚನ ಅವಳಿಗೆ ವಿವಾಹವಾಗಿತ್ತೆಂದು ಸ್ಪಷಟ ತಿಳಿಸುತ್ತದೆ, ಹೇಳುತ್ತಾಳೆ– ನೀನು ಮೆಚ್ಚಿದೆ ಎಂದು ನಾನಿಲ್ಲಿಗೆ ಬರಲಿಲ್ಲ; ಎಮ್ಮವರು ಎನ್ನ ನಿನಗೆ ಮಾರಿದರು. ಕೊಲೆಗಡುಕನಿಗೆ ಕುರಿಯನ್ನು ಮಾರುವಂತೆ ಎಂದು. ಅವಳ ಅಂತರಂಗದ ನೋವು ಬಣ್ಣನೆಗೆ ಮೀರಿದ್ದು. ನನ್ನ ತಂದೆತಾಯಿಗಳು ನನ್ನನ್ನು ನಿನಗೆ ಮಾರಿಬಿಟ್ಟರು ಎಂಬಲ್ಲಿ ಅಕ್ಕಳ ಅಳಲಿನ ಆಳ ಎಷ್ಟಿತ್ತೆಂಬುದು ವೇದ್ಯವಾಗುತ್ತದೆ!

ಇಂತಹ ವೈವಾಹಿಕ ಪ್ರಕ್ರಿಯೆಯ ಹಂತಹಂತದ ವಿವರಗಳಿರುವಾಗ, ಅಕ್ಕನಿಗೆ ಮದುವೆ ಆಗಿರಲಿಲ್ಲ ಎಂಬ ವಾದ ಸಮಂಜಸ ಅಲ್ಲ. ಅಕ್ಕನಂತೆ ಅಲ್ಲಮನೂ ಆಗಿದ್ದ. ಅಣ್ಣನೂ ಆಗಿದ್ದ– ಒಬ್ಬರನ್ನಲ್ಲ ಇಬ್ಬರನ್ನು !

ಮದುವೆಯೇನೋ ಆಯಿ. ಆದರೆ ಸಂಸಾರ ನಡೆಯಿತೆ ! ಇಲ್ಲ. ಅಕ್ಕ 'ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದಳು !' 'ತೆರಣಿಯ ಹುಳು ತನ್ನ ಸ್ನೇಹದಲ್ಲಿ ಮನೆಯ ಮಾಡಿ ತನ್ನ ನೂಲು ಸುತ್ತಿ ಸಾವ ತೆಱನಂತಾಯಿತ್ತು' ಅವಳ ಬಾಳುವೆ. ವಿರಸ ದಾಂಪತ್ಯ ವಿಕೋಪಕ್ಕೆ ಹೋಗಿ ಅಧ್ಯಾತ್ಮದ ಮಜಲು ಮುಟ್ಟಿತು. ಕಡೆಗದು ಜೀವಾತ್ಮ ಪರಮಾತ್ಮರ ಐಕ್ಯಾನುಸಂಧಾನದಲ್ಲಿ ಪರಿಣಾಮ ಪಡೆಯಿತು.

**ಬತ್ತಲೆ ಬಂದ ಪ್ರಸಂಗ ; –**

ಇದು ವಿಚಾರವಾದಿಗಳಲ್ಲಿ ಔಚಿತ್ಯ ಪ್ರಜ್ಞೆಯನ್ನು ಕೆಣಕುವಂಥದು. ಅವಳೆಷ್ಟು ವೀರವಿರಾಗಿಣಿಯಾಗಿದ್ದರೂ ಲೋಕರೂಢಿಗೆ ಓಗೊಡಬೇಕಾಗಿತ್ತು ಎಂಬ ಆಕ್ಷೇಪ.

ನಾಳದ ಮಱೆಯ ನಾಚಿಕೆ
ನೊಲ ಮಱೆಯಲ್ಲಿ ಅಡಗಿತ್ತೆಂದು ಅಂಜುವರು ಅಳುಕುವರು
ಮನಮೆಚ್ಚಿದಭಿಮಾನಕ್ಕೆ ಆವುದು ಮಱೆ ಹೇಳಾ?
ಕಾಯಿ ಮಣ್ಣೆಂದು ಕಳೆದ ಬಳಿಕ
ದೇಹದಭಿಮಾನ ಅಲ್ಲಿಯೆ ಹೋಯಿತ್ತು ?
ಪ್ರಾಣ ಬಯಲೆಂದು ಕಳೆದ ಬಳಿಕ
ಮನ ಲಜ್ಜೆಯಲ್ಲಿಯೆ ಹೋಯಿತ್ತು
ಚೆನ್ನಮಲ್ಲಿಕಾರ್ಜುನನ ಕೂಡಿ ಲಜ್ಜೆಗೆಟ್ಟವಳ
ಉಡಿಗೆಯ ಸೆಳೆದುಕೊಂಡಡೆ
ಮುಚ್ಚಿದ ಸೀರೆ ಹೋದರೆ ಅಂಜುವರೆ ಮರುಳೇ ?

– ವಚ. ೧೬೩)

ಅಂತೆಯೇ "ಉಡುಗೆಯ ಸೆಳೆದುಕೊಂಡರೆ ಮುಚ್ಚಿ ಮುಸುಕಿದ ನಿರ್ವಾಣವ ಸೆಳೆಯಬಹುದೆ?" ಎಂಬ ಅಕ್ಕನ ಮಾತಿನಲ್ಲಿ ಸೀರೆಯನ್ನು ಸೆಳೆದದ್ದರ ಸುಳುಹು ಉಂಟು. ಆ ವ್ಯಾಪಾರ ಗಂಡಹೆಂಡಿರ ಏಕಾಂತದ್ದು; ಅವರ ಅಂತಃಪುರದ ಒಳಗಿನದು. ಹರಿಹರನೂ ಆ ಬಗ್ಗೆ ಮಾಹಿತಿ ಒದಗಿಸುತ್ತಾನೆ. ಆದರೆ ಬಟ್ಟಬಯಲಲ್ಲಿ ಬತ್ತಲೆಯಲ್ಲಿ ಕಲ್ಯಾಣದವರೆಗೂ ನಡೆದುಬಂದಳೆಂಬುದು ಲೋಕಮರ್ಯಾದೆಗೆ ಮೀರಿದ ಮಾತು. ಈ ಕುರಿತು ಹಲವು ವ್ಯಾಖ್ಯಾನಗಳಿವೆ೧೧.

---

೧೧. ಅಕ್ಕನ ಬತ್ತಲೆ ಬಂದ ಬಗೆಗೆ ಹಾಗೂ ಪತಿ, ದೈವ, ಧರ್ಮ ಇವುಗಳಿಗೆ ಸಂಬಂಧಿಸಿದಂತೆ ಹಲವು ಆಧಾರರಹಿತ ಹೇಳಿಕೆಗಳಿವೆ. ಅವು ಬರಿಯ ಊಹನೆಗಳಷ್ಟೇ ಹೊರತು ಸತ್ಯಾಂಶಗಳಲ್ಲ. ಮುಖ್ಯವಾಗಿ ಕೃಷ್ಣಮೂರ್ತಿ ಕರ್ಪೂರ ಎಂಬುವರ ಪ್ರಜಾಮತ, ಮಾರ್ಚ್ ೨೯, ೧೯೯೨ ಪುಟ ೧೫ರಲ್ಲಿ ಬರೆದ 'ಜಿನಪರಂಪರೆ ಮತ್ತು ಅವಳೂ ಸಹ 'ಜೈನಧಮಕ್ಕೆ ಸೇರಿದವಳು. ಅವಳ ಹೆಸರು 'ಜೈನಧರ್ಮದಂತೆ ಮಾಯೆ ಅಥವ ಮಹಾಮಾಯೆ' ಎಂದಿರಬೇಕು. ಅನಂತರದಲ್ಲಿ ಹೇಗೋ 'ಮಹಾದೇವಿ' ಆಗಿದೆ. ಅವಳ ಆರಾಧ್ಯದೈವ ಜೈನರ ೧೯ನೇ ತೀರ್ಥಂಕರನಾದ ಮಲ್ಲಿನಾಥ; ಅವನೇ ಕಾಲಾಂತರದಲ್ಲಿ ಚೆನ್ನಮಲ್ಲಿಕಾರ್ಜುನನಾಗಿರುವ ಸಾಧ್ಯತೆ ಇದೆ. ವೀರಶೈವ ಮತದಲ್ಲಿ ದಿಗಂಬರತ್ವಕ್ಕೆ ಸ್ಥಾನವಿಲ್ಲ; ಜೈನಧರ್ಮದಲ್ಲಿ ಮಾತ್ರ ದಿಗಂಬರತ್ವ ಮಹತ್ತಿನ ಪ್ರಸಂಗ. ರಾಗಾದಿಗಳೆಲ್ಲವನ್ನೂ ಗೆದ್ದು, ಜ್ಞಾನೇಂದ್ರಿಯಗಳನ್ನು, ಕರ್ಮೇಂದ್ರಿಯಗಳನ್ನು ಸಂಪೂರ್ಣ ಹತೋಟಿಯಲ್ಲಿಟ್ಟುಕೊಂಡು ಅವುಗಳನ್ನು ಗೆದ್ದವರು ಮಾತ್ರ ಜಿನತ್ವ ಪಡೆಯಲು ಸಾಧ್ಯ. ಇಂತ ಸ್ಥಿತಿ ಪಡೆದವಳು ಮಹಾದೇವಿಯಕ್ಕ ಮಾತ್ರ; 'ಉಡು–ತಡಿ' ಎಂಬುದರ ಅರ್ಥ 'ಉಡುಪನ್ನು ತಡೆದವಳು, ಬಟ್ಟೆಗಳನ್ನು ಬಿಟ್ಟವಳು, ದಿಗಂಬರತ್ವ, ಅಪ್ಪಿಕೊಂಡವಳು ಎಂದು ಅದೊಂದು ಊರಿನ ಹೆಸರಲ್ಲ. ಮತ್ತೊಂದು ಕಲ್ಪನೆ ಹೀಗಿದೆ (ನನ್ನೊಡನೆ ಸಂವಾಧಿಸಿದವರ ಹೆಸರು ವಿಳಾಸಗಳು ಮರೆತುಹೋಗಿವೆ)

“ಜೈನರಲ್ಲಿ ಹೆಣ್ಣಿಗಷ್ಟೆ ಕೊಡುವ ‘ಔರಸ ದೀಕ್ಷೆ’ ಪ್ರಚಲಿತವಿದೆ. ಆ ದೀಕ್ಷೆಯನ್ನು ಗುರುವಿನಿಂದ ಸ್ವೀಕರಿಸಿ ಮಹಿಳೆ ಸರ್ವನಿರ್ವಾಣ ಪಡೆದು ಅಂದರ ದಿಗಂಬರ ಸವಣನಂತ ಬತ್ತಲೆ ನಿಂದ ‘ಸವಣಿ’ಯಾಗುತ್ತಾಳೆ; ಕಂತಿ ಎನಿಸುತ್ತಾಳೆ. ಇಂತಾದ ಸವಣಿಯ ಬಗ್ಗೆ ಜೈನರಲ್ಲಿ ವಿಶೇಷ ಭಕ್ತಿ, ಪೂಯಭಾವನೆ ಕೂಡ. ಕೌಶಿಕನ ಕಾಮಕಾಟವನನು ತಡೆಯಲಾರದೆ, ಜಿನಭಕ್ತನಾದ ಅವನಲ್ಲಿ ತನ್ನ ಬಗೆಗೆ ಭಕ್ತಿ, ಗೌರವಗಳು ಮೂಡುವಂತೆ  ಮಾಡಲು, ಅವನ ಮನಃಪರಿವರ್ತನೆಗೈಯಲು ಮಹಾದೇವಿ ‘ಔರಸದೀಕ್ಷೆ’ ತೆಗೆದುಕೊಂಡಂತೆ ನೆಟ್ಟಿಸಿದ್ದರಿಬೇಕು. ಅದರಿಂದ ಕೌಶಿಕನ ಮನಸ್ಸು ಮಾರ್ಪಟ್ಟು, ಮಹಾದೇವಿಯನ್ನು ಕಂತಿ, ಸವಣಿ ಅಥವಾ ಸಾಕ್ಷಾತ್ ಪ್ರತಿರೂಪವೇ ಎಂಬ ಭಾವನೆಯಿಂದ ನೋಡಿ ನಮಿಸಿರಬೆಕು ಅಕ್ಕನಿಗೆ”.

ಇವು ಕಲ್ಪನೆಯ ಕಾಗದದ ಹೂವುಗಳು, ನೈಜ ಪುಷ್ಪಗಳಲ್ಲ. ಇವುಗಳಲ್ಲಿ ಬೆಡಗಿನ ಬಣ್ಣ–ಭಂಗಿಗಳಿವೆ. ಆದರೆ ಬಂಡು ಬಂಗಾರ ಇಲ್ಲ. ಅಕ್ಕ ಶುದ್ದ ವೀರಶೈವಳೆಂಬುದಕ್ಕೆ ಅವಳ ವಚನಗಲ್ಲಿನ ಶಿವಾದ್ವೈತ ದರ್ಶನ ಪ್ರತಿಪಾದನೆ ಸಾಕು. ಜೈನಧರ್ಮದಲ್ಲಿ ಹೆಣ್ಣಿಗೆ ಮುಕ್ತಿಯಿಲ್ಲ. ಅವಳು ಮುಂದಾವುದೋ ಭವದಲ್ಲಿ ಹುಟ್ಟಿ ಧರ್ಮವನ್ನು ಅವಲಂಬಿಸಿ ಆಚರಿಸಿದರೆ ಮಾತ್ರ ಮುಕ್ತಿ. ಆದರೆ ಅಕ್ಕ ಚೆನ್ನಮಲ್ಲಿಕಾರ್ಜುನನಲ್ಲಿ ಐಕ್ಯ ಆದವಳು. ಅನಂತರ ಶಿವ ಅಥವ ಶೂನ್ಯಸ್ತರಕ್ಕೇರಿ ಪರಿಪೂರ್ಣೆಯಾದವಳು. ಆ ನಿಲುವಿನ ಮಹಾಚೇತನಕ್ಕೆ ‘ಔರಸದೀಕ್ಷೆ’ಯ ಸೊಬಗು ತಿಳಿದಿರಲಾರದು.

ಒಟ್ಟಿನಲ್ಲಿ ಮೇಲಿನ ಎರಡೂ ವಾದಗಳ ಬುಡ ಭದ್ರಿಲ್ಲ ಎಂಬುದು ನನ್ನ ಸ್ಪಷ್ಟ ಅಭಿಪ್ರಾಯ.

ಆದರೆ ಇತ್ತೀಚಿನ ವಿದ್ವಾಂಸರ ಅರ್ಥಪೂರ್ನ ಊಹನೆ ವಿಶ್ವಾಸಾರ್ಹವಾದದ್ದು. ಅಕ್ಕ ಅರಮನೆಯನ್ನು ತೊರೆದು ಹೊರಡುವಾಗ ಕೇಶಾಂಬರೆಯಾಗಿದ್ದಳು ಎಂದು ಮಧ್ಯಕಾಲೀನ ಕಾವ್ಯಗಲು ತಿಳಿಸುತ್ತವಷ್ಟೆ. ಕೇಶಾಂಬರದ ಅರ್ಥ ಅಕ್ಕ ತನ್ನ ತಲೆಗೂದಲ್ನೇ ಬಟ್ಟೆಯನ್ನಾಗಿ ರೂಪಿಸಿಕೊಂಡಳು ಎಂದಲ್ಲ, ಕುರಿಯ ತುಪ್ಪಟದಿಂದ ಮಾಡಿದ ಕರಿಯ ಕಂಬಳಿಧರಿಸಿದಳು ತಮ್ಮ ಹೆಗಲ ಮೇಲೊಂದು ಕರೀಕಂಬಳಿ ಧರಿಸುವುದು ಪದ್ಧತಿ. ಒಂಟಿಸಲಗದಂತೆ ಹೊರಹೊರಟ ಸರ್ವಜ್ಞ ‘ಮಂಡೆ ಬೋಳಿಸಿಕೊಂಡು, ತುಂಡುಗಂಬಳಿ ಹೊದೆದು ನಡೆದ’. ಅವನಂತೆ ಸಿದ್ಧಾರೂಢರು, ಶಿಶುನಾಳ ಷರೀಫರು ಮೊದಾನ ಅನೇಕ ಸಾಧುಸಂತರು ಕಂಬಳಿಯನ್ನು ಹೊದೆದು ನಡೆದ ಕಲ್ಪನೆ ಇದೆ. ಕಂಬಳಿ ಹೊದೆಯುವುದು ವೈರಾಗ್ಯ ಸ್ವೀಕರಿಸಿದ್ದರೆ ಸಂಕೇತ. ಇದು ವಿರಾಗಿಗಳ ಸರ್ವೇಸಾಧಾರಣ ವೇಷ.

ಕರಿ ಕಂಬಳಿ ಅತ್ಯಂತ ಪವಿತ್ರವೂ ಅಹುದು. ನಮ್ಮ ನಾಡಿನ ಕುರುಬ ಜನಾಂಗದವರು ಇದನ್ನು ತಮ್ಮ ಎಲ್ಲಾ ಮಂಗಳ ಕಾರ್ಯಗಳಲ್ಲೂ ವೇದಿಕೆಯ ಮೇಲಿಟ್ಟು ಪೂಜಿಸಿ, ಭಕ್ತಿಪೂರ್ವಕವಾಗಿ ನಮಿಸುತ್ತಾರೆ. ಅಕ್ಕ ಹೊದೆದದ್ದು ಅಂತಹ ವೈರಾಗ್ಯ ಸೂಚಕ ವಸ್ತ್ರವ ಈ ವ್ಯಾಖ್ಯಾನಕ್ಕೆ ಸಮರ್ಥನೆ ನೀಡುವ ಮತ್ತೊಂದು ನಿದರ್ಶನ ಹರಿಹರನ ‘ಕೇಶಿರಾಜ ದಣ್ಣಾಯಕರ ರಗಳೆ’ ಯಲ್ಲಿ ದೊರೆಯುತ್ತದೆ. ಒಮ್ಮೆ ಶಿವಗೋಷ್ಠಿಯಲ್ಲಿ ಕೇಶಿರಾಜ ದಣ್ಣಾಯಕ ನಿರತನಾಗಿದ್ದಾಗ ಧರಣೀಶ ಪೆರ್ಮಾಡಿ ಕರೆ ಕಳುಹಿಸುತ್ತಾನೆ. ಅದು ‘ಶರಣಸಂಗಕ್ಕೆ ಪಗಡೆಯಾಗಲು, ಆ ಆಶಾಂಬರನ ಸುತನಾದ ಕೇಶಿರಾಜನು ಕೇಶಾಂಬರವನ್ನುಟ್ಟು ಸೇವಕಾವೃತ್ತಿಯಂ ಮನದ ಕಾಲಿಂದೊದೆದು, ೧೨ ಆಸ್ಥಾನದಿಂದ ಹೊರಬೀಳುತ್ತಾನೆ. ಇಲ್ಲಿ ಕೇಶಿದಣಾಯಕ ಧರಿಸಿದ್ದು ಕೇಶಾಂಬರ ಅಂದರೆ ಕೂದಲಿಂದ ಮಾಡಿದ ನಿಲುವಂಗಿ ಅರ್ಥಾತ್ ಕರಿಕಂಬಳಿ !

**ಅಕ್ಕಗಳ ಕದಳಿ ಪ್ರಸಂಗ :**

ಕದಳಿ ಎಂಬುದು ಜನಪದದ ಒಂದು ಅಪಪ್ರಯೋಗ. ಅಲ್ಲಿ ಪದ ಪಲ್ಲಟಿಸಿದೆ; ಅರ್ಥವೂ ಪಲ್ಲಟಿಸಿದೆ–ಎಂಬುದು ಡಾ॥ ಎಂ.ಎಂ. ಕಲಬುರ್ಗಿಯವರ ಅಭಿಮತ. ಹೇಳುತ್ತಾರೆ;

‘ಮಂಗಳೂರಿನ ಕದರಿಬೆಟ್ಟ ನಾಥ ಸಂಪ್ರದಾಯದ ಸುಪ್ರಸಿದ್ಧ ನೆಲೆಯಾಗಿದೆ. ಇದರ ನಿಜರೂಪ ಕದಲಿ ಅಥವ ಕದಳಿ. ಶ್ರೀಶೈಲದ ‘ಕದಳಿ’ಯೆಂಬುದೂ ಬಹುಶಃ ನಾಥ ಸಂಪ್ರದಾಯದ ಇಂಥ ಒಂದು ನೆಲೆಯೇ ಆಗಿರಬಹುದು. ಶ್ರೀಶೈಲದ ದಾರಿಯಲ್ಲಿ ಅಲ್ಲಮ ಪ್ರಭುವು ಗೋರಖನಾಥನನ್ನು ಸಂಧಿಸುವುದೂ, ಶ್ರೀಶೈಲದಲ್ಲಿ ನಾಥರಿದ್ದ ಉಲ್ಲೇಖ ಸಿಗುವುದು ಈ ಅಭಿಪ್ರಾಯವನ್ನು ಬೆಂಬಲಿಸುತ್ತದೆ. ಶ್ರೀಶೈಲದ ಒಂದು ಭಾಗವಾದ ಈ ಕ್ಷೇತ್ರಕ್ಕೆ ಮಹಾದೇವಿಯಕ್ಕ ಹೋಗಿರಬಹುದು. ಕಾಲಕ್ರಮದಲ್ಲಿ ಈ ‘ಕದಳಿ’ ಎಂಬುದಕ್ಕೆ ಬಾಳೆಯೆಂಬ ವಾಚ್ಯಾರ್ಥವನ್ನು ವಿದ್ವಾಂಸರು ಗ್ರಹಿಸಿಕೊಂಡರೆ, ಆಧುನಿಕರು ಶ್ರೀಶೈಲ ಪರ್ವತದ ಒಂದು ಭಾಗದಲ್ಲಿ ಬಾಳೆವನವನ್ನು ಕಂಡು, ಅದೇ ಮಹಾದೇವಿಯ ಐಕ್ಯಸ್ಥಳವೆಂದು ಭಾವಿಸಿದರು. ಈ ಪರ್ವತದಲ್ಲಿ ಇಂಥ ಬಾಳೇವನಗಳು ಇನ್ನೂ ಅನೇಕ ಇರಬಹುದು. ಒಟ್ಟಿನಲ್ಲಿ ‘ಕದಳಿ’ ಯೆಂಬುದು ನಾಥ ಸಂಪ್ರದಾಯದ ಕ್ಷೇತ್ರಕ್ಕೆ ಇರುವ ಒಂದು ಪಾರಿಭಾಷಿಕ ಹೆಸರಿರಬಹುದು.೧೩

ಈ ಊಹೆ ಸಂಶೋಧಕನಿಗೆ ಆಹ್ವಾನವೂ ಅಹುದು; ಚಿಂತನೆಯ ಆಹಾರವೂ ಅಹುದು. ಪ್ರಾಚೀನ ಯುಗಗಳಿಂದಲೂ ಕರ್ನಾಟಕದಲ್ಲಿ ಸಿದ್ಧ ಮತ್ತು ನಾಥಪಂಥಗಳು ತುಂಬು ಪ್ರಚುರ್ಯದಲ್ಲಿದ್ದುದುಂಟು. ಬೌದ್ಧ ಮತ್ತು ಜೈನಧರ್ಮಗಳು ತಮ್ಮ ಪ್ರಭಾವ ಬೀರುವ ಮುನ್ನ ಮೇಲಿನವೆರಡೂ ಪಂಥಗಳು ಪ್ರಚಾರದಲ್ಲಿದ್ದುವೆಂಬುದಕ್ಕೆ ಅನೇಕ ನಿದರ್ಶನಗಳಿವೆ. ಕದ್ರಿ ಅಥವಾ ಕದರಿ ಆ ಸಂಪ್ರದಾಯಗಳ ನೆಲವೀಡು, ಕದರಿ ಕದಳಿಯ ಮೂಲ ರೂಪವಾಗಿದ್ದಿರಬಹುದು. ಎಂತಾದರೂ ಪ್ರಕೃತ ಸಂದರ್ಭದಲ್ಲಿ ‘ಕದಳಿ’ ಎಂಬುದಕ್ಕೆ ‘ಬಾಳೆ’ ಎಂಬ ಅರ್ಥವನ್ನು ಅನ್ವಯಿಸಬಾರದು ಅನ್ನಿಸುತ್ತದೆ. ಅಕ್ಕ ಅಲ್ಲಮರ ಶಬ್ದಕೋಶದಲ್ಲಂತೂ, ‘ಕದಳಿ’ ಗೆ ‘ಬಾಳೆ’ ಎಂಬರ್ಥ ಇದ್ದಂತಿಲ್ಲ.

---

೧೨. ಹರಿಹರ, ಕೇಶಿರಾಜ ದಣ್ಣಾಯಕರ ರಗಳೆ, ಸ್ಥಳ – ೧.

೧೩. ಡಾ॥ ಎಂ.ಎಂ.ಕಲಬುರ್ಗಿಯವರು ೨೫.೦೨.೧೯೯೨ ರಂದು ನನಗೆ ಬರೆದ ಪತ್ರ.

ಕದಳಿ ಎಂಬುದು ತನು, ಕದಳಿ ಎಂಬುದು ಮನ, ಕದಳಿ ಎಂಬುದು

ವಿಷಯ ಸಂಕುಳ; ಕದಳಿ ಎಂಬುದು ಭವ ಘೋರಾರಣ್ಯ;
ಕದಲಿ ಎಂಬುದು ಗೆದ್ದು ತವೆ ಬದುಕಿ ಬಂದ ಕದಳಿಯ ಬನದಲ್ಲಿ
ಭವಹರನ ಕಂಡೆನು; ಬಿಗಿದೊಲಿದಪ್ಪಿದ ಚೆನ್ನಮಲ್ಲಿಕಾರ್ಜುನ
ಹೃದಯ ಕಮಲದಲ್ಲಿ ಅಡಗಿದೆನು.

– (ವಚ.೨೦೩)

ಇಲ್ಲಿ ಕದಳಿ ಎಂದರೆ ತನು, ಮನ ವಿಷಯ (ಕಾಮ) ಸಂಕುಳ, ಭವಘೋರಾರಣ್ಯ, ಬಾಳೆಯಲ್ಲಿ ಬಾಳೆಯ ವನವೂ ಅಲ್ಲ, ಅದು ಲೌಕಿಕ ಕಾಮನೆಯ ಸಂಕೇತ. ಆ ಸಂಕೇತ ಸ್ವರೂಪಿ ಭವವನ್ನು ದಾಟಿ, ಅದರಾಚೆಗಿನ ಬಯಲಲ್ಲಿ (ಶೂನ್ಯದಲ್ಲಿ) ಭವಹರನನ್ನು ಕಂಡಿದ್ದಾಳೆ. ಅವನ ಹೃದಯದಲ್ಲಿ ಬೆರೆದು 'ಇಲ್ಲ' ವಾಗಿದ್ದಾಳೆ. ಇದು ನಿಜೈಕ್ಯದ ನಿಲವೇ ಹೊರತು ಬಾಳೆಯ ಬೆತ್ತಲೆ ಪದ ಅಲ್ಲ.

ಕರ್ಮವೆಂಬ ಕದಳಿ ಎನಗೆ, ಕಾಯವೆಂಬ ಕದಳಿ ನಿಮಗೆ, ಮಾಟವೆಂಬ ಕದಳಿ ಬಸವಣ್ಣಂಗೆ, ಭಾವವೆಂಬ ಕದಳಿ ಚೆನ್ನಬಸವಣ್ಣಂಗೆ ಬಂದ ಬಂದ ಭಾವ ಸೆ ಸಂದಿತ್ತು. ಎನ್ನಂಗದವಸಾನವ ಹೇಳಾ ಚೆನ್ನಮಲ್ಲಿಕಾರ್ಜು. ೧೪

ತನ್ನ ಐಕ್ಯತೆಯ ನೆಲೆಯನ್ನರುಹಬೇಕೆಂದು ಪ್ರಭುವನ್ನು ಅಕ್ಕ ಕೇಳಿಕೊಳ್ಳುವ ಈ ವಚನ ಸಂದರ್ಭದಲ್ಲಿ 'ಕದಳಿ'ಗೆ 'ನಾನು–ನೀನು' ಎಂಬ ದ್ವೈತಾರ್ಥ ಪ್ರಾಪ್ತವಾದಂತೆ ತೋರುತ್ತದೆ. ಆದರೂ ಅದೂ ಸಹ ಭವದ ಉಪಾದಿಯ ಸಂಕೇತವೇ. ಅದನ್ನರಿತೇ ಪ್ರಭು ಸೂಕ್ತ ಉತ್ತರವನ್ನೀಯುತ್ತಾ :

ನೀನ ನಾನೆಂಬುಭಯ ಸಂಗವಳಿದು ತಾನು ತಾನಾದ ತ್ರಿಕೂಟವೆಂಬ ಮಹಾಗಿರಿಯ ತುಟ್ಟ ತುದಿಯ ಮೆಟ್ಟಿ ನೋಡಲು ಬಟ್ಟ ಬಯಲು ಕಾಣಬಹುದು ನೋಡಾ; ಆ ಬಯಲ ಬೆರಸುವರೆ ತ್ರಿಕೂಟ ಗಿರಿಯೊಳಗೊಂದು ಕಾಣಬರದ ಕದಳಿಯುಂಟು ನೋಡಾ. ಕದಳಿಯ ಕಳದಲ್ಲಿ ಒಳಹೊಕ್ಕು ನೋಡಲು ತೊಳಗಿ ಬೆಳಗುವ ಜ್ಯೋತಿಯುಂಟು ಕೇಳಾ, ನಡೆಯಲ್ಲಿಗೆ ತಾಯೆ, ಗುಹೇಶ್ವರ ಲಿಂಗದಲ್ಲಿ ಪರಮ ಪದವಿ ನಿನಗೆ ಸ್ವಯವಹುದು ನೋಡಾ"

ಎಂದು ನಿರ್ದೇಶಿಸಿದ 'ನೀನು–ನಾನು' 'ಅಂಗ–ಲಿಂಗ' ಎಂಬ ದ್ವಂದ್ವವನ್ನು ದೂರಮಾಡಿ, ಅವುಗಳ ಐಕ್ಯಸ್ಥಿತಿಯ 'ತ್ರಿಕೂಟ' ವನ್ನು ಮೆಟ್ಟಿ ನೋಡಿದರೆ, ಬಟ್ಟಬಯಲೆಂಬ ಕದಳಿ, ಆ ಕದಳಿಯ ಒಳಹೊಕ್ಕು ನೋಡಿದರೆ 'ತೊಳಗಿ ಬೆಳಗುವ ಜ್ಯೋತಿ!' ಆ ಜ್ಯೋತಿಯಲ್ಲಿ ಜ್ಯೋತಿಯಾಗಿ ನಡೆ ಎಂದು ಸೂಚಿಸುತ್ತಾನೆ. ಇಲ್ಲಿ 'ಕದಳಿ' ಎಂಬುದು ಶಿವಸಮಯದ ಮಹಾಮಜಲಿನ ಶೂನ್ಯಸ್ಥಿತಿ. 'ಚೆನ್ನಮಲ್ಲಿಕಾರ್ಜುನಯ್ಯನ ನೆಚ್ಚಿನ ಗಿರಿಯ ಸುತ್ತಿ ನೋಡುತ್ತಾ ಬಂದು, ಕದಳಿಯ ಬನವ ಕಂಡೆ ನಾನು' ಎಂದು ಅಕ್ಕ

೧೪. ಗೂಳೂರು ಸಿದ್ದವೀರಣ್ಣೊಡೆಯರು ಸಂಗ್ರಹಿಸಿದ ಶೂನ್ಯ ಸಂಪಾದನೆ.
೧೫. ಅದೇ.

ನುಡಿಯುವೆಡೆಯಲ್ಲೂ" 'ಇಂತು ಮಹಾದೇವಿಯಕ್ಕಗಳು ಕದಳಿಯ ಬಾಗಿಲಲ್ಲಿ ನಿಂದು, ಕರಕಮಲದಿಷ್ಟಲಿಂಗಮಂ ತುರ್ಯದಿಂದ ಜ್ಞಾನ ಪ್ರಭಾವದೊಳು ಸುತ್ತಿಸುತ್ತಿರಲು" ೧೭ ಎಂಬ ಶೂನ್ಯಸಂಪಾದನಕಾರನ ಪ್ರಸ್ತಾವದ ವಚನದಲ್ಲೂ ಶೂನ್ಯದ ಆಧ್ಯಾತ್ಮಕ ಅರ್ಥವೇ ಸ್ಫುರಿಸುತ್ತದೆ.೧೮

॥ ೬ ॥

"ಮೈಮನಸ್ಸುಗಳಿಗಿದ್ದಂತೆ ಆತ್ಮಕ್ಕೂ ಹಸಿವೆ ಎಂಬುದಿದೆ. ಮೈ ಹಸಿವೆ ಅನ್ನ, ನಿದ್ರೆ, ಮೈಥುನಗಳಿಂದ ಇಂಗಿದರೆ, ಮನಸ್ಸಿನ ಹಸಿವೆ ಚಿತ್ರ, ಶಿಲ್ಪ, ನೃತ್ಯ, ಸಂಗೀತ, ಸಾಹಿತ್ಯಾದಿ ಲಲಿತಕಲೆಗಳ (Fine Arts) ಮೂಲಕ ತೃಪ್ತವಾಗುತ್ತದೆ. ಆದರೆ ಉತ್ತಿಷ್ಠಿತ ಪ್ರಾಣಿ, ಇಲ್ಲವೇ ಪತಿತ ದೇವತೆ ಎಂದೆನಿಸಿಕೊಂಡ ಮಾನವ ಮೈ ಹಸಿವೆಯನ್ನು ಇಂಗಿಸುವಷ್ಟಿಂದಲೇ ತೃಪ್ತನಾಗಲಾರ. ಅವನಿಗೆ ಲೋಕವನ್ನು ಅನುಭವಿಸುವ ಹೃದಯವಿದೆ. ತನ್ನ ಪರಿಸರದೊಡನೆ ಸ್ಪಂದಿಸುವ ಚೈತನ್ಯವಿದೆ. ತನ್ನ ಅನುಭವದ ಕಕ್ಷೆಯಲ್ಲಿ ಅಳವಟ್ಟದ್ದನ್ನು ಕಲೆಯ ಮೂಲಕ ಅಭಿವ್ಯಕ್ತಪಡಿಸುವ ಸಾಮರ್ಥ್ಯವಿದೆ. ಮರಳಿನಲ್ಲಿ ಎಣ್ಣೆ ತೆಗೆವ, ಕಲ್ಲಲ್ಲಿ ನಾರೆತ್ತುವ, ಶೂನ್ಯದಲ್ಲಿ ಸೃಷ್ಟಿ ಮಾಡುವ ಗಾರುಡಿಗತನ ಇದೆ. ಕವಿಚೇತನ ಸೌಂದರ್ಯಾನುಭೂತಿಯ ಕಾವ್ಯಾಭಿವ್ಯಕ್ತಿ ಪಡೆದಾಗ, ಸಹೃದಯ ಚೇತನ ಅದನ್ನು ಆಸ್ವಾದಿಸಿ ಆನಂದಿಸುತ್ತದೆ. ಆ ಆನಂದವನ್ನು ಕಾವ್ಯಾನಂದ ಅಥವಾ ರಸ ಎಂದು ಕರೆದಿದ್ದಾರೆ. ನಮ್ಮ ಭಾರತೀಯ ಕಾವ್ಯಮೀಮಾಂಸಕರು.

೧೬ ಅದೇ.
೧೭. ಅದೇ
೧೮. ಅದಕ್ಕೆ ಪೋಷಕವಾಗಿ ಒಂದು ಜಾನಪದೀಯ ಪದ್ಯ ಸಂದರ್ಭವನ್ನು ಇಲ್ಲಿ ಸೂಚಿಸಬಯಸುತ್ತೇನೆ. ನನ್ನ ತಾಯಿ, ನನ್ನ ಚಿಕ್ಕಂದಿನಲ್ಲಿ

ಸಟ್ಟಂ ಸರ್ವತ್ತಿನಲ್ಲಿ ನೆಟ್ಟ ಮಧ್ಯಾಹ್ನದಲ್ಲಿ ಕೊಟ್ಟಲ್ಲೆ ನಿಮ್ಮಪ್ಪ ಬಲಗೈಯ !
ಕೊಟ್ಟಲ್ಲೆ ನಿಮ್ಮಪ್ಪ ಬಲಗೈ ಭಾಷೆಯ ತಪಿತಲ್ಲೆ ಕೆಂಚೀ ಬರುವುದೊ ॥

ಎಂದು 'ಹುಳಿಯಾರು ಕೆಂಚಮ್ಮ ಕದಳಿ ಹೊಕ್ಕ ಪದ' ಹಾಡುತ್ತಿದ್ದರು. ಕದಳಿಯ ಅರ್ಥ ಏನೆಂದು ಅವರನ್ನು ಕೇಳಿದಾಗ, 'ಕೆಂಚವ್ವ ಹುಳಿಯಾರು ಕೆರೆ ನೀರಿಲ್ಲಿ ಮುಳುಗು (ಆ) ಮರವಾದಳು' ಎನ್ನುತ್ತಿದ್ದರು. ತನ್ನ ತಾಯಿ ವಿದ್ಯಾವತಿ ಅಲ್ಲ; ಆಕೆ ನಿರಕ್ಷರಕುಕ್ಷಿ. ಆದರೆ ಸುದೀರ್ಘವಾಗಿ 'ಕೆರೆಗೆ ಹಾರ' ವಾದ ಜಾನಪದೀಯ ಕಥನ ಕವನವನ್ನು ಹಾಡುವಾಗ ಪ್ರತಿಪದಕ್ಕೂ ಅರ್ಥ ವಿವರಣೆ ಕೊಡುತ್ತಿದ್ದುದುಂಟು. ಕೆರೆ ನೀರಿನಲ್ಲಿ ಮುಳುಗಿ ಅಮರ ಆದಳು ಎಂಬುದು 'ಕದಳಿ' ಹೊಕ್ಕ ಅರ್ಥ. ಅದು ಪ್ರಕೃತದ ಆಧ್ಯಾತ್ಮಿಕಾರ್ಥವಾದ 'ಐಕ್ಯ' ಅಥವ 'ಶಿವ' ಎಂಬುದಕ್ಕೆ ಪೂರಕವಾಗಿದೆ.

ಮಾನವನ ವಿಕಾಸಶೀಲ ಮನಸ್ಸು ಸದಾ ನವನವೋನ್ಮೇಷಶಾಲಿಯಾದಂತೆ, ಸದಾ ಊರ್ಧ್ವಗಾಮಿಯೂ ನಕ್ಷತ್ರಯಾತ್ರಿಯೂ ಆಗಿದೆ. ಭೂಮಿಯಿಂದ ಭೂಮದವರೆಗೂ ವ್ಯಾಪಿತವಾಗಿ, ವಿಶ್ವದಾಚೆಗೂ, ನಾಲ್ವೆರಡು ಎತ್ತರದಲ್ಲಿ ನಿಲ್ಲುವ ನಿಂತು ನೋಡುವ ಅನ್ಯಾದೃಶ ದಕ್ಷತೆ ಇದೆ ಅದಕ್ಕೆ. ನಿರ್ಗುಣ, ನಿರಕಾರ ಶಕ್ತಿಯನ್ನು ಸಗುಣ ಸಾಕಾರಗೊಳಿಸುವ, ಅಚಿಂತ್ಯ ಅನೂಹ್ಯ ಅಗೋಚರ ಎನ್ನಿಸಿದ್ದನ್ನು ಸಚಿತ್ರ, ಸದ್ರೂಪ, ಸಗೋಚರಗೊಳಿಸುವ ಸಾಮರ್ಥ್ಯವೂ, ಅಗ್ರಾಹ್ಯವೆನಿಸಿದ್ದನ್ನು ಕಣ್ಣಾರ ಕಂಡು, ಕೈಯಾರ ಕಂಡರಿಸುವ ಚಾತುರ್ಯವೂ ಅದಕ್ಕಿದೆ. ಕಾವ್ಯಾನುಭೂತಿಗಿಂತಲೂ ಮಿಗಿಲಾದ ಆತ್ಮಾನುಭೂತಿ ಆದರದು. ಅದೇ ಮನುಕುಲ ಪ್ರಜ್ಞೆಯ ತುರೀಯ ಸ್ವರ. ಕವಿಚೇನತ ಸೌಂದರ್ಯದ ಸೀಮೆಯಲ್ಲಿ ವಸಂತ ವಿಹಾರ ಕೈಗೊಂಡಂತೆ. ಋಷಿಚೇತನ ಸತ್ಯ ಶಾಶ್ವತ ನಿತ್ಯ ಪರಿಪೂರ್ಣವಾದ ಆಧ್ಯಾತ್ಮ ವಲಯದಲ್ಲಿ ವಿಹರಿಸಿ ವಿಶ್ರಾಂತಿವಡೆಯುತ್ತದೆ. ಆಧ್ಯಾತ್ಮಲೋಕದ ಆತ್ಮಾಂದ ಅಥವಾ ಬ್ರಹ್ಮಾನಂದವು ಕಲಾಲೋಕದ ಕಾವ್ಯಾನಂದಕ್ಕಿಂತಲೂ ಮಿಗಿಲಾದದ್ದು, ಬಹುಮೌಲ್ಯವುಳ್ಳದ್ದು. ಕವಿ ಬೇಂದ್ರೆಯವರು ಹೇಳುವಂತೆ ಕಾವ್ಯಾನಂದ 'ಓಂಕಾರ ಶಂಕನಾದಕ್ಕಿಂತ ಕಿಂಚಿದೂನ' ವಾದದ್ದು. ಇದು ಶಬ್ದಾರ್ಥ ಸಂಜನಿತ. ಅದು ನಾದಬಿಂದು ಕಳಾತೀತ. ಇದು ಸಹೃದಯ ಹೃದಯಾಹ್ಲಾದಕಾರಿಣಿ, ಅದು ಅಪರೋಕ್ಷ ಜ್ಞಾನಿಗಳ ಆತ್ಮಾನಂದ ಬೋಧಿಸಿನಿ, ಕಾವ್ಯಾನಂದವನ್ನು 'ಸಕಲಪ್ರಯೋಜನ ಮೌಲಿಭೂತಾಮ್' ಎಂತಲೂ, 'ಬ್ರಹ್ಮಾನಂದ ಸಹೋದರ' ಎಂತಲೂ ಕರೆದು; ನಿಜ. ಕಾವ್ಯಾನಂದ ಬ್ರಹ್ಮಾನಂದದ ಸಹೋದರ ನಿಜ. ಆದರೆ ಬ್ರಹ್ಮಾನಂದ ಅಲ್ಲ. ಬ್ರಹ್ಮಾನಂದವೇ ಬೇರೆ. ಅದು ಕಾವ್ಯಾನಂದದ ಹಿರಿಯ ಅಣ್ಣ. ಆದರದು ಅನುಭೂತಿಯ ಮೊದಲ ದರ್ಜೆ, ಅಭಿವ್ಯಕ್ತಿಯ ತುರೀಯ ಸ್ತರ, ಆನಂದದ ಮಹಾಮಜಲು ! ಆ ಮಜಲಿಗೇರಲು ಸಂದ ಸೋಪಾನವೇ ಆಧ್ಯಾತ್ಮ ಸಾಹಿತ್ಯ.

ಕಾವ್ಯಾನಂದಕ್ಕೆ ಬೇಕಾಗುವ ಪರಿಕರಗಳೇ ಬೇರೆ. ಬ್ರಹ್ಮಾನಂದ ಬಯಸುವ ಸಿದ್ಧತೆಗಳೇ ಬೇರೆ. ಅದಕ್ಕೆ 'ಅಲಂಕಾರ ಅನಿವಾರ್ಯ, ಇದಕ್ಕೆ ತನ್ನನ್ನು ತಾನು ಅನಾವರಣಗೊಳಿಸಿಕೊಳ್ಳುವ ಹಂತಗಳು ಮುಖ್ಯ. 'ಅಲಂಕಾರ'ದ ಅರ್ಥ ಕೇವಲ ಯಮಕಾದಿ ಶಬ್ದಾಲಂಕಾರಗಳಿಗಾಗಲಿ, ಉಪಮಾ ರೂಪಕ, ದೀಪಕ ಅರ್ಥಾಂತರನ್ಯಾಸ ಮೊದಲಾದ ನೂರಿಪ್ಪತ್ತು ಅರ್ಥಾಲಂಕಾರಗಳಿಗಾಗಲಿ ಸೀಮಿತವಾಗಿಲ್ಲ. ಅವನ್ನೂ ಒಳಗೊಂಡು ಕಾವ್ಯ ವ್ಯಂಜಿಸುವ ಧ್ವನಿ, ರಂಜನೀಯ ವಕ್ರೋಕ್ತಿ, ಆನಂದಾನುಭೂತಿಯನ್ನೀವ ರಸ, ಔಚಿತ್ಯವರಿತ ಪದ-ಪದಪುಂಜ, ಅರ್ಥಪೂರ್ಣ ಸರಳ ಅಥವ ಶ್ರೀಮಂತ ಶೈಲಿ, ಮಧುರ ಮಂಜುಳವೆನಿಸುವ ನಾದಮೋದ, ಅನುಭವೈಕ್ಯವೇದ್ಯವಾಗುವ ದರ್ಶನ- ಇವೆಲ್ಲವನ್ನೂ ಗರ್ಭೀಕರಿಸಿಕೊಂಡು ರೀತಿಯೇ ಕಾವ್ಯದ ಆತ್ಮವೆಂದು ಘೋಷಿಸಿಕೊಳ್ಳುವ 'ಕಾವ್ಯ ಶೋಭಾಕರಾವ್ ಧರ್ಮಾನ್' ಆದ ಸೌಂದರ್ಯಾಲಂಕಾರ: ಅವುಗಳೇ ಕಾವ್ಯಧರ್ಮಗಳು. ಪ್ರತಿಭೆಯೇ ಕಾವ್ಯ ಜನನಿಯಾದ್ದರಿಂದ ಕವಿ ಪ್ರತಿಭೆಯಿಂದ ದೀಪ್ತವಾಗಿ, ವ್ಯುತ್ಪತ್ತಿ ಅಂದರೆ ಕಾವ್ಯಾನುಭವ ಮತ್ತು ಜೀವನಾನುಭವದಿಂದ ಗಟ್ಟಿಗೊಂಡು, ಕವಿಯ ಸಹಜ ಸ್ಫೂರ್ತಿಯಿಂದ ಉತ್ತೇಜಿತವಾಗಿ ಪ್ರಕಟಗೊಳ್ಳುವ ಪ್ರತಿಮೆಗಳೇ ಕಾವ್ಯದ ಅಂಗ-ಆತ್ಮಗಳು. ಸಂಸ್ಕೃತಿಯ ಆಕರ್ಷಣೆಗೆ ಮನಸೋಲದ ವೀರವೈರಾಗ್ಯ, ಘೋರ ತಪಸ್ಸು, ಅನುಪಮ ನಿಷ್ಠೆ- ಇವು ಧರ್ಮದ ದೇಹಾತ್ಮಗಳು. ರಸನಿಷ್ಪತ್ತಿ ಕಾವ್ಯದ ಪರಮಗುರಿ. ಮೋಕ್ಷಪ್ರಾಪ್ತಿ ಧರ್ಮದ ಚರಮ ಸಿದ್ಧಿ. ಅಲಂಕಾರ, ರೀತಿ, ಧ್ವನಿ, ರಸ ಮತ್ತು ಔಚಿತ್ಯಗಳೆಂಬ ಪ್ರಸ್ಥಾನ ಪಂಚಕಗಳು ಕಾವ್ಯದ ಪಂಚಪ್ರಾಣಗಳಾದರೆ, ದಯೆ, ದಮ, ದಾನ, ತಪ, ಶೀಲಗಳೆಂಬ ಸಿದ್ಧಶಿಲಾ ಶುದ್ಧಿದ್ರವ್ಯಗಳು ಧರ್ಮದ ಆತ್ಮದಾತ್ಮಗಳು. ಸರಳವಾಗಿ ವ್ಯಾಖ್ಯಾನಿಸುವುದಾದರೆ ಧರ್ಮ ಎನ್ನುವುದು ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ ವ್ಯವಸ್ಥೆ: ಕಾವ್ಯ ಎನ್ನುವುದು ಆ ಮೌಲ್ಯಗಳನ್ನ ಪ್ರಚುರಪಡಿಸುವ ಸಾಧನ. ಎಲ್ಲಿ ಕಾವ್ಯಮೌಲ್ಯ ಕಥಾವಸ್ತುವನ್ನು ಆಲಂಗಿಸಿಕೊಂಡಿರುತ್ತದೋ ಅಲ್ಲಿ ಧರ್ಮ ಅನುಷ್ಠಾನ ಯೋಗ್ಯವೆನಿಸುತ್ತದೆ. ಎಲ್ಲಿ ಆಧ್ಯಾತ್ಮ ಭೂಯಿಷ್ಠತೆ ಒದಗುತ್ತದೋ ಅಲ್ಲಿ ಕಾವ್ಯ ಮಹೋನ್ನತಿ (Sublimity) ಗೇರುತ್ತದೆ. ಅಲ್ಲಿ ಋಷಿದರ್ಶನ ಕವಿಕಾಣ್ಕೆಯಾಗಿ ಮಾರ್ಪಟ್ಟು ಕಮನೀಯ ಕಾವ್ಯ ಕುಂಜದಲ್ಲಿ ರಂಜನೆಯನ್ನೊದಗಿಸಿ, ಆನಂದವನ್ನು ದಯಪಾಲಿಸುತ್ತದೆ. ಆದ್ದರಿಂದ ಕಾವ್ಯದ ಉದ್ದೇಶ ಧರ್ಮದ ಉದ್ದೇಶದಿಂದ ಭಿನ್ನವಾದುದಲ್ಲ. ಉಲ್ಲಾಸ ಅದರ ಒಂದು ಮುಖ, ವಿಕಾಸ ಅದರ ಮತ್ತೊಂದು ಮುಖ. ಅದು ಮನೋಲ್ಲಾಸದ ಜೊತೆಯಲ್ಲೇ ಆತ್ಮವಿಶ್ವಾಸವನ್ನೂ ಸಾಧಿಸುತ್ತದೆ. ಆತ್ಮ ಸಾಕ್ಷಾತ್ಕಾರವನ್ನೂ ಮಾಡಿಸುತ್ತದೆ. ಮತತತ್ತ್ವ ಅಥವ ಧರ್ಮಸಿದ್ಧಾಂತಗಳೆಂಬ ಕ್ವಿನೀನನ್ನು ಜನಮದ ಕೋಶಕ್ಕಿಳಿಸುವಲ್ಲಿ ಕಾವ್ಯಾಂಶವೆಂಬ ಸಕ್ಕರೆ ಅಂಗಿ ಬೇಕೇಬೇಕು. ಕಾವ್ಯದಿಂದ ಧರ್ಮಕ್ಕೆ ಪ್ರಚಾರ, ಜನಪ್ರಿಯತೆ ದೊರೆತರೆ, ಧರ್ಮದಿಂದ ಕಾವ್ಯಕ್ಕೆ ಘನತೆ, ಗೌರವಗಳು ಹೆಚ್ಚುತ್ತವೆ. ಈ ರೀತಿ ಪರಸ್ಪರ ಪೂರಕ ಪೋಷಕ ಶಕ್ತಿಗಳಾದ ಕಾವ್ಯಧರ್ಮ ಮತ್ತು ಧರ್ಮಗಳ ಸಮೀಕರಣವೇ ಕಾವ್ಯಸಿದ್ಧಿ.

ಪ್ರಕೃತ ಸಂದರ್ಭದಲ್ಲಿ ಧರ್ಮ ಎಂದರೆ ವೀರಶೈವ ಧರ್ಮ. ಜೀವ ಮತ್ತು ದೇವ ಒಂದಾಗಿ 'ಶಿವ' ಅಥವಾ 'ಶೂನ್ಯ' ಆಗುವ ಪರಿಣಾಮ. ಕಾವ್ಯಧರ್ಮ ಎಂದರೆ ಮೇಲೆ ಹೇಳಿದಂತೆ ಅಲಂಕಾರಾದಿಗಳಿಂದ ಅಭಿವ್ಯಕ್ತವಾಗುವ ಕಾವ್ಯಸಿದ್ಧಿ. ಕಾವ್ಯದಂತೆಯೇ ಧರ್ಮವೂ ಒಂದು ಮಾನವ ನಿರ್ಮಾಣ. 'ಜಗದ್ವಿಖ್ಯಾತ ಕವಿ-ವಿಮರ್ಶಕ ಟಿ.ಎಸ್.ಎಲಿಯಟ್ ಕಾವ್ಯಮೀಮಾಂಸ ಸಂದರ್ಭದಲ್ಲಿ ಹೇಳುವ 'ವ್ಯಕ್ತಿತ್ವ ನಿರಸನ ಸಿದ್ಧಾಂತ' (Extinction of personality) ವನ್ನು ಇಲ್ಲಿ ಸ್ಮರಿಸಬಹುದು. ಅಲ್ಲಿ Extinct ಅಂದರೆ ಇಲ್ಲವಾಗುವುದಲ್ಲ ಎಲ್ಲವಾಗುವುದು. ನೀರಿನ ಒಂದು ಹನಿಗೆ ಅಸ್ತಿತ್ವವಿದ್ದರೂ ಅದು ತನ್ನನ್ನು ತಾನು ಪ್ರಕಟಿಸಿಕೊಳ್ಳುವ ಅಥವಾ

ಸಂರಕ್ಷಿಸಿಕೊಳ್ಳುವ ಇಲ್ಲವೇ ಸಮರ್ಥಿಸಿಕೊಳ್ಳುವ ಸಾಮರ್ಥ್ಯ ಒಡೆದುಕ್ಕ, ಆದರೆ ಅದೇ ಹನಿ ಸಾಗರ ಸೇರಿದರೆ ಸಾಗರದ ಸಾಮರ್ಥ್ಯ ಪಡೆಯುತ್ತದೆ. ಸಾಗರವೆ ತಾನಾಗುತ್ತದೆ. ಅದೇರೀತಿ ವ್ಯಷ್ಠಿ (Individual) ಸಮಷ್ಟಿ (Universal) ಯಲ್ಲಿ ಬೆರೆದು ಅಥವಾ ನಿರಸನಗೊಂಡು (to become extinct) ಸಮನ್ವಯ ಸಾಧಿಸುತದೆ. ಅರ್ಥಾತ್ ಕವಿಚೇತನ ಮತ್ತು ವಿಶ್ವಚೇತನಗಳ ಸಹಯೋಗದಿಂದ ಕಾವ್ಯನೂತನ ನಿರ್ಮಾಣವಾಗುತ್ತದೆ. ಅಂಥದೇ ಪ್ರಕ್ರಿಯೆ ಶಿವಾದ್ವೈತ ಸಂದರ್ಭದಲ್ಲೂ ಆಗಿ ಮುಗಿಯುತ್ತದೆ. ಮೊದಲೇ ಹೇಳಿದಂತೆ, ಅಲಲಿ 'ಜಿವ' ಮತ್ತು 'ದೇವ' ಇಬ್ಬರೂ ಸೇರಿ ಮೂರನೆಯ 'ಶಿವ' ಆಗುತ್ತಾರೆ. ಅಲ್ಲಿ ಜೀವ; ದೇವ ಭಿನ್ನರಲ್ಲ ಅಥವಾ ಅಲ್ಲಿ ಜೀವನೂ ಇಲ್ಲ, ದೇವನೂ ಇಲ್ಲ. ಅವರಿಬ್ಬರೂ ಸೇರಿ ಆದ ಬಯಲು. ಅಂದರೆ ಅವರಿಬ್ಬರೂ ಸೇರಿ ಆದ ಮೂರನೆಯ 'ಶಿವ' ಸ್ತಿತಿ ಉಂಟು. ನೀರು ಮತ್ತು ಅಲೆ ಸೇರಿದ ಆದ ಸಾಗರ, ಕಿರಣ ಮತ್ತು ಕಾಂತಿ ಕೂಡಿ ಆದ ಸೂರ್ಯ, ದಳ ಮತ್ತು ಪರಿಮಳ ಬೆರೆತು ಆದ ಹೂವು. ಅದು ಭೇದದೊಳಗಣ ಅಭೇದ, ಶಬ್ದದೊಳಗಣ ನಿಶ್ಯಬ್ಧ, ನಾಮರೂಪ ಕ್ರೀ ಕಳಾಪ ವಿರಾಮ ಸ್ತಿತಿ. ವೀರಶೈವ ಪರಿಭಾಷೆಯಲ್ಲಿ ಅದು ಅಂಗ ಮತ್ತು ಲಿಂಗ ಬೆರೆತಾದ ಸಾಮರಸ್ಯ ಸ್ವರೂಪ, ಜೀವ ಮತ್ತು ದೇವ ಇವೆರಡರ ಐಕ್ಯಾನುಸಂಧಾನ ಸ್ವರೂಪ. ಅದೇ ಶಿವ, ಅದೇ ಶೂನ್ಯ. ಈ ಸಿದ್ಧಿಗೆ ಸಮೆದ ಸೋಪಾನಗಳು ಆರು; ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬ ಷಟ್‌ಸ್ಥಗಳು. ಸಾಧನ ಸಾಮಗ್ರಿಗಳು ಎಂಟು: ಗುರು, ಲಿಂಗ, ಜಂಗಮ, ಪ್ರಸಾದ, ಪಾದೋದಕ, ವಿಭೂತಿ, ರುದ್ರಾಕ್ಷಿ ಮತ್ತು ಮಂತ್ರ ಎಂಟು ಅಷ್ಟಾವರಗಳು. ಇದು ವೀರಶೈವ ಅಥವ ಶಿವಾದ್ವೈತ ದರ್ಶನದ ರೂಪರೇಷೆ.೧೯

ಧರ್ಮ ಮತ್ತು ಕಾವ್ಯ ಧರ್ಮಗಳೆರಡರಲ್ಲೂ ಸಾಮರಸ್ಯವನ್ನು ಸಾಧಿಸಿ, ತೋರಿಸಿದವಳು ಅಕ್ಕ. ಅವಳ ಆಧ್ಯಾತ್ಮಪರ ವಚನಗಳಲ್ಲಿ ಸಿದ್ಧಾಂತಕ್ಕಿಂತ ಹೆಚ್ಚಾಗಿ ಅನುಭಾವದ ಹರಹನ್ನು ಕಾಣುತ್ತೇವೆ. ಅವಳ ಅನುಭಾವಕ್ಕೆ ಭಕ್ತಿ– ಅದರಲ್ಲೂ ಸತಿ–ಪತಿ ಭಾವಭಕ್ತಿ ಮೂಲಧಾತು ಕೇಳಿ :

ಅಂಗವ ಲಿಂಗ ಮುಖದಲ್ಲಿ ಅರ್ಪಿಸಿ ಅಂಗ ಅನಂಗವಾಯಿತ್ತು
ಮನವ ಅರಿವಿಂಗೆ ಅರ್ಪಿಸಿ ಮನ ಲಯವಾಯಿತ್ತು
ಭಾವವ ತೃಪ್ತಿಗರ್ಪಿಸಿ ಭಾವ ಬಯಲಾಯಿತ್ತು
ಅಂಗ ಮನ ಭಾವವಳಿದ ಕಾರಣ ಕಾಯ ಅಕಾಯವಾಯಿತ್ತು
ಎನ್ನ ಕಾಯದ ಸುಖಭೋಗವ ಲಿಂಗವೆ ಭೋಗಿಸುವನಾಗಿ
ಶರಣ ಸತಿ ಲಿಂಗಪಿತಯಾದೆನು
ಇದು ಕಾರಣ ಚೆನ್ನಮಲ್ಲಿಕಾರ್ಜುನನೆಂಬ ಗಂಡನ
ಒಳಹೊಕ್ಕು ಬೆರೆದೆನು

– (ವ. ೧೮೦)

———

೧೯. ಸಾ.ಶಿ.ಮರುಳಯ್ಯ, ಶೂನ್ಯ ಸಂಪಾದನೆಗೊಂದು ಮುನ್ನುಡಿ, ಪು. ೩–೪

ಸರ್ವ ಸಮರ್ಪಣ ಭಾವದ ಹಿನ್ನೆಲೆಯಲ್ಲಿ ಅಕ್ಕನ ಅನುರಕ್ತಿಯ ಸತಿ–ಪತಿ ಭಾವ ಭಕ್ತಿ ಪ್ರಜ್ವಲಿಸಲಿದೆ. ಇದೇರೀತಿ ಶಿವಾದ್ವೈತ ದರ್ಶನದ ಲಿಂಗ–ಅಂಗ ಸಾಮರಸ್ಯ ಸ್ಥಿತಿಯನ್ನು ವ್ಯಾಖ್ಯಾನಿಸುವ ಅಕ್ಕನ ಬೆಡಗಿನ ವಚನವೊಮದು ಹೀಗಿದೆ;

ಜಲದ ಮಂಟಪದ ಮೇಲದ ಉರಿಯ ಚಪ್ಪರವಿಕ್ಕಿ,
ಆಲಿಕಲ್ಲ ಹಸೆಯ ಹಾಸಿ, ಬಾಸಿಗವ ಕಟ್ಟಿ,
ಕಾಲಿಲ್ಲದ ಹೆಂಡತಿಗೆ ತಲೆಯಿಲ್ಲದ ಗಂಡ ಬಂದು ಮದುವೆಯಾದನು –
ಎಂದೆಂದಿಗೂ ಬಿಡದ ಬಾಳುವೆ ಕೊಟ್ಟರೆನ್ನ,
ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ
ಮದುವೆಯ ಮಾಡಿದರೆಲೆಯವ್ವೆಗಳಿರಾ – (ವಚ.೫೨)

ಜಲದ ಮಂಟಪದ ಮೇಲೆ–ಚಂಚಲ ಅಥವಾ ಅಸ್ಥಿರವಾದ ಸಂಸಾರವೆಂಬ ಆಸರೆಯಲ್ಲಿ; ಉರಿಯ–ಜ್ಞಾನವೆಂಬ (ಅನಿ ಜ್ಞಾನದ ಸಂಕೇತ) ಚಪ್ಪರ ಹಾಕಿ ಅಂದರೆ ಜ್ಞಾನವನ್ನು ಅಳವಡಿಸಿಕೊಂಡು, ಅಂದರೆ ತುಂಬು ಜ್ಞಾನಿಗಳಾಗಿ, ಶಿವಜ್ಞಾನಿಗಳಾಗಿ; ಆಲಿಕಲ್ಲ ಹಸೆಯ ಹಾಸಿ ಸ್ವಯಂತೃಪ್ತರಾಗಿ (ಆಲಿಕಲ್ಲು ತೃಪ್ತಿಯ ಸಂಕೇತ) ಅಂದರೆ ಅನುಭವದ ತುಷ್ಟಿ ಪಡೆದುಕ ಬಾಸಿಗವ ಕಟಿ–ಸೌಹಾರ್ದ, ಸೌಜನ್ಯ ಸದ್ಭಾವ ಮೊದಲಾದ ಸುಗಂಧಪೂರಿತ ಹೂಗಳಿಂದ ಹೂವಲೆ ರಚಿಸಿ; ಕಾಲಿಲ್ಲದ ಹೆಂಡತಿಗೆ–ಸಂಸಾರವೆಂಬ ಕೆಸರಿನಲ್ಲಿ ಕಾಲೂರದಿರುವ ಜೀವಾತ್ಮ (ಅಂಗ) ಎಂಬ ಹೆಣ್ಣಿಗೆ; ತಲೆಯಿಲ್ಲದ ಗಂಡ–ರೂಪವಿಲಲದ, ನಿರ್ಗುಣ, ನಿರಕಾರನಾದ ಪರಸಿವ (ಲಿಂಗ) ಎಂಬ ಗಂಡು ಬಂದು; ಮದುವೆಯಾದನು–ಐಕ್ಯಾನುಸಂಧಾನಗೈದನು. ಇದು–ಈ ಐಕ್ಯಸ್ಥಿತಿ ಎಂದೆಂದಿಗೂ ಬಿಡದ ಬಾಳುವೆ ಅಂದರೆ ಎಂದೆಂದಿಗೂ ಅಗಲದ ಶಾಶ್ವತವಾದ ಶಿವ ಅಥವಾ ಶೂನ್ಯ ತಾನಾಗುವ ನಿಜದ ನೆಲೆಯ ಸಹಜ ಸ್ಥಿತಿ.

ಈ ಸ್ತರಕ್ಕೇರಿದವಳು, ಷಟ್‌ಸ್ಥಲಗಳಾಚೆಗೆ 'ಶೂನ್ಯ' ಸ್ಥಲಕ್ಕೇರಿ 'ಶಿವ' ಆದವಳು ಅಕ್ಕ. ಇದು ಅವಳೇರಿದ ಎತ್ತರದ ಬಿತ್ತರದ ನೆಲೆಯ ನಿಲುವು. ಅಂತೆಯೇ ವ್ಯಷ್ಟಿ ಮತ್ತು ಸಮಷ್ಟಿಗಳು ಒಡವೆರೆದು 'ಶಿವ' ಅಥವ 'ಶೂನ್ಯ' ಅದಾಗಿನ ನಿಜಸ್ಥಿತಿ ವರ್ಣನಾತೀತ. ಅಲ್ಲಿ ಬಹುಶಃ ಮಾತು ಮೈಲಿಗೆ ಎನಿಸಬಹುದು. ಆದರೂ ಅಕ್ಕ ಅಭಿವ್ಯಕ್ತಿಸುತ್ತಾಳೆ. :

ಲಿಂಗವೆನ್ನ ಲಿಂಗೈಕ್ಯವೆನ್ನೆ ಸಂಗವೆನ್ನೆ ನಿಸ್ಸಂಗವೆನ್ನೆ
ಆಯಿತ್ತೆನ್ನ ಆಗದೆನ್ನೆ, ನೀನೆನ್ನೆ, ನಾನೆನ್ನೆ
ಚೆನ್ನಮಲ್ಲಿಕಾರ್ಜುನನಲ್ಲಿ ಲಿಂಗೈಕ್ಯವಾದ ಬಳಿಕವೇನೂ ಎನ್ನೆನು – (ವಚ. ೧೮೯)

ಇದು ಅನುಭಾವದ ಅಮೃತಗೀತ. ಇಲ್ಲಿನದು ಶಬ್ದಮುಗ್ಧವಾಗುವ ಸ್ಥಿತಿ. ಅದು ಅಂಗದ ಹಂಗಿಲ್ಲದ, ಲಿಂಗದ ಮೋಹವಿಲ್ಲದ, ಅದರ ಅವೆರಡೂ ಕೂಡು ಆದ ಮೂರನೆಯ 'ಸಮಸ' ಸ್ಥಿತಿ. ಅಲ್ಲಿ ರವಿಯ ತಾಪವೂ ಇಲ್ಲ, ಶಶಿಯ ಶೈತ್ಯವೂ ಇಲ್ಲ. ಅವೆರಡನ್ನೂ ರೂಢಿಸಿಕೊಂಡ ತೇಜೋರೂಪವೊಂದುಂಟು. ಅದೇ 'ಶೂನ್ಯ'. ಅದೇ ಶಿವ ಅದೇ ನಿಜದ ನೆಲೆ, ಶಿವ ಸಮಯದ ಮಹಾಮಜಲು, ಮಹಾಬಯಲು, ಅದರ ಪೂರ್ಣದರ್ಶನ ಮಾಡಿಸಿದ್ದಾಳೆ ಇಲ್ಲಿ ಅಕ್ಕ.

ಅಣ್ಣ ಕನ್ನಡ ಕಾರಣ ಪುರುಷನಾದರೆ ಅಕ್ಕ ಕನ್ನಡದ ಕಾರಣ ಕನ್ಯೆ! ಕನ್ನಡದ, ಅಷ್ಟೇಕೆ ಜಗತ್ತಿ ಮೊತ್ತ ಮೊದಲ ಅಗ್ರಮಾನ್ಯ ಕವಿಯಿತ್ರಿ. ಅವಳ ಅನೇಕ ವಚನಗಳು ಬಂಧುರ ಭಾವಗೀತೆಗಳು. ಅವುಗಳಲ್ಲಿ ಭಾವದ ಕಾವಿದೆ ನಾದದ ಮೋದ ಇದೆ. ಅನುಭಾವ ಗೀತೆಗಳಿಗೂ ಆ ಭಾವಗೀತಾತ್ಮಕ ಚಾಲನೆ ಕೊಟ್ಟಿದ್ದಾಳೆ. ಆಕೆಯಲ್ಲಿ ಸ್ಪಂದಿಸಿದ ಭಾವಸ್ಪಟಿಕದಂತೆ ಪಾರದರ್ಶಕ, ಗುರುತಿಸುವಷ್ಟು ಸ್ಪಷ್ಟ ಗೋಚರ. ಶೈಲಿ ನೀರು ಹರಿದಂತೆ ಚಲನಶೀಲ; ಕಾವ್ಯ ಶಿಲ್ಪ ನಯನ ಮನೋಹರ ನಯಾಗರ ! ಆಕೆಯದು ಪರರೊಡ್ಡವವ ಕೊಳ್ಳದ ಭಾಷೆ; ಅನ್ಯಾಶ್ರಯ ನಿರಪೇಕ್ಷಿತ ಸದ್ಯೋಜಾತ ಸೃಷ್ಟಿ. ಅಕ್ಕನಲ್ಲಿ ಭಾವ ಭಾಷೆಗಳ ಸಂಲಗ್ನವೇರ್ಪಟ್ಟಂತೆ. ಶೈಲಿ ಶಿಲ್ಪಗಳಲ್ಲಿ ಸಹಜ ಸಹಯೋಗವಿದೆ. ಔಚಿತ್ಯವರಿತು ಪ್ರಯೋಗಗೊಂಡಿರುವ ಅಲಂಕಾರಗಳಂತೂ ಕಾವ್ಯಾಭಿವ್ಯಕ್ತಿಯ ಕುಸುರುಗಳಾಗಿವೆ. ಅಂಥವುಗಳಲ್ಲಿ ಒಂದೆರಡನ್ನು ಇಲ್ಲಿ ಅವಲೋಕಿಸಬಹುದು.

ಚಿಲಿಮಿಲಿಯೆಂದು ಓದುವ ಗಿಳಿಗಳಿರಾ ನೀವು ಕಾಣಿರೆ ನೀವು ಕಾಣಿರೇ
ಸರವೆತ್ತಿ ಹಾಡುವ ಕೋಗಿಲೆಗಳಿರಾ ನೀವು ಕಾಣಿರೇ ನೀವು ಕಾಣಿರೇ
ಎಱಗಿ ಬಂದಾಡುವ ತುಂಬಿಗಳಿಆ ನೀವು ಕಾಣಿರೇ ನೀವು ಕಾಣಿರೇ
ಸರೋವದೊಳಗಾಡುವ ಹಂಸೆಗಳಿರಾ ನೀವು ಕಾಣಿರೇ ನೀವು ಕಾಣಿರೇ
ಗಿರಿಗಹ್ವರದೊಳಗಾಡುವ ನವಿಲುಗಳಿರಾ ನೀವು ಕಾಣಿರೇ ನೀವು ಕಾಣಿರೇ
ಚೆನ್ನಮಲ್ಲಿಕಾರ್ಜುನನೆಲ್ಲಿರ್ದಹನೆಂದು ಹೇಳಿರೇ

– (ವಚ. ೧೮೯)

ಅಳಿ ಸಂಕುಳವೇ ಮಾಮವರೇ ಬೆಳದಿಂಗಳೇ ಕೋಗಿಲೆಯೇ
ನಿಮ್ಮೆಲ್ಲರನು ಒಂದ ಬೇಡುವೆನು
ಎನ್ನೊಡೆಯ ಚೆನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋಱಿರೇ

–(ವಚ. ೧೮೭)

ಭಾವ ಪುಷ್ಟಿಯ ಪೂರ್ನಆಭಿವ್ಯಕ್ತಿಗೆ ಪ್ರಕೃತಿ ಬಳಕೆಯಾಗಿರುವುದು ತುಂಬು ಔಚಿತ್ಯ ಓದುವ ಗಿಳಿ, ಹಾಡುವ ಕೋಗಿಲೆ, ಆಡುವ ದುಂಬಿ, ನಡೆದಾಡುವ ಹಂಸೆ, ನರ್ತಿಸುವ ನವಿಲು, ಚಿಗುರಿ ಚೆಲುವಾದ, ಮಾಮರ ಇವೇ ಮೊದಲಾದ ನಿಸರ್ಗ ಚೇತನಗಳನ್ನು ಕೂಗಿ ಕೇಳುತ್ತಾಳೆ. ತನ್ನೊಡೆಯನ್ನು ಕಂಡಿದ್ದರೆ ಕರೆದು ತೋರರೇ ಎಂದು. ಬೆಳಂದಿಗಳನ್ನೂ ಬೇಡುತ್ತಾಳೆ ದೈನ್ಯದಿಂದ. ಇಂಥೆಡೆಗಳಲ್ಲಿ ಭಾವ ತೀವ್ರ, ಭಾಷೆ ಬಂಧುರ. ಪ್ರಕೃತಿಯ ಪ್ರತಿವಸ್ತುವನ್ನೂ ಕುರಿತ ಈ ಆರ್ಥಭಾವದ ಪ್ರಾರ್ಥನಾಗೀತ, ಆಧುನಿಕಾರ್ಥದಲ್ಲೂ ಒಂದು ಅತ್ಯುತ್ತಮ ಭಾವಗೀತವಾಗಿದೆ.

ಅಕ್ಕ ಕೇಳಕ್ಕ ನಾನೊಂದು ಕನಸ ಕಂಡೆ
ಚಿಕ್ಕ ಚಿಕ್ಕ ಕೆಂಜೆಡಗಳ ಸುಲಿಪಲ್ಲ ಗೊರವನು
ಬಂದೆನ್ನ ನೆರೆದ ನೋಡವ್ವಾ
ಆತನನೆದಪ್ಪಿಕೊಂಡು ತಳವೆಳಗಾದೆನು

ಚೆನ್ನಮಲ್ಲಿಕಾರ್ಜುನ ಕಂಡ
ಕಣ್ಣ ಮುಚ್ಚಿ ತೆಱೆದು ತಳವೆಳಗಾದೆನು

– (ವಚ. ೩೭)

ಕನಸಿನ ಕಲ್ಪನೆಯ ಕುಸುರು, ಭಾವದ ನವುರು ಅಕ್ಕ, ಚಿಕ್ಕ, ಜೆಡೆ, ಕೆಂಜೆಡೆ, ಗೊರವ, ನೆರೆದ ಮೊದಲಾದ ಪರಿಣಾಮಕಾರೀ ಪದಗಳ ಪ್ರಯೋಗ ಇವು ಕವನಕ್ಕೊಂದು ಮೆರಗು ತಂದುಕೊಟ್ಟಿವೆ. ಈ ವಚನ ಕನಸಾದರೆ, ನನಸಿನಲ್ಲಿ ಕಂಡ ಚಿತ್ರಣ ಹೀಗಿದೆ:

ಹೊಳೆವ ಕೆಂಜೆಡೆಗಳ ಮಣಿಮಕುಟ
ಒಪ್ಪುವ ಸುಲಿಪಲ್ಲ ನಗೆಮೊಗದ ಕಂಗಳ ಕಾಂತಿಯ
ಈರೇಳು ಭುವನದ ಬೆಳಗುವ ದಿವ್ಯ ಸ್ವರೂಪನ ಕಂಡೆ ನಾನು
ಕಂಡೆನ್ನ ಕಂಗಳ ಬಱ ಹಿಂಗಿತ್ತಿಂದು
ಗಂಡ ಗಂಡರೆಲ್ಲರ ಹೆಂಡಹೆಂಡಿರಾಗಿ ಆಳುವ ಗರುವನ ಕಂಡೆ ನಾನು
ಜಗದಾದಿ ಶಕ್ತಿಯೊಳು ಬೆರಸಿ ಮಾತನಾಡುವ
ಪರಮ ಗುರು ಚೆನ್ನಮಲ್ಲಿಕಾರ್ಜುನನ ನಿಲವು ಕಂಡು ಬದುಕಿದೆನು

– (ವಚ.೨೦೧)

ಈ ದೈವ ಸಾಕ್ಷಾತ್ಕಾರದ ಬಣ್ಣನೆಯಲ್ಲಿ ಕಾವ್ಯ ಸಾಕ್ಷಾತ್ಕಾರವೂ ಇದೆ. ಅಕ್ಕನ ಆತ್ಮಸಾಕ್ಷಾತ್ಕಾರವೂ ಅಡಗಿದೆ. ಭಾವಕ್ಕೆ ಮಿಗಿಲು ಅನುಭಾವ, ಅನುಭಾವಕ್ಕೂ ಮಿಗಿಲು ಆತ್ಮೋನ್ನತಿ. ಅದು ಇಲ್ಲಿ ಸುಸ್ಪಷ್ಟ. ಈ ಬಗೆಯ ಸ್ವಾಮಪರ ಆನಂದ ಪರಿಣಾಮ ಪಡೆದಿರುವುದು ಆನಂದಗಳ ಆನಂದ ಬ್ರಹ್ಮಾನಂದ ಮಹಾದಾನಂದದಲ್ಲಿ.

ತನು ಕರಗದವರಲ್ಲಿ ಮಜ್ಜನವನೊಲ್ಲೆಯಯ್ಯಾ ನೀನು
ಮನ ಕರಗದವರಲ್ಲಿ ಪುಷ್ಪವನೊಲ್ಲೆಯ್ಯಾ ನೀನು
ಹದುಗಳಿಗರದವರಲ್ಲಿ ಗಂಧಾಕ್ಷೆಯನೊಲ್ಲೆಯಯ್ಯಾ ನೀನು
ಅಱಿವು ಕಂದೆರೆಯದವರಲ್ಲಿ ಆರತಿಯನೊಲ್ಲೆಯಯ್ಯಾ ನೀನು
ಭಾವ ಶುದ್ಧಿವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯಾ ನೀನು
ಪರಿಣಾಮವಿಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯಾ ನೀನು
ಭಾವ ಜ್ಞಾನ ಕ್ರೀ ಅಳವಡದವರಲ್ಲಿ ವೀಳೆಯವನೊಲ್ಲೆಯಯ್ಯಾ ನೀನು
ಹೃದಯ ಕಮಲ ಅರಳದವರಲ್ಲಿ ಇರಲೊಲ್ಲೆಯಯ್ಯಾ ನೀನು
ಚೆನ್ನಮಲ್ಲಿಕಾರ್ಜುನಾ,
ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆಯಯ್ಯಾ ?

– (ವಚ.೧೩೪)

ಇದೊಂದು ಪ್ರೇಮಗೀತೆ, ಭಕ್ತಿಗೀತೆಯೂ ಹೌದು. ಸರ್ವ ಸಮರ್ಪಣವಿಲ್ಲದೆ ಸಾಕ್ಷಾತ್ಕಾರವಿಲ್ಲ ಎಂಬುದನ್ನು ಅಭಿವ್ಯಕ್ತಿಸುವ ಈ ಗೀತೆಯಲ್ಲಿ ಗರಿಗರಿಯಾಗಿ ಬಿರಿಗೊಂಡು ತಲೆದೂಗುವ ಹೊಂಬಾಳೆಯ ಹೊಗರು ವೈಭವಗಳಿವೆ. ತನು, ಮನ ಭಾವ, ಜ್ಞಾನ, ಅರಿವು, ಹದುಳ ಮೊದಲಾದ ಅಚ್ಚಗನ್ನಡದ ಮೆಚ್ಚುನುಡಿಗಳ ಪ್ರಯೋಗ ಅವು ಲಾಳಿಯಾಡುವಾಗಿನ ಮನತಣಿಸುವ ಕವನ ವಸ್ತ್ರಜಾಲ–ಇವು ಅಕ್ಕನ ಅಸಮಾನ ಅಭಿವ್ಯಕ್ತಿಗೆ ನಿಂತ ಸಾಕ್ಷಿಗಳು. 'ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ' ಎಂಬಲ್ಲಿನ ವಿಸ್ಮ 'ಅರಿಸಿನವನೆ ಮಿಂದು ಹೊಂದೊಡಿಗೆಯನೆ ತೊಟ್ಟು , ದೇವಾಂಗವನುಟ್ಟೆನೆಲೆ ಪುರುಷ ಬಾರ, ಪುರುಷ ರತ್ನವೆ ಬಾರಾ, ನಿಮ್ಮ ಬರವೆನಗೆ ಪ್ರಾಣದ ಬರವಾಗಿದೆ. ಚೆನ್ನಮಲ್ಲಿಕಾರ್ಜುನಯ್ಯ ನೀ ಬಂದಹನೆಂದು ಬಟ್ಟೆಯನೆ ನೋಡು ಬಾಯಾಱುತ್ತಿದ್ದೇನೆ' (ವಚ. ೨೬) ಎಂಬಲ್ಲಿನ ಭಾವತೀವ್ರತೆ 'ನೀ ಕೇಳಿದರೆ ಕೇಳು ಕೇಳದಿರ್ದಡೆ ಮಾಣು ನಾ ನಿಮ್ಮ ಹಾಡಿದಲ್ಲದೆ ನಿಲಲಾಱೆನು; ನೀ ಒಲಿದಡೆ ಒಲಿ ಒಲಿಯದಿರ್ದಡೆ ಮಾಣು ನಿಮ್ಮ ಪೂಜಿಸಿದಲ್ಲದೆ ಸೈರಿಸಲಾಱೆನು; ನೀ ಮೆಚ್ಚಿದಡೆ ಮೆಚ್ಚು ಮೆಚ್ಚದಿರ್ದಡೆ ಮಾಣು ನಿಮ್ಮ ಪೂಜಿಸಿದಲ್ಲದೆ ಸೈರಿಸಲಾಱೆನು; ನೀನ ಮೆಚ್ಚಿದಡೆ ಮೆಚ್ಚು ಮೆಚ್ಚದಿರ್ದಡೆ ಮಾಣು ನಿನ್ನನಪ್ಪಿದಲ್ಲದೆ ಸೈರಿಸಲಾಱೆನು; ನೀ ನೋಡಿದಡೆ ನೋಡು ನೋಡದಿರ್ದಡೆ ಮಾಣು ನಿಮ್ಮ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾಱೆನಯ್ಯಾ. ಚೆನ್ನಮಲ್ಲಿಕಾರ್ಜುನಾ, ನಿಮ್ಮನರ್ಚಿಸಿ ಪೂಜಿಸಹರುಷದೊಳೋಲಾಡುವೆ (ವಚ. ೧೩೭) ಎಂಬಲ್ಲಿನ ದೃಢತೆ, 'ಆಯುಷ್ಯ ಹೋಗುತ್ತಿದೆ ಭಾಷೆ ತೊಲಗುತ್ತಿದೆ, ಕೂಡಿರ್ದ ಸತಿ ಸುತರು ತಮತಮಗೆ ಹರಿದು ಹೋಗುತ್ತೈದಾರೆ; ಬೇಡ ಬೇಡ ದಿನಬಂಜೆಯಾಗಿ ಕೆಡಬೇಡ ಬಯಲಿಂಗೆ ಮನವೆ; ಚೆನ್ನಮಲ್ಲಿಕಾರ್ಜುನನ ಶರಣರ ಸಂಗದಲ್ಲಿ ಹೊಣೆಹೊಕ್ಕು ಬದುಕು ಕಂಡ ಮನವೇ (ವಚ. ೧೨೯) ಎಂಬಲ್ಲಿನ ಆತ್ಮ ಸಾಂತ್ವನ, 'ಬಂಜೆ ಬೇನೆಯನಱಿಯಳು, ಬಲದಾಯಿ ಮುದ್ದ ಬಲ್ಲಳೆ? ನೊಂದವರ ನೋವ ನೊಂದವರೆ ಬಲ್ಲರಲ್ಲದೆ ನೋಯದವರೆತ್ತ ಬಲ್ಲರು? ಚೆನ್ನಮಲ್ಲಿಕಾರ್ಜುನನಿಱಿದಗಲು ಒಡಲಲ್ಲಿ ಮುಱಿದು ಹೊರಳುವ ನೋವ ನೀವೆತ್ತ ಬಲ್ಲಿರಿ ಎಲೆ ತಾಯಿಗಳಿರಾ' ಎಂಬಲ್ಲಿನ ಸ್ಥಾನುಭವ

ನಿವೇದನೆ– ಇವು ಅಕ್ಕನ ಭಾವುಕತೆಗೆ ನಿದರ್ಶನಗಳು. ಅವಳು ಭಕ್ತೆಯೂ ಅಹುದು, ಭಾವುಕಿಯೂ ಅಹುದು. ಭಾವಗೀತಾತ್ಮ ಭಕ್ತಿಗೀತಗಳಲ್ಲಿ ಅವಳದು ಸಿದ್ಧಹಸ್ತ !

ಕಾವ್ಯದ ಕಮನೀಯತೆಯನ್ನು ಹೊಮ್ಮಿಸುವ ಹಲವು ಅಲಂಕಾರಳು ಅಕ್ಕ ವಚನಗಳಲ್ಲಿ ಆಶ್ರಯ ಪಡೆದಿವೆ. ಒಂದು ದೃಷ್ಟಾಂತ ;

ಹೊನ್ನು ಮುಜಿದಡೆ ಬೆಸಸಬಹುದಲ್ಲದೆ
ಮುತ್ತು ಒಡೆದಡೆ ಬೆಸಸಬಹುದೇ?
ಮನ ಮುಜಿದಡೆ ಮನಕೊಬ್ಬರೊಡೆಯುರುಂಟೇ?
ಚೆನ್ನಮಲ್ಲಿಕಾರ್ಜುನ ಸಾಕ್ಷಿಯಾಗಿ ಬೇಟವುಳ್ಳಲ್ಲಿ ಬೆರಳೆ ಘನ –

– (ವಚ. ೧೫೬)

ಚಿನ್ನದ ಒಡವೆ ಮುರಿದರೆ ಬೆಸುಗೆ ಹಾಕಿಸಬಹುದು. ಆದರೆ ಮುತ್ತು ಒಡೆದರೆ? ಮನಸ್ಸು ಮುತ್ತು ಇದ್ದಂತೆ. ಮುತ್ತಿನಲ್ಲಿ ಚೆಲುವಿದೆ, ತೇಜಸ್ಸಿದೆ. ಅದು ಒಡೆದರೆ ಬೆಸೆಯಲು ಬರುವುದಲ್ಲ. ಅದೇ ರೀತಿ ತಿಳಿ ಮನಸ್ಸನ್ನು ಕದಡಬಾರದು ಎಂಬ ಭಾವ ಇಲ್ಲಿನದು. ಅದು ಸ್ಫುಟಗೊಳ್ಳಲು ಹೊನ್ನು, ಮುತ್ತುಗಳ ವಿಶಿಷ್ಟ ಪ್ರತಿಮೆಯನ್ನು ದೃಷ್ಟಾಂತವಾಗಿ ಕೊಟ್ಟಿದ್ದಾಳೆ ಇದಕ್ಕೆ 'ಬೇಟವುಳ್ಳಲ್ಲಿ ಬೆರೆಸೆ ಘನ' ಎಂಬ ಲೋಕೋಕ್ತಿಯೊಂದು ವಚನಾಂತ್ಯದಲ್ಲಿ ಬೆರೆದು, ಭಾವಾಂಶಕ್ಕೊಂದು ಚಿಂತನಾಂಶವನ್ನೊದಗಿಸಿ, ಕವನದ ಸಮಗ್ರ ಶಿಲ್ಪಕ್ಕೊಂದು ಕಳೆ ತಂದಿದೆ.

ಪಂಚೇಂದ್ರಿಯ ಗುಣಂಗಳೊಳಗೆ ಒಂದಕ್ಕೆ ಪ್ರೀತನಾದಡೆ ಸಾಲದೆ?
ಸಪ್ತವ್ಯಸನಂಗಳೊಳಗೆ ಒಂದಕ್ಕೆ ಪ್ರೀತನಾದಡೆ ಸಾಲದೆ?
ರತ್ನದ ಸಂಕಲೆಯಾದಡೇನು ಬಂಧನ ಬಿಡುವುದೆ ಚೆನ್ನಮಲ್ಲಿಕಾರ್ಜುನ

– (ವಚ. ೧೪೩)

ಪಂಚೇಂದ್ರಿಯಗಳಲ್ಲಿ ಅಥವಾ ಸಪ್ತವ್ಯಸನಗಳಲ್ಲಿ ಎಲ್ಲವೂ ಬೇಡ ಒಂದಕ್ಕೆ ವಶನಾದರೆ ಸಾಕು ಮನುಷ್ಯ ಹಾಳಾಗುತ್ತಾನೆ ಎಂಬಂಶ ಸಮರ್ಥನೆಗೆ 'ರತ್ನದ ಸಂಕಲೆಯಾದಡೇನು ಬಂಧನ ಬಿಡುವುದೆ?' ಎಂಬ ಉಕ್ತಿಯಲ್ಲಿ ಅರ್ಥಪೂರ್ಣಅರ್ಥಾಂತರನ್ಯಾಸ ಅಲಂಕಾರ ಅಡಗಿದೆ. ಈ ಅಲಂಕಾರ ಕವಯಿತ್ರಿಯ ಭಾವಕ್ಕೆ ಸಾಕಷ್ಟು ಪುಷ್ಟಿಕೊಟ್ಟಿದೆ ಎಂಬುದು ಸ್ಪಷ್ಟ. ಉಪಮನೆಗೆನಿತೆನಿತೋ ಜ್ವಲಂತ ನಿದರ್ಶನಗಳಿವೆ ಅಕ್ಕನಲ್ಲಿ ನೋಡಿ :

ನೆಲದ ಮಱೆಯ ನಿಧಾನದಂತೆ ತಿಲದ ಮರೆಯ ತೈಲದಂತೆ
ಶಿಲೆಯ ಮಱೆಯ ಕನಕದಂತೆ ಮರದ ಮಱೆಯ ತೇಜದಂತೆ
ಭಾವದ ಮಱೆಯ ಬ್ರಹ್ಮವಾಗಿಪ್ಪ
ಚೆನ್ನಮಲ್ಲಿಕಾರ್ಜುನನ ನಿಲವನಱೆಯಬಾರದು

– (ವಚ. ೧)

ದೈವ ಎಂಬುದೊಂದು ನಂಬಿಕೆಯ ವಸ್ತು, ಅದಕ್ಕೆ ಆಕಾರ ಸಾಕಾರಗಳಾವೂ ಇಲ್ಲ. ಅಂತಹ ನಿರಾಕಾರವನ್ನು ಅರ್ಥೈಸುವಲ್ಲಿ ಉಪಮೆ ಪೂರ್ಣ ಸಹಕಾರಿ. ಭಾವದ ಮರೆಯ ಬ್ರಹ್ಮವಾಗಿಪ್ಪ ಚೆನ್ನಮಲ್ಲಿಕಾರ್ಜುನನು ನೆಲದ ಮರೆಯ ನಿಧಾನದ ಹಾಗೆ, ತಿಲದ ಮರೆಯ ತೈಲದ ಹಾಗೆ, ಶಿಲೆಯ ಮರೆಯ ಚಿನ್ನದ ಹಾಗೆ, ಮರದ ಮರೆಯ ಅಗ್ನಿಯ ಹಾಗೆ ! ಅದು ಸ್ಥೂಲ ದೃಷ್ಟಿಗೆ ಅಗೋಚರವಾದರೂ ಸೂಕ್ಷ್ಮಕ್ಕೆ ಗ್ರಾಹ್ಯ, ಆ ಸೂಕ್ಷ್ಮತೆಯ ಸೆರಗಿಗೆ ನಮ್ಮನ್ನು ಕೊಂಡೊಯ್ಯುತ್ತದೆ ಉಪಮೆ. ಮತ್ತೊಂದು ಉಹಾಹರಣೆ:

ಅಱಲುಗೊಂಡ ಕೆಱೆಗೆ ತೊಱೆ ಬಂದು ಹಾಯಿದಂತೆ
ಬಱಲುಗೊಂಡ ಸಸಿಗೆ ಮಳೆ ಸುರಿದಂತಾಯಿತ್ತು ನೋಡಾ ಇಂದೆನಗೆ
ಇಹದ ಸುಖ ಪರದ ಗತಿಯೊಂದಾದತಾಯಿತ್ತೆನಗೆ
ಚೆನ್ನಮಲ್ಲಿಕಾರ್ಜುನನ ಗುರುಪಾದವ ಕಂಡು ಧನ್ಯಳಾದೆನು

– (ವಚ. ೧೧೭)

ನೀರಿಲ್ಲದೆ ಒಣಗಿ ಬಿರಿಬಿರಿ ಬಿಟ್ಟು ಹೆಂಟೆಗಳೆದ್ದು ಬಾಯ್ದೆರದು ಬಾಯಾರಿ ಬಿದ್ದಿರುವ ಕೆರೆಗೆ ತೊರೆ ಬಂದು ತುಂಬಿದರೆ ಎಂಥ ಆನಂದ ! ಒಣಗಿ ಕಡ್ಡಿಕಡ್ಡಿಯಾಗಿ ಬರಲುಗೊಂಡ ಗಿಡಕ್ಕೆ ಮಳೆ ಸುರಿದರೆ ಏನೆಂಥ ನಳನಳಿಕೆ ! ಅಂತಹ ಅಂದ ಆನಂದಗಳಾದದ್ದು ಚೆನ್ನಮಲ್ಲಿಕಾರ್ಜುನನ ಶ್ರೀ ಚರಣಗಳನ್ನು ದರ್ಶಿಸಿದಾಗ, ಇದು ಉಪಮೆಯ ಸಾರ್ಥಕ್ಯ.

ಇದೇರೀತಿ ತರಣಿಯ ಹುಳು ತನ್ನ ಸ್ನೇಹದಲ್ಲಿ ಮನೆಯ ಮಾಡಿ ತನ್ನ ನೂಲು ತನ್ನ ಸುತ್ತಿ ಸಾವ ತೆಱನಂತೆ ೦ (ವ.೧೩) ಕಬ್ಬುನ ಉಂಡ ನೀರಿನಂತೆ (ವ.೯) ಮಱೆದು ಬೀಸುವ ಗಾಳಿ ಪರಿಮಳವನುಂಡಂತೆ – (ವ.೧೦೨) ಮೊಸಲ ಹೊಸೆದು ಬೆಣ್ಣೆಯ ತೆಗೆವಂತೆ – (ವ.೧೩೧) ತಾಯಿ ನೊಂದಡೆ ಒಡಲ ಸಿಶು ನೋವಂತೆ (ವ. ೧೪೧) – ಬಗೆಯ ಔಚಿತ್ಯಭರಿತ ಉಪಮಾಲಂಕಾರಗಳು ನುರಾರು ಸಿಗುತ್ತವೆ ಅಕ್ಕಗಳ ವಚನಗಳಲ್ಲಿ.

ವಕ್ರೋಕ್ತಿ ಕುಂತನಕನ ಅತ್ಯಪೂರ್ವ ಆವಿಷ್ಕಾರಗಳಲ್ಲಿ ಒಂದು. ವಕ್ರೋಕ್ತಿಯ ವಾಖ್ಯೆ ಸೊಟ್ಟ ಮಾತು. 'ಸುತ್ತೀ ಬಳಸಿ' ಆಡಿದ ಮಾತು ಎಂದಷ್ಟೇ ಅಲ್ಲ, ಕಾವ್ಯ ಸಂದರ್ಭದಲ್ಲಿ ಅದೊಂದು ಸುಂದರವಾದ ಉಕ್ತಿ. ಅಂತಹ ಉಕ್ತಿ ಸೌಂದರ್ಯಕ್ಕೆ –

ಉರಕ್ಕೆ ಜವ್ವನಗಳು ಬಾರದ ಮುನ್ನ, ಮನಕ್ಕೆ ನಾಚಿಕೆಗಲು ತೋಱದ ಮುನ್ನ
ನಮ್ಮವರಂದೆ ಮದುವೆಯ ಮಾಡಿದರು ಸಿರಿಶೈಲ ಚೆನ್ನಮಲ್ಲಿಕಾರ್ಜುನಂಗೆ
ಹೆಂಗೂಸೆಂಬ ಭಾವ ತೋಱದ ಮುನ್ನ ನಮ್ಮವರಮದೆ ಮದುವೆಯ ಮಾಡಿದರು
– (ವದ. ೫೦)

ಈ ವಚನದ ಮೊದಲೆರಡು ನುಡಿಗಳು ಸಾಕು. ಮೈನೆರೆದ ಹುಡುಗಿ ಸೊಬಗು ಸೂಸುವ ಬೆಡಗಿ ! ಅವಳ ಮೈಮೇಲೆ ಹರಯ ಹರಿದಾಗ ಮೈ ಮನಗಳೆರಡರಲ್ಲೂ ಬದಲಾವಣೆ ಕಾಣಿಸಿಕೊಳ್ಳುವುದು ಸಹಜ. ವಕ್ಷಸ್ಥಲದಲ್ಲಿ ಮೊಲೆಗಳು ಮೂಡುತ್ತವೆ, ಮನಸ್ಸಿನಲ್ಲಿ ತಾನು 'ಹೆಣ್ಣು' ಎಂಬ ಅರಿವು ಜಾಗ್ರತವಾಗಿ, ಸ್ತ್ರೀ ಸಹಜ ನಾಚಿಕೆ ಮೈದೋರುತ್ತದೆ. ಇದನ್ನು ಅಕ್ಕ ಅಲಂಕಾರಿಕವಾಗಿ 'ಉರಕ್ಕೆ ಜವ್ವನಗಳು ಬಾರದ ಮುನ್ನ ಮನಕ್ಕೆ ನಾಚಿಕೆಗಳು ತೋಱದ ಮುನ್ನ', ಎಂಬ ವಕ್ರೋಕ್ತಿಯ ಮೂಲಕ ಅಭಿವ್ಯಕ್ತಿಸಿದ್ದಾಳೆ. ವಕ್ರೋಕ್ತಿಯಂತೆ ಅಕ್ಕನಲ್ಲಿ ಸ್ವಭಾವೋಕ್ತಿಯೂ ಪರಿಣಾಮಕಾರಿ

ಹುಟ್ಟಿದ ಶ್ರೀ ಗುರುವಿನ ಹಸ್ತದಲ್ಲಿ
ಬೆಳೆದನು ಅಸಂಖ್ಯಾತರ ಕರುಣದೊಳಗೆ
ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ,
ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡ
ಇಂತಪ್ಪ ತ್ರಿವಿಧಾಮೃತವನು ದಣಿಯಲೆಱೆದು ಸಲಹಿದರೆನ್ನ
ವಿವಾಹವ ಮಾಡಿದಿರಿ ಸಯವಪ್ಪ ಗಂಡಂಗೆ ಕೊಟ್ಟಿರಿ
ಕೊಟ್ಟ ಮನೆಗೆ ಕಳುಹಲೆಂದು ಅಸಂಖ್ಯಾತರೆಲ್ಲರೂ ನೆರೆದು ಬಂದಿರಿ
ಬಸವಣ್ಣ ಮೆಚ್ಚಲು ಒಗೆತನವ ಮಾಡುವೆ
ಚೆನ್ನಮಲ್ಲಿಕಾರ್ಜುನನ ಕೈವಿಡಿದು.
ನಿಮ್ಮ ತಲೆಗೆ ಹೂವ ತಹನಲ್ಲದೆ ಹುಲ್ಲ ತಾರೆನು
ಅವಧರಿಸಿ ನಿಮ್ಮಡಿಗಳೆಲ್ಲರೂ ಮರಳಿ ಬಿಜಯಂಗೈವುದು ಶರಣು ಶರಣಾರ್ಥಿ
(ಹೆ.ವ. ೭೪)

ಅಕ್ಕನ ಈ ವಚನದಲ್ಲಿ ಭಾವ ರೂಪುಗೊಂಡಾದ 'ತ್ರಿವಿಧಾಮೃತ' ರೂಪಕನ್ನು ಗಮನಿಸಬಹುದು. ಅದಕ್ಕಿಂತಲೂ ಮಿಗಿಲಾಗಿದದ್ದು. ವಚನ ವಲಯದಲ್ಲಿ ಎದ್ದು ಕಾಣುವಂಥದು. ಇಲ್ಲಿನ ಸ್ವಭಾವೋಕ್ತಿ ಮದುವೆ, ದಿಬ್ಬಣ, ಬೀಳ್ಕೊಡುಗೆ, ಬೀಳ್ಕೊಡುಗೆಯ ಸಂದರ್ಭದ 'ಮಧುರಯಾತನೆ' ಮೊದಲಾದ ಕ್ರಿಯಾರೂಪಿ ಸಹಜ ಚಿತ್ರಣ. ಇದರ ಜೊತೆಗೆ 'ನಿಮ್ಮ ತಲೆಗೆ ಹೂವ ತಹೆನಲ್ಲದೆ ಹುಲ್ಲತಾರೆನು' ಎಂಬ ವಕ್ರೋಕ್ತಿಯೂ ಬೆರೆತು ಕವನದ ಕಮನೀಯತೆಯನ್ನು ಹೆಚ್ಚಿಸಿದೆ. ಸ್ವಭಾವೋಕ್ತಿ ಇದಕ್ಕೂ ಒಂದು ಸೌಂದರ್ಯಾಭಿವ್ಯಕ್ತಿ ಸಾಮರ್ಥ್ಯ ಇದೆ ಎಂಬುದನ್ನು ಅಕ್ಕನ ಮೇಲಿನ ವಚನ ಸಮರ್ಥನೆ ನೀಡಿದೆ.

ಅಂತೆಯೇ,

ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದಡೆಂತಯ್ಯಾ
ಸಮುದ್ರದ ತಡಿಯಲೊಂದು ಮನೆಯ ಮಾಡಿ ನೊರೆ ತೆಱಗಳಿಗಂಜಿದಂಡೆಂತಯ್ಯಾ
ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಂಡೆಂತಯ್ಯಾ
ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ,
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ ನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು
(ಹ.ವ.೪೯)

ಎಂಬ ದೃಷ್ಟಾಂತಗಳ ಮೂಲಕ ಅಭಿವ್ಯಕ್ತವಾಗಿರುವ ಕಾವ್ಯಕುಂಜ ಲೋಕ ಸಹಜ ಪ್ರವೃತ್ತಿ. ಪ್ರತಿಕ್ರಿಯೆಗಳಿಂದ ಕೂಡಿದುದಾಗಿದೆ. ಆದರೆ ಅವೆಲ್ಲವೂ ಮಾತನಾಡಿದಂತಹ ಸ್ವಾಭಾವಿಕ ಅಭಿವ್ಯಕ್ತಿ ಸಾಧಿಸಿವೆ. ಇಲ್ಲಿನದು ಉಕ್ತಿವಕ್ರತೆಗಿಂಗಲೂ ಭಾವವಕ್ರತೆ. ಅದರಿಂದ ರೂಪಗೊಂಡ ಆತ್ಮಸಾಂತ್ವನ, ಭಾವ ಭಣಿಕೆ ಮಡಿಕೆ ಮಡಿಕೆಯಾಇ ಬರುವ ನಿದರ್ಶನಗಳ ಚೆದುರು ಪದರು, ಕವನ ಶಿಲ್ಪದ ಭಂಗಿ ಬೆಡಗು–ಇದು ಮನೋಜ್ಞವಾದವುಗಳು.

ಆವ ವಿದ್ಯೆಯ ಕಲಿತಡೇನು.? ಸಾವ ವಿದ್ಯೆ ಬೆನ್ನ ಬಿಡದು
ಆಶನವ ತೊಱೆದಡೇನು? ವ್ಯಸನವ ಮಱೆದಡೇನು?
ಉಸುರ ಹಿಡಿದಡೇನು? ಬಸುಱ ಕಟ್ಟಿದಡೇನು?
ಚೆನ್ನಮಲ್ಲಿಕಾರ್ಜುನದೇವಯ್ಯಾ
ನೆಲ ತಳವಾಱನಾದಡೆ ಕಳ್ಳನೆಲ್ಲಿಗೆ ಹೋಹನು !
(ಹೆ.ವ.೧೫)

ಸಾವು ಅನಿವಾರ್ಯ ಎಂಬ ಸತ್ಯವ್ನು ಕೈ ಎತ್ತಿ ಸಾರುವ ಈ ವಚನದಲ್ಲಿ 'ಆವವಿದ್ಯೆ–ಸಾವವಿದ್ಯೆ, ಆಶನ–ವ್ಯಸನ' 'ಉಸುರ ಹಿಡಿ–ಬಸುಱ ಕಟ್ಟು' ಮೊದಲಾದ ಉಕ್ತಿ ವೈಚಿತ್ರ್ಯಗಳ ಪ್ರಯೋಗದೊಂದಿಗೆ ಬೆರೆದ, 'ನಲ ತಲವಾಱನಾದಡೆ ಕಳ್ಳನೆಲ್ಲಿಗೆ ಹೋನು' ಎಂಬ ರೂಪಕ ಇವು ಚಿನ್ನದ ಚಿಪ್ಪಿನಲ್ಲಿ ರನ್ನವನನು ಅದ್ದಂತಿವೆ. ಇವುಗಳಿಂದ ಕಾವ್ಯಕ್ಕೆ ಅದೆಂಥ ಚೆಲುವು, ಎಂಥ ಚೆನ್ನು! ಮೃತ್ಯುವಿನ ಅನಿವಾರ್ಯತೆಯನ್ನು ಇದಕ್ಕಿಂತಲೂ ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಲು ಸಾಧ್ಯವಿಲ್ಲ ಎನ್ನಿಸುತ್ತದೆ.

ವಸ್ತುವೊಂದನ್ನು ಹೋಲಿಸಿದಾಗ, ಉಪಮೆ, ಆರೋಪಿಸಿದಾಗ ರೂಪಕ, ಅನ್ವಯಿಸಿದಾಗ ಪ್ರತಿಮೆ ಎನ್ನಿಸುತ್ತದೆ. ಆದರೆ ಒಂದರ್ಥದಲ್ಲಿ ಅಲಂಕಾರಗಳೆಲ್ಲವೂ ಕಾವ್ಯಪ್ರತಿಮೆಗಳೇ. ಅವು ಮಾತಿನ ಮೂರ್ತಿಗಳು. ೨೦ ಅಂತೆಯೇ ಅವ್ಯಕ್ತವೆನಿಸಿದ ನಿತ್ಯ ಸತ್ಯಕ್ಕೊಡ್ಡಿದ ಪ್ರತ್ಯಕ್ಷ ರೂಪಗಳು. ಅಕ್ಕಗಳ ವಚನಗಳು ಕಾವ್ಯಪ್ರತಿಮೆಗಳ ಅಡುಂಬೊಲ :

ಹೊಳೆವ ಕೆಂಜೆಡೆಗಳ ಮಣಿಮುಕುಟ ಒಪ್ಪುವ, ಸುಲಿಪಲಲ,
ನಗೆಮೊಗದ ಕಂಗಳ ಕಾಂತಿಯ ಈರೇಳು ಭುವನದ ಬೆಳಗುವ
ದಿವ್ಯ ಸ್ವರೂಪವ ಕಂಡೆ ನಾನು, ಕಂಡೆಎನ್ನ ಕಂಗಳ ಬಱ ಹಿಂಗಿತ್ತಿಂದು
ಗಂಡ ಗಂಡರೆಲ್ಲರ ಹೆಂಡಹೆಂಡಿರಾಗಿ ಆಳುವ ಗರುವನ ಕಂಡೆ ನಾನು
ಜಗದಾದಿ ಶಕ್ತಿಯೊಳು ಬೆರಸಿ ಮಾತನಾಡುವ ಪರಮಗುರು
ಚೆನ್ನಮಲ್ಲಿಕಾರ್ಜುನನ ನಿಲವ ಕಂಡು ಬದುಕಿದೆನು

– (ವ.ಚ. ೨೦೧)

ಶೃಂಗಾರಗೊಂಡ ತೇಜಸ್ಸೊಂದು ಥುತ್ತನೆ ನಮ್ಮ ಕೆಣ್ಣೆದುರು ಬಂದು ನಿಂತಂತೆ ಭಾಸವಾಗುತ್ತದೆ ! ಇದೊಂದು ಅಸಾಮಾನ್ಯ ಕಾವ್ಯಪ್ರತಿಮೆ. ಅದನ್ನು ಕಮಡ ಅವಳ ಕಮಗಳ ಬರ ಹಿಂಗಿದಂತೆ ಓದುಗರ ಭಾವದ ಬರವೂ ಹಿಂಗುತ್ತದೆ. ಗಂಡ ಗಂಡರೆಲ್ಲರನ್ನು ಹೆಂಡಹೆಂಡಿರಾಗಿ ಆಳಿದ, ಆದಿಶಕ್ತಿಯಲ್ಲಿ ಒಡವೆರೆದು ನುಡಿದ ಆ ಪರಾತ್ಪರ ತೇಜಸ್ಸಿನ ನಿಲುವು ನಮಗೂ ವೇದ್ಯ.

ಅಮೇಧ್ಯದ ಹಡಿಕೆಯ ಮೂತ್ರದ ಕುಡಿಕೆಯ ಎಲುಬಿನ ತಡಿಕೆಯ
ಕೀವಿನ ಹಡಿಕೆಯ ಸುಡಲೀ ದೇಹವ ಬಿಡು ಬಿಡು ವಿಷಯದ ಸಂಗವ
ಒಡಲುವಿಡಿದು ಕೆಡದಿರುವ ಚೆನ್ನಮಲ್ಲಿಕಾರ್ಜುನನಱಿಯದ ಮರುಳೆ

– (ವಚ. ೩೫)

ಮತ್ತು

ಮೊಲೆ ಬಿದ್ದು ಮುಡಿ ಸಡಿಲಿ ಗಲ್ಲ, ಬತ್ತಿ ತೋಳು ಕಂದಿದವಳ
ಎನ್ನನೇಕೆ ನೋಡುವಿರಿ ಎಲೆ ಅಣ್ಣಗಳಿರಾ ?

– (ವದ.೧೬೭)

ಇಂತಹ ಬೀಭತ್ಸವನ್ನು ನಿಷ್ಪನ್ನಗೊಳಿಸುವ ಪರಿಣಾಮಕಾರೀ ಪ್ರತಿಮೆಗಳನನು ಕಾಣಬಹುದು ಅಕ್ಕನಲ್ಲಿ.

ಅಕ್ಕನದು ಹೋರಾಟದ ಮಾತು. ಆ ಹೋರಾಟದ ಅಭಿವ್ಯಕ್ತಿಗಾಗಿ 'ಯುದ್ಧ ಪ್ರತಿಮೆ'ಗಳು ಅಲ್ಲಲ್ಲಿ ಸಹಜವಾಗಿ ಪ್ರಯೋಗಗೊಂಡಿವೆ. ಚೆನ್ನಮಲ್ಲಿಕಾರ್ಜುನನಿಱಿದಲಗು ಒಡಲಲ್ಲಿ ಮುಱಿದು ಹೊರಳುವ ನೋವ ನೀವೆತ್ತ ಬಲ್ಲಿರಿ – (ವ.೬೪);

ಸುಕವಿಲ್ಲ ಹಂದೆಗೆ ಎಂತು ಮಱುಗಿದಡೆಯು ಕಲಿಗೆ ಭಯವಿಲ್ಲ ಎತ್ತೆತ್ತ ಹೋದಡೆಯು – (ವ. ೧೪೫), 'ಆಳುತನದ ಮಾತನೇಱಿಸಿ ನುಡಿದಡೆ ಅಗಳೆ ಕಟ್ಟಿದೆನು ಗಂಡುಡಿಗೆಯನು, ತಿಗುರನೇರಿಸಿ ತಿಲಕವಿಟ್ಟು ಕೈದುವಕೊಂಡು ಕಳನೇಱಿದ ಬಳಿಕ ಕಟ್ಟಿದ ನಿಱಿ ಸಡಲಿದರೆ ಇನ್ನು ನಿಮ್ಮಾಣೆ ಕಾಣಾ ಚೆನ್ನಮಲ್ಲಿಕಾರ್ಜುನಾ – (ವ. ೧೫೨); ವಾರು ಮುಗ್ಗಿದಡೆ ಮಿಣಿಯ ಹಱಿಯ ಹೊಯಿದವರುಂಟೆ? ಮುಗಿದ ಭಂಗವ ಮುಂದೆ ರಣದಲ್ಲಿ ಕಳಿವುದು, ನಿನ್ನ ನೀ ಸೈರಿಸಿ ಕೈದುವ ಕೊಳ್ಳಿರಣ್ಣಾ ಚೆನ್ನಮಲ್ಲಿಕಾರ್ಜುನನೆಂಬ ಹೆಗೆ ಬೆಂಗೊಂಡದಿರಣ್ಣಾ (ವ. ೧೯೮); ನೀ ದಂಡು ಮಂಡಲವ ಮಾಡಿಹನೆಂದು ಸುಮ್ಮನಿರ್ದೆ; ನೀ ದಂಡು ಮಂಡಲಕ್ಕೆ ಹೋದವಹನೆಂದು ಪರಿಣಾಮಿಸುವೆ, – (ವ. ३೧). ಕೆಡದ ಶಿವಶರಣೆಂಬ ಅಲಗನೆಕೊಂಡು ನಿನ್ನ ಕೊಲುವೆ ಗೆಲುವ ನಾನು (ಹೆ.ವ.೭)

ಅಕ್ಕ ಬೆಳಗಿನ ಕಾವ್ಯಾಂಶಗಳನ್ನು ಅವಲೋಕಿಸಿದಾಗ ಇದಕ್ಕಿಂತಲೂ ಕವಿಯಿತ್ರಿಯಲ್ಲಿ ಹೆಚ್ಚು ಏನನ್ನು ನಿರೀಕ್ಷಿಸಲು ಸಾಧ್ಯ ಎಂಬ ನಿಬ್ಬೆರಗು ಹುಬ್ಬೇರುತ್ತದೆ ಓದುಗನಲ್ಲಿ !

ಕಡೆಯದಾಗಿ, ಅಕ್ಕದುಡಿಸಿಕೊಂಡ ಭಾಷೆ. ಅದು ವಚನಾಭಿವ್ಯಕ್ತಿಗಾಗಿಯೇ ಸಿದ್ಧವಾದ ವಿಶಿಷ್ಟ ಭಾಷೆ. ಅದು ಭಾಷ್ಯದ ಭಾಷೆಯಲ್ಲ, ಭಾವದ ಭಾಷೆ ಆಡು ನುಡಿ ಅದರ ಜೀವದ್ರವ್ಯ, ಸಾರಳ್ಯ ಅದರ ಜಾಯಮಾನ, ಪರಮ ಪರಿಣಾಮ ಅದರ ಚರಮ ಗುರಿ. ನೋಡಿ :

ಹರಱದಿರು ಮನವೆ ಬೆದಱದಿರು ತನುವೆ
ನಿಜವನಱಿತು ನಿಶ್ಚಿಂತನಾಗಿರು
ಫಲವಾದ ಮರನ ಕಲ್ಲಲಿ ಇಡುವುದೊಂದು ಕೋಟಿ
ಎಲವದ ಮರನ ಇಡುವರೊಬ್ಬರ ಕಾಣೆ
ಭಕ್ತಿಯುಳ್ಳವರ ಬೈವರೊಂದು ಕೋಟಿ
ಭಕ್ತಿಯಿಲ್ಲದವರ ಬೈವರೊಬ್ಬರ ಕಾಣೆ
ನಿಮ್ಮ ಶರಣರ ನುಡಿಗೆ ಎನಗೆ ಗತಿ, ಸೋಪಾನ ಚೆನ್ನಮಲ್ಲಿಕಾರ್ಜು
(ಹೆ.ವ.೭೫)

ವಾಸ್ತವತೆಯನ್ನು ಇದಕ್ಕಿಂತಲೂ ಸರಳವಾಗಿ ಚಿತ್ರಿಸಲು ಬರಲಾರದು ಎನ್ನಿಸುತ್ತದೆ. ಮಾತೆಷ್ಟು ಸರಳ; ಸತ್ಯವದೆಷ್ಟು ಕಠೋರ ! ಭಾವದ ಹಾಸಿಗೆ ಭಾಷೆಯ ಬೀಸು ತುಂಬಾ ಒಪ್ಪು. ಉದಾಹರಣೆಗೆ; 'ಹರನೇ ನೀನೆನಗೆ ಗಂಡನಾಗಬೇಕೆಂಬ ಅನಂತಕಾಲ ತಪಸಿದ್ದೆ ನೋಡ, ಹಸೆಯ ಮೇಲಣ ಮಾತ ಬೆಸಗೊಳ್ಳಲಟ್ಟಿದರೆ ಶಶಿಧರನ ಹತ್ತಿರಕ್ಕೆ ಕಳುಹಿರೆಮ್ಮವರು' – (ವ.೨೨) 'ಅಂದೂ ನೀನೆ ಇಂದೂ ನೀನೆ ಎಂದೂ ನೀನೆ ಕೇಳಾ ತಂದೆ' – (ವ.೯೧) ನರಜನ್ಮವ ತೊಡೆದು ಹರ ಜನ್ಮವ ಮಾಡಿದ ಗುರುವೆ, ಭವ ಬಂಧನವ ಬಿಡಿಸಿ, ಪರಮ ಸುಖ ತೋರಿದ ಗುರುವೆ, ಭವಿಯೆಂಬುದ ತೊಡೆದು ಭಕ್ತೆ ಎಂದೆನಿಸದಿ ಗುರುವೆ – (ವ.೧೧೯) ಇಂಥೆಡೆಗಳಲ್ಲಿ ಭಾವದ ಗೋವಿಗೆ ಭಾಷೆಯ ಕಣ್ಣು ಕಟ್ಟಿ ಎಳೆದಿದ್ದಾಳೆ ಅಕ್ಕ. ಆದರದು ಆಯತ್ನ ಪೂರ್ವಕ ಸಿದ್ದಿ ಎಂಬುದನು ಮರೆಯಬಾರದು. ಅಂತೆಯೇ ಶೈಲಿಶಾಸ್ತ್ರ (Stylestics) ಗುರುತಿಸುವ ರಚನಾಸಾಮ್ಯತೆ (Parallelism) ಸಾಕಷ್ಟು ಪ್ರಮಾಣದಲ್ಲಿ ಸಿಗುತ್ತದೆ ಅಕ್ಕನಲ್ಲಿ. ನೋಟಿ :

ಒಡಲಿಲ್ಲದ ನುಡಿಯಿಲ್ಲದ ನಲ್ಲನ ಒಡಗೂಡಿ.. ಭಾಷೆ ಪೈಸರವಿಲ್ಲ ಓಸರಿಸೆನನ್ಯಕೆ,
ಅಱಳಿದು ಮೂಱಾಗಿ, ಮೂಱಳಿದು ಎರಡಾಗಿ,
ಎರಡಳಿದು ಒಂದಾಗಿ ನಿಂದೆನಲ್ಲಾ
– (ವಚ.೧೮३)

ಕಾಯ ಕರ್ರನೆ ಕಂದಿದಡೇನಯ್ಯ,
ಕಾಯ ಮಿರ್ರನೆ ಮಿಮಚಿದಡೇನಯ್ಯ
– ಹೆ.ವ.३೫)

ಸಾವಿಲ್ಲದ ಕೇಡಿಲ್ಲದ ರೂಹಿಲ್ದಲ ಚೆಲುವಂಗೆ,
ಎಡೆಯಿಲ್ಲದ ತೆಱಹಿಲ್ಲದ ಕುಱುಹಿಲ್ಲದ ಚೆಲುವಂಗೆ..
ಭಯವಿಲ್ಲದ ಭವವಿಲ್ಲದ ಚೆಲುವಂಗೆ
– (ವಚ. ೫३)
– ಇಂಥೆಡೆಗಳಲ್ಲಿ ನುಡಿಯ ಬೆಡಗೇ ಕಾವ್ಯದ ತೊಡಿಗೆ !

ಕಾವ್ಯ ಸಂದರ್ಭದಲ್ಲಿ ಭಾವವಾಹನನೆನಿಸಿದ ಭಾಷೆ. ಅನುಭಾವವನ್ನು ಅನುವಾದಿಸುವಲ್ಲಿ ಅಸಮರ್ಥವಾಗಬಹುದು ಹಲವರಲ್ಲಿ. ಅಂದರೆ ತೀವ್ರಾನುಭಾವವನ್ನು ಅಭಿವ್ಯಕ್ತಿಸುವಲ್ಲಿ ಮಾತು ಸೋತು ಹೋಗಬಹುದು. ಆದರೆ ಅಕ್ಕನಲ್ಲಿ ಅನುಭಾವಾಭಿವ್ಯಕ್ತಿ ಮತ್ತು ಅರ್ಥಾಭಿವ್ಯಕ್ತಿಯ ತಿಳಿಗನ್ನಡ ಕಸುವುಳ್ಳ ತಿರುಳ್ಗನ್ನಡವಾಗಿದೆ. ನೋಡಿ :

ಎನ್ನ ನಾನರಿಯದ ಮುನ್ನವೆಲ್ಲಿರ್ದೆ ಹೇಳಯ್ಯಾ ?
ಚಿನ್ನದೊಳಗಣ ಬಣ್ಣದಂತೆ ಎನ್ನೊಳಿರ್ದೆಯಯ್ಯ
ಎನ್ನೊಳಿರ್ದು ಮೈದೋರದ ಭೇದವ ನಿಮ್ಮಲ್ಲಿ ಕಂಡೆ
ಕಾಣಾ ಚೆನ್ನಮಲ್ಲಿಕಾರ್ಜುನ

– (ವಚ. ೨)

ಅಣುರೇಣು ತೃಣಕಾಷ್ಠದಲ್ಲೂ ನೂತನ ಚೇತನವಾಗಿ ಸ್ಪಂದಿಸುವ ಆ ಪರಾತ್ಪರ ಶಕ್ತಿಯನ್ನು ಅಕ್ಕ ಹೇಗೆ ಮಾತಿನ ಮಾಧ್ಯಮದಲ್ಲಿ ಸೆರೆ ಹಿಡಿದಿದ್ದಾಳೆ. ಅದಕ್ಕಿಂತಲೂ ಮಿಗಿಲಾಗಿ ಸಾಮಾನ್ಯ ಓದುಗನ ಅರಿವಿಗೂ ಮುಟ್ಟುವಂತೆ ಹೇಗೆ ಅಭಿವ್ಯಕ್ತಿಸಿದ್ದಾಳೆ ಎಂಬುದು ಪ್ರಶಂಸನೀಯ. ಅಂತೆಯೇ ಅವಳಲ್ಲಿ ಆಡುನುಡಿಯ ದುಡಿಮೆ ಅಪಾರ. ಅವಳ ಟಂಕಸಾಲೆಯಲ್ಲಿ ಮಿಂಟಾದ ಪದನಾಣ್ಯಗಳನ್ನು ನೋಡಿ; ದಿನಬಂಜೆ, ಬೆಂಗೋಲು, ತಟತಟ–ಎಳತಟ, ಚಳಕೊಡು, ದಂಡುಮಂಡಲ, ಒಲೆಯೊಳಗಿಕ್ಕು, ಕಿಚ್ಚಿಲ್ಲದ ಬೇಗೆ, ಎಸುಗೆಗಟಿ, ಅಱಿಲುಗೊಂಡ ಕೆಚೆ, ಬಱಿಲುಗೊಂಡ ಸಸಿ, ಒಲುಮೆ ಒಚ್ಚತ, ಆಣೆ ಊಣೆ, ಗಂಡಗಂಡರೆಲ್ಲ ಹೆಂಡಹೆಂಡಿರಾಗಿ, ಕಗ್ಗನೆ ಕಂದು ಮಿಗ್ಗನೆ ಮಿಂಚು – ಇತ್ಯಾದಿ.

ಅಭಿವ್ಯಕ್ತಿಯನ್ನು ಸಾಧಿಸುವಲ್ಲಿ ಭಾವಕ್ಕೆ ಭಾಷೆ ದಾಸನಾಗಬೇಕು. ಅನುಭಾವ ಸಂದರ್ಭದಲ್ಲಂತೂ ಅದು ತುಂಬು ತೊತ್ತಾಗಿ ದುಡಿಯಬೇಕು. ದುಡಿಯದಿದ್ದರೆ ಅಮೂರ್ತ ಅಗ್ರಾಹ್ಯವಾದ ಅಲೌಕಿಕವು ಅನುಭೂತಿಗೆ ಸಿಗಲಾರದು. ಅಲೌಕಿಕಾನುಭವ ಸಾಧಿತವಾಗಬೇಕಾದರೆ ಭಾಷಾ ಪ್ರಭುತ್ವ (ವ್ಯುತ್ಪತ್ತಿ) ತುಂಬು ಪ್ರಮಾಣದಲ್ಲಿರಬೇಕು. ಔಚಿತ್ಯವರಿತು ಪ್ರಯೋಗಿಸುವ ಅಸ್ತ್ರವಿದ್ದಂತೆ ಮಾತು. ಅಂತಹ ಅರ್ಥಪೂರ್ಣ, ಔಚಿತ್ಯಪೂರ್ಣ ಮಾತಿನ ಬಳಕೆಯಲ್ಲಿ ಅಕ್ಕನದು ಗಣನೀಯ ಯಶಸ್ಸು.

– ಸಾ.ಶಿ.ಮರುಳಯ್ಯ

***********

ಸಂಕೇತ ಸೂಚಿಗಳು

ಹೊ: ಹೊನ್ನವಳ್ಳಿ ಮಠದ ಓಲೆ ಪ್ರತಿ

ಹೆ.ವ. ಹೆಚ್ಚಿನ ವಚನಗಳು

## ಅಕ್ಕಗಳ ವಚನಗಳು

೧

ನೆಲದ ಮಱೆಯ ನಿಧಾನದಂತೆ, ತಿಲದ ಮಱೆಯ ತೈಲದಂತೆ,
ಶಿಲೆಯ ಮಱೆಯ ಕನಕದಂತೆ, ಮರದ ಮಱೆಯ ತೇಜದಂತೆ,
ಭಾವದ ಮಱೆಯ ಬ್ರಹ್ಮವಾಗಿಪ್ಪ
ಚೆನ್ನಮಲ್ಲಿಕಾರ್ಜುನನ
ನಿಲವನಱಿಯಬಾರದು

೨

ಎನ್ನ ನಾನಱಿವ ಮುನ್ನವೆಲ್ಲಿದೆ ಹೇಳಯ್ಯ?
ಚಿನ್ನದೊಳಗಣ ಬಣ್ಣದಂತೆ ಎನ್ನೊಳಿರ್ದೆಯಯ್ಯಾ!
ಎನ್ನೊಳಗಿದು ಮೈದೋಱದ ಭೇದವ ನಿಮ್ಮಲ್ಲಿ ಕಂಡೆ ಕಾಣಾ
ಚೆನ್ನಮಲ್ಲಿಕಾರ್ಜುನಾ

೩

ಹಾಲು ತಪ್ಪವ ೧ನುಂಗಿ೧ ಬೇಱಗಬಲ್ಲುದೆ?
ಸೂರ್ಯಕಾಂತದಗ್ನಿಯನಾರು ಭೇದಿಸಬಲ್ಲರು?
ಅಪಾರ ಮಹಿಮ ಚೆನ್ನಮಲ್ಲಿಕಾರ್ಜುನನೆನ್ನೊಳಡಗಿಪ್ಪ
ಪರಿಯ ಬೇಱಿಲ್ಲದೆ ಕಂಡು ಕಣ್ದೆಱೆದೆನು

———

೧ಕೂಡಿ೧ (ಹೊ)–ಹೊನ್ನವಳ್ಳಿ ಮಠದ ಓಲೆಪ್ರತಿ )

೪

ಬಯಲಿಂದ ಹುಟ್ಟಿದಳವ್ವೆ,
ಆ ಅವ್ವೆಯ ಬಯಱಲ್ಲಿ ಐವರು ಮಕ್ಕಳು ಬಂದರು
ಒಬ್ಬಾತ ಜಗದ ಭಾವರೂಪಾದ;
ಒಬ್ಬಾತ ಜಗದ ಪ್ರಾಣರೂಪಾದ;
ಒಬ್ಬತನ್ನೆಮುಖವಾಗಿ ಜಗಕ್ಕೆ ಕಾಯರೂಪನಾದ
ಇಬ್ಬರು ಮಕ್ಕಲು ಜಗದುತ್ಪತ್ತಿ ಸ್ಥಿತಿಯ ನಡೆಸುವ ಅಧಿಕಾರಿಗಳಾದರು.
ಆ ಐವರರಮನೆಯ ಸುಖ
[ಅ] ನಿತ್ಯವೆಂದು ಅಱಿಯದ ಕಾರಣ ಮರ್ತ್ಯಕ್ಕೆ ಬಱಲಾದೆನು
ಇನ್ನು ಮತ್ತೆ ಕೈಲಾಸವ ಹೊಕ್ಕೆನಾದಡೆ
ಮರ್ತ್ಯದ ಬಟ್ಟೆಯ ಮೆಟ್ಟಿದೆನಾದಡೆ
ಚೆನ್ನಮಲ್ಲಿಕಾರ್ಜುಯ್ಯನ ಪಾದದಾಣೆ

೫

ಶರಣರ ಮನನೋಯೆ ನುಡಿದೆನಾಗಿ
ಹರಜನ್ಮನವಳಿದು ನರಜನ್ಮಕ್ಕೆ ಬಂದೆನು
ಹರನಟ್ಟಿದ ಬೆಸನ ಶಿರದೊಳಗಾಂತೊಡೆ
ಗಿರಿಗಳ ಭಾರವೆನಗಾದುದಯ್ಯ
ಚೆನ್ನಮಲ್ಲಿಕಾರ್ಜುನನ ಧರ್ಮದಿಂದ
ಸಂಸಾರ ಕರ್ಮದ ಹೊದಿಕೆಯನಿಳುಹಿ
ನಡುದೊಱಯ ಹಾಯಿದು ಹೋದೆನು.

೬

ಹರಿಯ ನುಂಗಿತು ಮಾಯೆ; ಅಜನ ನುಂಗಿತ್ತು ಮಾಯೆ
ಇಂದ್ರನ ನುಂಗಿತ್ತು ಮಾಯೆ; ಚಂದ್ರನ ನುಂಗಿತ್ತು ಮಾಯೆ
ಬಲ್ಲೆನೆಂಬ + ಬಲುಗೈ [ರ] ನುಂಗಿತ್ತು ಮಾಯೆ
ಅಱಿಯೆನೆಂಬ ಅಜ್ಞಾನಿಗಳನಲ್ಲಾಡಿಸಿತ್ತು ಮಾಯೆ
ಈರೇಳು ಭುವನವನಾಱಡಿಗೊಂಡಿತ್ತು ಮಾಯೆ
ಚೆನ್ನಮಲ್ಲಿಕಾರ್ಜುನಯ್ಯಾ, ಎನ್ನ ಮಾಯವ ಮಾಣಿಸಾ ಕರುಣಿ.

---

+ ವರ (ಹೊ)

೭

ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ
ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ
ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ
ನೆನಹಿಗೆ ಅಱಿವಾಗಿ ಕಾಡಿತ್ತು ಮಾಯೆ
'ಅಱುಹಿಂಗೆ ಮಱಹಾಗಿ ಕಾಡಿತ್ತು ಮಾಯೆ೧
ಜಗದ ಜಂಗುಳಿಗೆ ಬೆಂಗೋಲನೆತ್ತಿ ಕಾಡಿತ್ತು ಮಾಯೆ
ಚೆನ್ನಮಲ್ಲಿಕಾರ್ಜುನಯ್ಯಾ
ಮಾಯೆಯನಾರೂ ಗೆಲಬಾರದು.

೮

ಎನ್ನ ಮಾಯದ ಮದವ ಮುಱಿಯಯ್ಯ
ಎನ್ನ ಕಾಯದ ಕಳವಳವ ಕಳೆಯಯ್ಯ
ಎನ್ನ ಜೀವದ ಜಂಜಡವ ಬಿಡಿಸಯ್ಯ
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯಾ
ಎನ್ನ ಸುತ್ತಿದ ಪ್ರಪಂಚುವ ಬಿಡಿಸಾ ನಿಮ್ಮ ಧರ್ಮ.

೯

ಎನ್ನ ಕಾಯ ಮಣ್ಣು, ಜೀವ ಬಯಲು
ಆವುದ ಹಿಡಿವೆನಯ್ಯಾ ದೇವಾ?
ನಿಮ್ಮನಾವ ಪರಿಯಲ್ಲಿ ನೆನೆವೆನಯ್ಯ?
ಎನ್ನ ಮಾ೨ಯೆಯನು ಮಾಣಿ೨ಸಯ್ಯ
ಚೆನ್ನಮಲ್ಲಿಕಾರ್ಜುನಯ್ಯ.

೧೦

ಬಿಟ್ಟಿಹೆನೆಂದಡೆ ಬಿಡದೀ ಮಾಯೆ
ಬಿಡದಿರ್ದಡೆ ಬೆಂಬತ್ತಿತ್ತು ಮಾಯೆ
ಜೋಗಿಗೆ ಜೋ೩ಗಿಣಿ೩ ಯಾಯಿತ್ತು ಮಾಯೆ
ಸವಣಂಗೆ ಕಂತಿಯಾಯಿತ್ತು ಮಾಯೆ

---

೧ x ೧ (ಹೊ) ೨ ಯವ ಬಿಡಿ ೨ (ಹೊ) : ೩ ಗುಳಿ ೩ (ಹೊ)

ಯತಿಗೆ ಪರಾಕಿಯಾಯಿತ್ತು ಮಾಯೆ
ನಿನ್ನ ಮಾಯೆಗೆ ನಾನಂಜುವವಳಲ್ಲ
ಚೆನ್ನಮಲ್ಲಿಕಾರ್ಜುನ ದೇವಯ್ಯಾ.

೧೧

ಅಕ್ಕಟಕ್ಕಟಾ ಸಮಸಾರದ ಹಗರಣವು ಬಂದಾಡಿತ್ತಲ್ಲಾ
ಆಪ್ಪಾ ಬೊಪ್ಪಾ ಎಂದೆಂಬ ಚೋಹ ಮೊದಲೆ ಬಂದಾಡಿತ್ತಲ್ಲಾ
ತುಪ್ಪುಳು ತೊಡದ ಮೀಸೆಯ ಚೋಹವು ನಟ್ಟನಡು ಬಂದಾಡಿತತಲ್ಲಾ
ಮುಪ್ಪು ಮುಪ್ಪು ಎಂಬ ಮೋಹ ಕಟ್ಟಕಡೆಯಲ್ಲಿ ಬಂದಾಡಿತ್ತಲ್ಲಾ
ನಿಮ್ಮ ನೊಟ ತೀರಲು ಜಗದಾಟ ೧ತೀರಿ'ತ್ತು ಕಾಣಾ
ಚೆನ್ನಮಲ್ಲಿಕಾರ್ಜುನಾ.

೧೨

ಒಂದಲ್ಲ ಎರಡಲ್ಲ ಮೂರಲ್ಲ ನಾಲ್ಕಲ್ಲ
ಎಂಬತ್ತುನಾಲ್ಕು ಲಕ್ಷ೨ ಯೋನಿಯೊಳಗೆ೨ ಬಂದೆ ಬಂದೆ
ಬಾರದ ಭವಂಗಳಲ್ಲಿ ೩ ಬಂದೆ ಬಂದೆ೩
ಉಂಡೆ ಉಮಡೆ ೪ಸುಖಾಸುಖಂಗಳ೪
ಹಿಮದಣ ಜನ್ಮ ೫ತಾನೇನಾದಡೆಯೂ೫ ಆಗಲಿ
ಮುಂದೆ ನೀ ಕರುಣಿ೬ಸಾ೬ ಚೆನ್ನಮಲ್ಲಿಕಾರ್ಜುನಾ.

೧೩

ತೆರಣಿಯ ಹುಳು ನನ್ನ ಸ್ನೇಹ೭ದಿಂದ೭ ಮನೆಯ ಮಾಡಿ
ತನ್ನ ನೂಲು ತನ್ನ೮ನ೮ ಸುತ್ತಿ ಸಾವ ತೆಱನಂತೆ
೯ಮನ ಬಂದುದನು ಬಯಸಿ ಬೇವುತ್ತಿದ್ದೆನಯ್ಯ೯
ಎನಗೆ ಮನೆ ಎನಗೆ ಧನ ಎನಗೆ ಬೇಕೆಂಬುದೆಲ್ಲ
ಕನಸಿನಲ್ಲಿ ಕಣ್ಮುಚ್ಚಿ ತೆಱದಂತೆ ನೋಡಾ
ಎನ್ನ ನದ ೧೦ದುರಾಶೆ೧೦ ಮಾಣಿಸಿ
ನಿಮ್ಮತ್ತ ತೋಱಾ ಚೆನ್ನಮಲ್ಲಿಕಾರ್ಜುನಾ

೧೪

ಕಲ್ಲ ಹೊಕ್ಕಡೆ ಕಲ್ಲ ಬರಿಸಿದೆ ಗಿರಿಯ ಹೊಕ್ಕಡೆ ಗಿರಿಯ ಬರಿಸಿದೆ
ಭಾಪು ಸಂಸಾರವೆ ಬೆನ್ನಿಂದ ಬೆನ್ನ ಹತ್ತಿ ಬಂದೆ
ಚೆನ್ನಮಲ್ಲಿಕಾರ್ಜುನಯ್ಯಾ ಇನ್ನೇವೆನಿನ್ನೇವೆ ?

೧೫

ಸಂಸಾರವೆಂಬ ಹಗೆಯಯ್ಯ ಎನ್ನನಱಸುತ್ತಿದೆಯಯ್ಯ
ನಿಮ್ಮುವ ಮಱೆಹೊಕ್ಕೆ ಕಾಯಯ್ಯ
ಎನ್ನ ವಂಶ ೧ವಂಶ೧ ತಪ್ಪದೆ ಅಱಸಿಕೋಂ(ಡು) ಬಹುದಯ್ಯ
ಎನ್ನ ಬಿನ್ನಪವನವಧರಿಸಿ ಚೆನ್ನಮಲ್ಲಿಕಾರ್ಜುನಾ.

೧೬

ಬೆಂದ ಸಂಸಾರ ೨ಬೆಂ೨ ಬಿಡದೆ ಕಾಡಿಹುದಯ್ಯ ಏವೆನೇವೆನಯ್ಯ?
ಅಂದಂದಿನ ದಂದುಗಕ್ಕೆ ಏವೆನೇವೆನಯ್ಯ?
ಬೆಂದ ಒಡಲ ಹೊರೆವುದುಕ್ಕೆ ೨ನಾನಾರೆ೩,
ಚೆನ್ನಮಲ್ಲಿಕಾರ್ಜುನಯ್ಯ ಕೊಲು ಕಾಯಿ ನಿಮ್ಮಧರ್ಮ ನಿಮ್ಮಧರ್ಮ.

೧೭

ತನುವಿನ ಸತ್ವ ನಿಲ್ಲಿಸಿತ್ತು ಮನದ ವಿರಕ್ತಿಯ ಕೆಡಿಸಿತ್ತು
ಘನವ ಕಾಣಲೀಯದು

ಅಜುಹಿರಿಯರ ತಜಿಕಟ ಕಾಡಿ ಎಳತಟ ಮಾಡಿತ್ತು
ಚೆನ್ನಮಲ್ಲಿಕಾರ್ಜುನಾ
ನಿಮ್ಮ ಮಜಿಗೊಂಡ ಸಂಸಾರದ ತೆಜಿ ಎನ್ನ ಬೆರಸಲೀಯದು

೧೮

ಆವಾಗಳು ಎನ್ನ ಮನ ಉದರಕ್ಕೆ ಹರಿವುದು.
ಕಾಣಳಲಾಜಿಳ ನಯ್ಯಾ ನಿಮ್ಮವಶನುಶ ಭೇದಿಸಲರಿಯೆ
ಮಾಯದ ಸಂಸಾರದಲ್ಲಿ ಸಿ೧ಲುಕಿ೧ ದೆನು
ಎನ್ನ ದೇವ ಚೆನ್ನಮಲ್ಲಿಕಾರ್ಜುಯ್ಯಾ
೨ನಿಮ್ಮ ಹೊದ್ದುವಂತೆ ಮಾಡ ನಿಮ್ಮ ಧರ್ಮ೨

೧೯

ಪಂಚೇಂದ್ರಿಯದ ಉರವಣೆಯ
ಃಉಃದುಮದದ ಳಭರದಳ ಜವ್ವನದ ಶಒಶಡಲು
ವೃಥಾ ಹೋಯಿತ್ತಲ್ಲಾ
ಅಡವಿಯಲ್ಲಿ ಮರ ಹುಟ್ಟಿ ಮರಳಿ ಕೆಡೆವಂತೆ ಒಡಲು
ವೃಥಾ ಹೋಯಿತ್ತಲ್ಲಾ
ತುಂಬಿ ಪರಿಮಳವನೆ ಕೊಂಡು ಲಂಘಿಸುವ ತೆಜನಂತೆ
ಎಂದಿಂಗೆ ಒಳಕೊಂಬೆಯಯ್ಯ, ಚೆನ್ನಮಲ್ಲಿಕಾರ್ಜುನಾ.

೨೦

ಓಪಂಚೇಂಓದ್ರಿಯ ಸಪ್ತಧಾತು ಅಷ್ಟಮದ ಕೊಂದು ಕೂಗಿತ್ತಲ್ಲಾ
ಹರಿ ಬ್ರಹ್ಮರ ಬಲುಹ ಮುಜಿದು ಕೊಂದು ಕೂಗಿತ್ತಲ್ಲಾ
ಮಹಾ ಋಷಿಗಳ ತಪವ ಕೆಡಿಸಿ ಕಾಡಿ ಕೊಮದು ಕೂಗಿತ್ತಲ್ಲಾ
ಚೆನ್ನಮಲ್ಲಿಕಾರ್ಜುನಾ
ಶರಣೆಂದು ನಂಬಿ ಮಜಿ ಹೊಕ್ಕಡೆ ಅಂಜಿ ನಿಂಓದಓತ್ತಲ್ಲಾ.

೨೧

ಸಂಸಾರ ಸಂಗದಲ್ಲಿ ಇದ್ದೆ ನೋಡಾ ನಾನು
ಸಂಸಾರ ನಿಸ್ಸಾರವೆಂದು ತೋಜಿದನೆಓನಗೆಓ ಗುರು
ಅಂಗವಿಕಾರದ ಸಂಗವ ನಿಲಿಸಿ
ಲಿಂಗವನಂಗದ ಮೇಲೆ ಸ್ಥಾಪ್ಯವ ಮಾಡಿದನೆನ್ನ ಗುರು
ಹಿಂದಣ ಜನ್ಮವ ತೊಡೆದು, ಮುಂದಣ ಪದವ ಕರುಣಿಸಿದೆನೆನ್ನ ಗುರು
ಚೆನ್ನಮಲ್ಲಿಕಾರ್ಜುನನ ನಿಜವನರಷುಹಿದನೆನೆನ ಗುರು.

೨೨

ಹರನೇ ನೀನೆನಗೆ ಗಂಡನಾಗಬೇಕೆಂದು, ಅನಂತಕಾಲ ತಪಸಿದ್ದೆ ನೋಡ
ಹಸೆಯ ಮೇಲಣ ಮಾತ ಬೆಸಗೊಳ್ಳಲಟ್ಟಿದರೆ
ಶಶಿಧರನ ಹತ್ತಿರಕೆ ಕಳುಹಿದರೆಮ್ಮವರು
ಭಸ್ಮವನೆ ಪೂಸಿ ಕಂಕಣವನೆ ಕಟ್ಟಿದರು,
ಚೆನ್ನಮಲ್ಲಿಕಾರ್ಜುನಂಗೆ ನಾನಾಗಬೇಕೆಂದು.

೨೩

ಗುರುವಿನ ಕರುಣದಿಮದ ಲಿಂಗವ ಕಂಡೆ ಜಂಗಮವ ಕಂಡೆ
ಗುರುವಿನ ಕರುಣದಿಂದ ಪಾದೋದಕ ಪ್ರಸಾದವ ಕಂಡೆ

ಗುರುವಿನ ಕರುಣದಿಂದ ಸಜ್ಜನ ಸದ್ಭಕ್ತರ ರಸಗೋಷ್ಠಿಯ ಕಂಡೆ
ಚೆನ್ನಮಲ್ಲಿಕಾರ್ಜುನಯ್ಯಾ
ನಾ ಹುಟ್ಟಲೊಡನೆ ಶ್ರೀಗುರು ವಿಭೂತಿಯ ಪಟ್ಟವ ಕಟ್ಟಿ
೧ಲಿಂಗ೧ ಸ್ವಾಯತವ ಮಾಡಿದನಾಗಿ ಧನ್ಯಳಾದೆನು.

೨೪

ಉದಯದಲೇಳುತ್ತ ನಿಮ್ಮ ನೆನೆವೆನಯ್ಯ
ಕಸದೆಗೆದು ಚಳೆಯವ ಕೊಟ್ಟು ನಿಮ್ಮ ಬರವ ಹಾರುತ್ತಿಪ್ಪೆನಯ್ಯ
ಹಸೆ ಹಂದರವಿಕ್ಕಿ ನಿಮ್ಮಡಿಗಳಿಗೆ ಎಡೆಮಾಡಿಕೊಂಡಿಪ್ಪೆ
ಚೆನ್ನಮಲ್ಲಿಕಾರ್ಜುನಾ ನೀನಾವಾಗ ಬಂದಹನೆಂದು.

೨೫

ಇಂದೆನ್ನ ಮನೆಗೆ * ಬಂದಹನೆಲೆಗವ್ವಾ
ನಿಮ ನಿಮಗೆಲ್ಲಾ ಶೃಂಗಾರವ ಮಾಡಿಕೊಳ್ಳಿರವ್ವಾ
ಚೆನ್ನಮಲ್ಲಿಕಾರ್ಜುನನೀಗಳೆ ಬಂದಹನು
ಇದಿರುಗೊಳ್ಳ ಬನ್ನಿರವ್ವ ಕೆಳದಿಯದಿರಾ.

---

೧ ಕ್ಕಿ ೧, ೨ ನಾನು ಹೊದ್ದನೆನ್ನುವನು೨ (ಹೊ) ; ೩ ಹು ೩

೨೬

ಅರುಸಿನವನೆ ಮಿಂದು ಹೊಮದೊಡಿಗೆ೧ಯ೧ನೆ ತೊಟ್ಟು
ದೇವಂಗವನುಟ್ಟೆನೆಲೆ ಪುರುಷ ಬಾರಾ ಪುರುಷ ರತ್ನವೆ ಬಾರಾ
ನಿಮ್ಮ ಬರವೆನ್ನ ಪ್ರಾಣದ ಬರವಾಗಿದೆ
ಚೆನ್ನಮಲ್ಲಿಕಾರ್ಜುಯ್ಯಾ
ನೀ ಬಂದಹನೆಂದು ಬಟ್ಟೆಯನೆ ನೋಡಿ ಬಾಯಾಜುತ್ತಿದ್ದೇನೆ

೨೭

ಹೊಳೆವ ಕೆಂಜೆಡೆ೨ಯ ಮೇಲೆ ಎಳೆವೆಳ೨ದಿಂಗಳು.
ಫಣಿಮಣಿ ಕರ್ಣಕುಮಡಲ ೩ನೋಡವ್ವಾ#
ರುಂಡಮಾಲೆಯ ೪ಕೊರಳಳವನ ಕಂಡಡೆ ಒಮ್ಮೆ ಬರಹೇಳಿರೆ
ಗೋವಿಂದನ ನಯನ ಉಂಗುಷ್ಠದಲ್ಲಿಪ್ಪುದು
ಚೆನ್ನಮಲ್ಲಿಕಾರ್ಜುನ ದೇವಂಗಿದು ಕುಜುಹವ್ವಾ.

೨೮

ಬಂದಹನೆಂದು ಬಟ್ಟೆಯ ನೋಡಿ,
ಬರದಿರ್ದಡೆ ಕರಗಿ ಕೊರಗಿದೆ
ತಡವಾದರೆ ಬಡವಾದೆ
ಚೆನ್ನಮಲ್ಲಿಕಾರ್ಜುನನೊಂದಿರುಳಗಲಿದಡೆ
ತಕ್ಕೆ ಸಡಲಿದ ಜಕ್ಕವಕ್ಕಿಯುಮತಾದೆನವ್ವ.

೨೯

ಧರೆಯ ಮೇಗಣ ಹುಲ್ಲೆ ಚಂದ್ರಮನೊಳಗಣ ಎರಳೆ
ಕೂರ್ತಡೆ ಫಲವೇನೋ ಕೂಟವಿಲ್ಲದನ್ನಕ್ಕ?

ಇಂಬನಜೆಯದ ಠಾವಿಯಲ್ಲಿ ಕಣ್ಣೇಟವ ಮಾಡಿದಡೆ
ತುಂಬಿದ ತೊರೆಯ ನಡುವೆ ಮಾಮರ ಕಾತಂತೆ
ಚೆನ್ನಮಲ್ಲಿಕಾರ್ಜುನದೇವ
ದೂರದ ಸ್ನೇಹವ ಮಾಡಲು ಬಾರದ ಭಾವಕ್ಕೆ ಬಂದೆ.

---

೧ ತೊಟ್ಟೆನೆಲ್೧ (ಹೊ); ೨ ಗಳಲ್ಲಿ ಎಳೆವಳು೨. ೩ವ೩, ೪ ಗರು೪

೩೦

ಉರಿಯ ‘ಪಳಿಯನೆ ಉಡಿಸಿ೧ ಊರಿಂದ ಹೊಱಗಿರಿಸಿ
ಕರೆಯಲ್ಟ್ಟದ ಸಖಿಯ ನೆರೆದ ನೋಡೆಲೆಗವ್ವಾ
ತೂರ್ಯಾವಸ್ಥೆಯಲ್ಲಿ ತೂಗಿ ತೂಗಿ ನೋಡಿ, ಬೆಱಗಾಗಿ ನಿಲಲಾಜೆನವ್ವಾ
ಈ ಆಱವಸ್ಥೆ ಕರ ಹಿರಿದು ಎಲೆ ತಾಯೆ.
ಗಿರಿ ಬೆಂ೨ಯ ತರು೨ವುಳಿದು ಹೊನ್ನರ ೩೪೩ಯ ಮರನು ೪ಲಿ೪ವಾಗ
ಹಿರಿಯತನಗೆಡಿಸಿ ನೆರೆವೆ ಚೆನ್ನಮಲ್ಲಿಕಾರ್ಜುನನ.

೩೧

೫ ತಾನು ದಂಡುಮಂಡಲಕ್ಕೆ ಹೋದಹೆನೆಂದಡೆ ನಾನು ಸುಮ್ಮನಿಹೆನಲ್ಲದೆ
ತಾನೆ೫ನ್ನ ಕೈಯೊಳಗಿದ್ದು ೬ತಾನೆನ್ನ೬ ಮನದೊಳಗಿದ್ದುನುಡಿಸದಿ೭ರ್ದೊ೭ಡೆ
ಆನೆಂತು ಬದುಕುವೆನು ?
ಸ್ನೇಹವೆಂಬ ಕುಮಟಣಿ ಚೆನ್ನಮಲ್ಲಿಕಾರ್ಜುನನ ಒಲಿಸದಿರ್ದಡೆ.
ಆ ಸಖಿಗೆ ನಾನೇವೆ ನಾನೇವೆ ಹೇಳಿರವ್ವಾ.

೩೨

ಮೋಹವುಳ್ಳಲ್ಲಿ ಮ೭ಚ್ಚ೭ದಂತೆ ಮಾಡಯ್ಯ
ಮೋಹವುಳ್ಳಲ್ಲಿ ಕುರುಳುವ ಕೊಯ್ಯಯ್ಯ
ಮೋಹವುಳ್ಳಲ್ಲಿ ಬೆರಳುವ ಕಡಿಯಯ್ಯ
ಚೆನ್ನಮಲ್ಲಿಕಾರ್ಜುನದೇವಯ್ಯ
ನೊಂದೆನೆಂದಡೆ ಮನಕತ ಮಾಡಯ್ಯ.

೩೩

೯ಚೆನ್ನಕ್ಕರಿಸಿನ ಚೆನ್ನಕ್ಕರಿಸಿನ ೯ಚೆನ್ನಕ್ಕರಿಸಿನ ೧೦ಕೊಳ್ಳಿ೧೦ರವ್ವಾ
ಎಮ್ಮನಲ್ಲನ ಮೈ ಹತ್ತುವರಿಸಿನವ ಹೇಳಿರವ್ವಾ
ಒಳಗುಮದದರಿಸಿನವ ಮಿಂಚು ಚೆನ್ನಮಲ್ಲಿಕಾರ್ಜುನನಪ್ಪಿರವ್ವಾ

---

‘ಫಣಿಯನುಟ್ಟು ಊರಿಂದ ೧; ೨ ದೂರು ೨ ೩ ೪ ೩; ೪ ರಿ ೪ ; ೫ ನೀ ದಂಡುಮಂಡಲವ ಮಾಡಿಹನೆಂದು ಸುಮ್ಮನಿರ್ದೆ, ನೀ ದಂಡುಮಂಡಲಕ್ಕೆ ಹೋದಹೆನೆಂದು ಪರಿಣಾಮಿ ಸುವೆ ಎ ೫ ೬ ಗೆ೬, ೭ ರ್ದ೭; ೮ ಚ್ಚೆ ೮; ೯ ಚೆನ್ನಕ್ಕದಸಿನ ೯ ; ೧೦ ಹೇಳಿ ೧೦.

೩೪

ಹಗಲು ನಾಲ್ಕು ಜಾವ ನಿಮ್ಮ ಕಳವಳದಲ್ಲಿದ್ದೆ ೧ನೋಡಾ೧
ಇರುಳು ನಾಲ್ಕು ಜಾವ ಲಿಂಗದ ವಿಕಳಾವಸ್ಥೆಯಲಿಪ್ಪೆ ನೋಡಾ
ಇರಳು-ಹಗಲು ನಿಮ್ಮ ಹಂಬಲದಲ್ಲಿಮೈಮಱೆದೊಱಗಿಪ್ಪೆ ೨ನೋಡಾ೨
ಚೆನ್ನಮಲ್ಲಿಕಾರ್ಜುನಾ ನಿಮ್ಮ ಒಲುಮೆ ನಟ್ಟು, ಹಸಿವು ೩ತೃಷೆ೩ ನಿದ್ರೆಯ ತೊಱೆದ ನೋಡಾ

೩೫

ಕಾಣುತ್ತ ಕಾಣುತ್ತ ೪ಕಂಗಳ೪ ಮುಚ್ಚಿದ ೫ನೋಡವ್ವಾ೫
ಕೇಳುತ್ತ ಕೇಳುತ್ತ ಮೈಮಱದೊಱಗಿದೆ ೫ನೊಡವ್ವಾ೫
ಹಾಸಿದ ಹಾಸಿಗೆಯ ೬ನೀಡಾಡಿ೬ ಕಳೆದೆ
ಚೆನ್ನಮಲ್ಲಿಕಾರ್ಜುನನ ಇರುಳೆಲ್ಲಾ ಕೂಡಿ
ಬೆಳಗಾಗಿ ಕಾಣದೆ ಬೆಂಬಿದ್ದೆನು

೩೬

ಕೇಳವ್ವ ಕೇಲವ್ವ ನಾನೊಂದು ಕನಸ ಕಂಡೆ
ಗಿರಿಯ ಮೇಲೊಬ್ಬ ಗೊರವ ಕುಳಿತಿರ್ದುದ ಕಂಡೆ
ಗಿರಿಯೆಂಬುದು ಸಿರಿಶೈಲ ಗೊರವನೆ ಚೆನ್ನಮಲ್ಲಿಕಾರ್ಜುನನು.

೩೭

ಅಕ್ಕ ಕೇಳಕ್ಕಾ ನಾನೊಂದು ಕನಸ ಕಂಡೆ
ಚಿಕ್ಕ ಚಿಕ್ಕ ಕೆಂಜೆಡೆಗಳ ಸುಲಿಪಲ್ಲ ಗೊರವನು
ಬಂದೆನ್ನ ನೆರೆದ ನೋಡವ್ವಾ
ಆತನನಪ್ಪಿಕೊಂಡು, ತಳವೆಳಗಾದೆನು
ಚೆನ್ನಮಲ್ಲಿಕಾರ್ಜುನನ ೭ಕಂಡು೭
ಕಣ್ಣ ಮುಚ್ಚಿ ತೆಱೆದು ತಳವೆಳಗಾದೆನು

---

೧ ಡಯ್ಯ ೧ ೨ ನ್ಯ ೨, 3 x 3, 4 ಕಣ್ಣ 4, 5 x 5, 6 ಬಿ ಸಾ 6 , + ನು 77 (ಹೊ)

೩೮

ಹಗಲಿನ ಕೂಟಕ್ಕೆ ಹರಚೆಂಡಾದೆ
ಇರುಳಿನ ಕೂಟದಲ್ಲಿ ಇಂಬಱೆದು ಹತ್ತಿದೆ.
ಕನಸಿನಲ್ಲಿ ಮನ ಮನ ಸಂಗದಲ್ಲಿ ಸಮನಾದೆ
ಮನಸಿನಲ್ಲಿ ಮೈಮಱೆದು 'ಒಱಗಿ೧ದ್ದೆ
ಚೆನ್ನಮಲ್ಲಿಕಾರ್ಜುನನ ಕಂಡು ಕಣ್ದೆಱೆದೆ *.

೩೯

ದೂರದಲ್ಲಿದ್ದಹನೆಂದು ಬಾಯಾಱೆ ಬಳಲುತ್ತಿದ್ದೆನು.
ಸಾರೆ ಬೆರಸಿ ಎನ್ನ ಕರಸ್ಥಲದಲ್ಲಿ ಮೂರ್ತಿಗೊಂಡಡೆ
ಎನ್ನಾರತವೆಲ್ಲವೂ ಲೀಂಗ, ೨ನಿಮ್ಮಲ್ಲಿ ನಟ್ಟಿತು೨ ನೋಡಯ್ಯ !
ಚೆನ್ನಮಲ್ಲಿಕಾರ್ಜುನಯ್ಯಾ
ನಿಮ್ಮನು ಕರಸ್ಥಲದಲಿ ನೋಡಿ ಕಂಗಳೇ ಪ್ರಾಣವಾಗಿದೆನಯ್ಯ.

೪೦

ಸಜ್ಜನೆಯಾಗಿ ಮಜ್ಜನಕ್ಕೆಱೆವೆ, ಶಾಂತಳಾಗಿ ಪೂಜೆಯ ಮಾಡುವೆ,
ಸಮರತಿಯಿಂದ ನಿಮ್ಮ ಹಾಡುವೆ. ಚೆನ್ನಮಲ್ಲಿಕಾರ್ಜುನಯ್ಯಾ
ನಿಮ್ಮನ[ಗ] ಲದ ಪೂಎ ಅನುವಾಯಿತ್ತೆನಗೆ.

೪೧

ಅಂಗೈಯೊಳಗಣ ಲಿಂಗವ ಪೂಜಿಸುತ್ತ
ಮಂಗಳಾರತಿಯಗಳನು ತೊಳಗಿ ಬೆಳಗುತಲಿದೆ ನೋಡಯ್ಯ
ಕಂಗಳ ನೋಟ ಕಱುವಿಟ್ಟ ಭಾವ

ಹಿಂಗದ ಮೋಹ ತೆಱಹಿಲ್ಲ ನೋಡಯ್ಯ
ಚೆನ್ನಮಲ್ಲಿಕಾರ್ಜುನಯ್ಯಾ
ನಿಮ್ಮನಗಲದ ಪೂಜೆ ಅನುವಾಯಿತ್ತೆನಗೆ.

---

೧ ಸಂಗವಾಗಿ & ನು: ೨ ಮನನಟ್ಟಿ ನೋಟ ೨

೪೨

ಸಜ್ಜೆಯನುಪ್ಪರಿಸಿ ಶಿವಲಿಂಗವೆನ್ನ ಕರಸ್ಥಲಕೆ ಬರಲು
ಪ್ರಜ್ವಲಿಸಿ ತೊಳತೊಳಗಿ ಬೆಳಗುವ ಕಾಂತಿಯೊಳು
ಪ್ರಜ್ವಲಿಸಿ ದೃಷ್ಟಿನಟ್ಟು ಒಜ್ಜರಿಸಿ ಸುರಿವ ಅಶ್ರುಜಲ
ಶಿವಸುಖಸಾರಾಯದಲ್ಲಿ
ನಿಮ್ಮ ಸ[ಜ್ಜನೆ] ಯ ಸತಿಯ ರತಿಯೊಡಗೂಡಿ
ಲಜ್ಜೆಗೆಟ್ಟು ನಿಮ್ಮ ನೆರೆವೆ ಚೆನ್ನಮಲ್ಲಿಕಾರ್ಜುನಾ

೪೩

ಪರರೊಡತಣಮಾತು ನಮಗೇತಱದಯ್ಯ ?
ಪರರೊಡತಣ ಗೊಟ್ಟಿ ನಮಗೇತಱದಯ್ಯ ?
ಲೋಕದ ಮಾನವರೊಡನೆ ನಮಗೇತಱ ವಿಚಾರವಯ್ಯ?
ನಮಗೇತಱ ವಿಚಾರವಯ್ಯಾ?

೪೪

ನಮಗೆ ನಮ್ಮ ಲಿಂಗದ ಚಿಂತೆ ನಮಗೆ ನಮ್ಮ ಭಕ್ತರ ಚಿಂತೆ
ನಮಗೆ ನಮ್ಮ ಆದ್ಯರ ಚಿಂತೆ
ನಮಗೆ ನಮ್ಮ ಚೆನ್ನಮಲ್ಲಿಕಾರ್ಜುನನ ಚಿಂತೆಯಲ್ಲದೆ
ಲೋಕದ ಮಾನವರ ಮಾತು ನಮಗೇಕಣ್ಣಾ?

೪೫

ಅಮೃತವನುಂಬ ಶಿಶುವಿಂಗೆ ವಿಷಯವನೂಡವರೆ ಅಯ್ಯ ?
ನೆಳಲ ತಂಪಿನಲ್ಲಿ ಬೆಳೆದ ಸಸಿಗೆ ಉರಿಯ ಬೇಲಿಯ ಕಟ್ಟುವರೆ ಅಯ್ಯಾ
ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮ ಕರುಣದ ಕಂದನೊಡನೆ
ಸೂನೆಗಾಱರ ಮಾತನಾಡಿಸುವರೇ ಅಯ್ಯಾ ?

೪೬

ಸಾವಿರ ಹೊನ್ನಿಂಗೆ ಸಾದ ಕೊಂಡು ಸುಣ್ಣವ ಬೆರಸಿದಂತೆ ಮಾಡಿದೆಯಯ್ಯ
ನೂಱು ಲಕ್ಷದ ಬೆಲೆಗೆ ರತ್ನವ ಕೊಂಡು
ಮಡುವಿನಲ್ಲಿ ಇಟ್ಟಂತೆ ಮಾಡಿದೆಯಯ್ಯ
ಚೆನ್ನಮಲ್ಲಿಕಾರ್ಜುನಯ್ಯಾ ಎನ್ನ ಮುಟ್ಟಿ ಪಾವನವ ಮಾಡಿ
ಕಷ್ಟ ಸಂಸಾರಿಗೊಪ್ಪಿಸುವಂತೆ ಮಾಡಿದೆಯಯ್ಯಾ !

೪೭

ಶಿವ [ಶಿವಾ] ಕರ್ಮಕ್ಷಯವಾದಲ್ಲಿ
ಕರ್ಮದ ಮಾತ ಕೇಳಿಸಿದೆಯಲ್ಲಯ್ಯಾ !
ಪಾಪಲೇಪವಳಿದಲ್ಲಿ ಪಾಪದ ಮಾತ ಕೇಳಿಸಿದೆಯಲ್ಲಯ್ಯಾ !
ಶಿವ, ಶಿವಾ ಭವದ ಬಟ್ಟೆಯನಗಲಿದಲ್ಲಿ

ಬಂಧನದ ನುಡಿಯನಾಡಿಸಿದೆಯಲ್ಲಯ್ಯಾ !
ಚೆನ್ನಮಲ್ಲಿಕಾರ್ಜುನಯ್ಯಾ, ನೀನೇ ಗಂಡನೆಂದಿದ್ದಲ್ಲಿ
ಪರಪುರುಷರ ಮಾತನಾಡಿಸಿದೆಯಲ್ಲಯ್ಯಾ !

೪೮

ದಿಟಕೊಬ್ಬ ಗಂಡ ಸಟೆಗೊಬ್ಬ ಗಂಡನೆ ಅಯ್ಯ?
ಲೌಕಿಕಕೊಬ್ಬ ಗಂಡ ಪರಮಾರ್ಥಕೊಬ್ಬ ಗಂಡನೆ ಅಯ್ಯ?
ಚೆನ್ನಮಲ್ಲಿಕಾರ್ಜುನನೆಂಬ ಮಾನವನೊಚ್ಚತಗೊಂಡಿರಲು
ಬೀಸರವೋಗಬಲ್ಲುದೆಯಯ್ಯಾ?

೪೯

ಸತಿ ಎಂಬುದು ಮಾಟ, ಪತಿ ಎಂಬುದು ಮಾಟ
ತನುವೆಂಬದು ಮಾಯೆ, ಮನವೆಂಬುದು ಮಾಯೆ
ಸುಖವೆಂಬುದು ಮಾಯೆ
ಚೆನ್ನಮಲ್ಲಿಕಾರ್ಜುನನೆನಗೆ ಕೈ ಹಿಡಿದ ಗಂಡನಲ್ಲದೆ
ಮಿಕ್ಕನವರೆಲ್ಲರೂ ಮೂಗಿಲ್ಲದ ಬಣ್ಣದ ಬೊಂಬೆಗಳು ಕಾಣಯ್ಯ !

೫೦

ಉರಕ್ಕೆ ಜವ್ವನಗಳು ಬಾರದ ಮುನ್ನ
ಮನಕ್ಕೆ ನಾಚಿಕೆಗಳು ತೋಱದ ಮುನ್ನ
ನಮ್ಮವರಂದೆ ಮದುವೆಯ ಮಾಡಿದರು
ಸಿರಿಶೈಲ ಚೆನ್ನಮಲ್ಲಿಕಾರ್ಜುಂಗೆ
ಹೆಂಗೂಸೆಂಬ ಭಾವ ತೋಱದ ಮುನ್ನ
ನಮ್ಮವರಂದೆ ಮದುವೆಯ ಮಾಡಿದರು

೫೧

ಪಚ್ಚೆಯ ನೆಲೆಗಟ್ಟು ಕನಕದ ತೋರಣ,
ವಜ್ರದ ಕಂಬ ಪವಳದ ಚಪ್ಪರವನಿಕ್ಕಿ,
ಮುತ್ತು ಮಾಣಿಕದ ಮೇಲುಕಟ್ಟ ಕಟ್ಟಿ
ಮದುವೆಯ ಮಾಡಿದರೆನ್ನ ಮದುವೆಯ ಮಾಡಿದನು
ಕಂಕಣ ಕೈಧಾರೆ ಸ್ಥಿರಸೇಸೆಯನಿಕ್ಕಿ
ಚೆನ್ನಮಲ್ಲಿಕಾರ್ಜುನನೆಂಬ ಗಂಡನಿಗೆನ್ನ ಮದುವೆಯ ಮಾಡಿದರು

೫೨

ಜಲದ ಮಂಟಪದ ಮೇಲೆ ಉರಿಯ ಚಪ್ಪರವಿಕ್ಕಿ,
ಆಲಿಕಲ್ಲ ಹಸೆಯ ಹಾಸಿ, ಬಾಸಿಗದ ಕಟ್ಟಿ,
ಕಾಲಿಲ್ಲದ ಹೆಂಡತಿಗೆ ತಲೆಯಿಲ್ಲದ ಗಂಡ ಬಂದು ಮದುವೆಯಾದನು.
ಎಂದೆಂದಿಗೂ ಬಿಡದ ಬಾಳುವೆಗೆ ಕೊಟ್ಟರೆನ್ನ
ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ
ಮದುವೆಯ ಮಾಡಿದರೆಲೆಯವ್ವೆಗಳಿರಾ.

೫೩

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ
ಎಡೆಹಿಲ್ಲದ ತೆಱಹಿಲ್ಲದ ಕುಱುಹಿಲ್ಲದ ಚೆಲುವಂಗೆ
ಒಲಿದೆನೆಲೆಯನವ್ವಗಳಿರಾ ಕೇಳಿರೆ,

ಭಯವಿಲ್ಲದ ಭವವಿಲ್ಲದ ಚೆಲುವಂಗೊಲಿದೆ ನಾನು
ಸೀಮೆಯಿಲ್ದ ನಿಸ್ಸೀಮಂಗೆ ಒಲದೆ ನಾನು
ಚೆನ್ನಮಲ್ಲಿಕಾರ್ಜುನ ೧ಗಂಡಂಗೆ೧ ಮಿಗೆ ಮಿಗೆ ಒಲಿದೆ ಎಲೆ ಅವ್ವಗಳಿರಾ

---

೧ ಗಂಡನೆನಗೆ ೧

೫೪

ಗಿರಿಯಲಲ್ಲದೆ ಹುಲುಮೊರಡಿಯೊಳಾಡುವುದೆ ನವಿಲು ?
ಕೊಳನಲ್ಲದೆ 'ಕಿಱು'ವಳ್ಳಕ್ಕೆಳಸುವುದೆ ಹಂಸೆ ?
ಮಾಮರ ೨ತಳತಲ್ಲದೆ ಸರಗೈವುದೆ ಕೋಗಿಲೆ೨ ?
ಪರಿಮಳವಿಲ್ಲದ ಪುಷ್ಪಕ್ಕಳಸುವುದೆ ಭ್ರಮರ ?
ಎನ್ನ ದೇವ ಚೆನ್ನಮಲ್ಲಿಕಾರ್ಜುನನಲ್ಲದ ಪರಪುರುಷರು
ಎನ್ನ ಮನಸ್ಸಿಂಗೆ ಸೊಗಸುವರೆ ಕೆಳದಿ ?

೫೫

ಎರದ ಮುಳ್ಳಿನಂತೆ ಪರಗಂಡರೆನಗವ್ವ
ಸೋಂಕಲಮ್ಮೆ ಸುಳಿಯಲಮ್ಮೆ ನೋಡಲಮ್ಮೆ ನುಡಿಸಲಮ್ಮೆ
ಮಾತನಾಡಿಸಲಮ್ಮೆ ನೋಡವ್ವ
ಚೆನ್ನಮಲ್ಲಿಕಾರ್ಜುನನಲ್ಲದ ಗಂಡರೆನಗೆ
ಉರದಲ್ಲಿ ಮುಳ್ಳುಂಟೆಂದು ಅನಪ್ಪಲಮ್ಮೆನವ್ವಾ.

೫೬

೩ಎನ್ನ೩ ಮನವ ಮಾಱಿಗೊಂಡಳನವ್ವಾಳ
೩ಎನ್ನ೩ ತನುವ ಸೂಱೆಱೆಗೊಂಡನವ್ವಾ
೩ಎನ್ನ೩ ಸುಖವನೊಪ್ಪುಗೊಂಡನವ್ವಾ
೩ಎನ್ನ೩ ಎನ್ನಿರವನಿಂಬುಗೊಂಡನವ್ವಾ
ಚೆನ್ನಮಲ್ಲಿಕಾರ್ಜುನನ ಒಲುಮೆಯವಳಾನು
ಇನ್ನೆನ್ನ ನುಡಿಸಿ ನೋಯಿಸಿದಡೆ ಕೆಡುವಿರಿ ನೀವೆಲ್ಲರು.

೫೭

ಅನು ನೊಂದೆನಯ್ಯ ಆನು ಬೆಂದೆನಯ್ಯ
ಆನು ಬೆಂದ ಬೇಗೆಯನಱಿಯದೆ ಕೆಟ್ಟೆನಯ್ಯ
ಆನು ಕೆಟ್ಟ ಕೇಡನೇನೆಂದು ಹವಣಿಸುವೆನಯ್ಯ?
ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮ ಶರಣರ ನೋವ ಕಂಡು
ಆನು ಬೆಂದನಯ್ಯಾ

---

೧ ಕುಳಿ೧ ; ೨ ದ ಕೋಗಿಲೆಗೆ ಗಿಡು ತಳಿತಡೆ ಫಲವೇನೋ೨ ; ೩ x ೩ ೪ ನೆನ್ನ ೪, ೫ ಋ ೫

೫೮

ಎನ್ನನಿಱಿದಡೆ ಸೈರಿಸುವೆ ಎನ್ನ ಕೊಱಿದಡೆ ಸೈರಿಸುವೆ
ಎನ್ನ ಕಡಿದು ಹರಹಿದಡೆ ಮನಕ್ಕೆ ತಾರೆನು
ಚೆನ್ನಮಲ್ಲಿಕಾರ್ಜುನಯ್ಯಾ
ನಿಮ್ಮ ಶರಣರನೊಡನೆನ್ನ ಕಣ್ಣ ಮುಂದೆ ಕಂಡಡೆ
ಮೊಗೆದುಂಡಮೃತದಂತೆ ಆದೆನಯ್ಯಾ

೫೯

ನಿನ್ನಱಿಕೆಯ ನರಕವೆ ಮೋಕ್ಷ ನೋಡಯ್ಯ
ನಿನ್ನಱಿಯದ ಮುಕ್ತಿ ನರಕ ಕಂಡಯ್ಯ
ನೀನೊಲ್ಲದ ಸುಖವೆ ದುಃಖ ಕಂಡಯ್ಯ
ನೀನೊಲಿದ ದುಃಖವೆ ಪರಮಸುಖ ಕಂಡಯ್ಯ
ಚೆನ್ನಮಲ್ಲಿಕಾರ್ಜುನಯ್ಯಾ
ನೀ ಕಟ್ಟಿ ಕೆಡಹಿದ ಬಂಧನವೆನಗೆ ನಿರ್ಬಂಧನವೆಂದಿಪ್ಪೆನಯ್ಯಾ

೬೦

ಮುನ್ನ ಮಾಡಿತ್ತನಾರು ಕಳೆಯಬಾರದು
ಅದು ಬೆನ್ನ ಹಿಂದೆ ಬರುತ್ತಿಪ್ಪುದು
ಅದನಿನ್ನು ಕಳೆದಹೆನೆಂದಡೆ ಎನ್ನಿಚ್ಚೆಯುಂಟೆ ಅಯ್ಯಾ
ಚೆನ್ನಮಲ್ಲಿಕಾರ್ಜುನನೆನಗೆ ಕಟ್ಟಿದ ಕಟ್ಟಳೆಯ
ನನ್ನಿಂದ ನಾನೆ ಅನುಭವಿಸಿ ಕಳೆವೆನು.

೬೧

ನೀನಿಕ್ಕಿದ ಸರಿದೊಡಕನಾರು ಬಿಡಿಸಬಲ್ಲರಯ್ಯ ?
ನೀನಿಕ್ಕಿದ ಕಟ್ಟನಾರು ಕಳೆಯಬಲ್ಲರಯ್ಯ ?
ನೀ ಸೀಳಿದ ರೇಖೆಯನಾರು ಮೀಱಬಹುದಯ್ಯ ?
ಚೆನ್ನಮಲ್ಲಿಕಾರ್ಜುನಯ್ಯಾ
ನೀನು ಕಳುಹಿದ ಸೆಱೆಗೆ ಮಾರೂ ಹೋಗದಿರ್ದಡೆ ಎನ್ನಿಚ್ಚೆಯ ಅಯ್ಯಾ?

೬೨

ಕಾಯದ ನುಂಪನೊಬ್ಬ ಕಂಡು ಬಯಸಿದನು
ಅವಂಗೆ ಮಾಂಸದ ಬೆಲೆಮಾಡಿ ಕೊಡುವೆನು
ಎನ್ನ ಪ್ರಾಣದೊಡೆಯಂಗೆ ಎನ್ನ ಹೃದಯದ ಸೂಱೆಗುಡುವೆನು.
ಚೆನ್ನಮಲ್ಲಿಕಾರ್ಜುನದೇವಯ್ಯನು ಮುನಿದು
ಭವಿಗೆ ಮಾಱಿದಡೆ ಹೊಲಬುಗೆಡದಿರಾ ಮನವೇ.

೬೩

ಗುರುಪಾದತೀರ್ಥವೆ ಮಂಗಳ ಮಜ್ಜನವೆನಗೆ
ವಿಭೂತಿಯೆ ಒಳಗುಮದದರಿಸಿನವೆನಗೆ
ದಿಗಂಬರವೆ ದಿವ್ಯಾಂಬರವೆನಗೆ
ಶಿವನ ಪಾದರೇಣುವೆ ಅನುಲೇಪನವೆನಗೆ
ರುದ್ರಾಕ್ಷಿಯೆ ಮೈದೊಡಿಗೆ ಎನಗೆ
ಶರಣರ ಪಾದವೆ ಶಿರದಲ್ಲಿ ತೊಂಡಿಲು ಬಾಸಿಗವೆನಗೆ
ಚೆನ್ನಮಲ್ಲಿಕಾರ್ಜುನನ ಮದವಳಿಗೆಗೆ
ಬೇಱೆ ಶೃಂಗಾರವೇಕೆ ಹೇಳಿರವ್ವಾ !

೬೪

ಬಱೆ ಬೇನೆಯನಱಿಗಿವಳೆ? ಬಲದಾಯಿ ಮುದ್ದ ಬಲ್ಲಳೆ?
ನೊಂದ ನೋವ ನೊಂದವರೆ ಬಲ್ಲರಲ್ಲದೆ ನೋಯದವರೆತ್ತ ಬಲ್ಲರು ?
ಚೆನ್ನಮಲ್ಲಿಕಾರ್ಜುನನಿಱಿದಲಗು, ಒಡಲಲಿ ಮುಱಿದು,
ಹೊರಲು ೨ವೆನ್ನಳಲನು೨ ನೀವೆತ್ತ ಬಲ್ಲಿಕಿರೆ೩ ಎಲೆ ತಾಯಿಗಳಿರಾ.

೬೫

ನನುತಾಪದೊಡಲಿಂದೆ ಬಂದ ನೋವನುಂಬವರು
ಒಡಲೋ ಪ್ರಾಣವೋ ಆರು ಹೇಳಾ?
ಎನ್ನೊಡಲಿಂಗೆ ನೀನು ಪ್ರಾಣವಾದ ಬಳಿಕ
ಎನ್ನ ಒಡಲ ಸುಖ ದುಃಖವಾರ ತಾಗುವುದು ಹೇಳಯ್ಯ?
ಚೆನ್ನಮಲ್ಲಿಕಾರ್ಜುನಯ್ಯ
ಎನ್ನ ನೊಂದ ನೋವು ಬೆಂದ ಬೇಗೆ ನಿಮ್ಮ ತಾಗದೆ ಹೋಹುದೇನಯ್ಯಾ ?

---

೧ ಯಳು ೧, ೨ ವನೋವ ೨, ೩ ೦ ೩.

೬೬

ಹಸೆ ಹಂದರವನಿಕ್ಕಿ ತೊಂಡಿಲ ಬಾಸಿಗವ ಕಟ್ಟಿ
ಮದುವೆಯಾದೆನಲ್ಲಾ ನಾನು ! ಮೆಚ್ಚಿ ಮದುವೆಯಾದೆನಲ್ಲಾ ನಾನು
ಗಂಡನೆ, ನಿನಗೋತು ಕೈವಿಡಿದವಳನು, ಮತ್ತೊಬ್ಬರು ಕೈವಿಡಿದರೆ
ನಿನ್ನಭಿಮಾನವ ಪರರೆಳೆದೊಯಿದಂತೆ ಕಾಣಾ ಚೆನ್ನಮಲ್ಲಿಕಾರ್ಜುನಾ

೬೭

ಗಂಡ ನೀನು ಹೆಂಡತಿಯಾನು ಮತ್ತೊಬ್ಬರಿಲ್ಲಯ್ಯ
ನಿನ್ನ ಬೆಂಬಳಿಯಲಾನು ಮೆಚ್ಚಿ ಬಂದೆ
ಕಂಡ ಕಂಡವರೆಲ್ಲ ಬಲುಹಿಂದ ಕೈ ಹಿಡಿದರೆ
ಗಂಡಾ, ನಿನಗೆ ಸೈರಣೆಯೆಂತಾಯಿತ್ತು ಹೇಳಾ ಚೆನ್ನಮಲ್ಲಿಕಾರ್ಜುನಾ

೬೮

ವೃಷಭನ ಹಿಂದೆ ಪಶುವಾನು ಬಂದೆನು
ನಂಬಿ ನಚ್ಚಿ ಪಶುವಾನು ಬಂದೆನು
ಸಾಕಿ ಸಲಹಿಹನೆಂದು ಸಲೆ ನಚ್ಚಿ ಬಂದೆನು
ಒಲಿದಹ ಒಲಿದಹನೆಂದು ಬಳಿಯಲ್ಲಿ ಬಂದೆನು
ಚೆನ್ನಮಲ್ಲಿಕಾರ್ಜುನಯ್ಯಾ
ನಿಮ್ಮ ನಂಬಿ ಬಂದ ಹೆಂಗೂಸ ಹಿಂದೊಬ್ಬರೆಳದೊಯಿದರೆ
ಎಂತು ಸ್ಮರಿಸಿದೆ ಹೇಳಾ ಎನ್ನ ದೇವರ ದೇವಾ?

೬೯

ಆಲಿಸೆನ್ನ ಬಿನ್ನಪವ ಪಾಲಿಸೆನ್ನ ಬಿನ್ನಪವ
ಕೇಳೆನ್ನ ಮೊಱೆಯ ನೋಡೆನ್ನ ದುಃಖವ
ಚೆನ್ನಮಲ್ಲಿಕಾರ್ಜುನಯ್ಯಾ
ನಿಮಗೆತ್ತಿದ ಕೈಯ್ಯ ಅನ್ಯರು ಹಿಡಿದರೆ
ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆ ಕಂಡಯ್ಯಾ !

೭೦

ನೋಡೆನೆಂಬವರ ನೋಡಿಸುವೆ ನುಡಿಯೆನೆಂಬವರ ನುಡಿಯಿಸುವೆ
ಒಲ್ಲೆನೆಂಬವರ ಒಲಿಸುವೆ ಒಲಿದೆನೆಂಬವರ ತೊಲಗಿಸುವೆ ನೋಡಯ್ಯಾ
ಚೆನ್ನಮಲ್ಲಿಕಾರ್ಜುನಯ್ಯ
ನೀನಲ್ಲದನ್ಯರ ಮುಖವ ನೋಡೆನೆಂದಡೆ
ನೋಡುಂತೆ ಮಾಡಿದೆಯಲ್ಲಾ ಲಿಂಗವೆ !

೭೧

ಎನ್ನ ಮೀಸಲ ಬೀಸರ ಮಾಡಿದೆಯಲ್ಲಯ್ಯ
ಎನ್ನ ಮೀಸಲ ಬೀಸಾಡಿ ಕಳೆದೆಯಲ್ಲಯ್ಯ
ಎನ್ನ ಭಾಷೆಯ ಪೈಸರ ಮಾಡಿದೆಯಲ್ಲಯ್ಯ
ಎನ್ನ ಭಾಷೆಗೆ ದೋಷವ ತೋಱಿಸಿದೆಯಲ್ಲಯ್ಯ
ಎನ್ನ ಮೀಸಲ ಕಾಯವ ನಿಮಗೆಂದಿರಿಸಿ ಕೊಂಡಿದ್ದಡೆ
ಬೀಸಾಡಿ ಕಳೆವರೆ ಹೇಳಾ ತಂದೆ?
ಏಸು ಕಾಲ ನಿಮಗೆ ನಾನು ಮಾಡಿದ ತಪ್ಪ
ಈ ಸಮಯದಲ್ಲಿ ಹೊಱಿಸಿ ಕೊಂದೆಯಲ್ಲ ಚೆನ್ನಮಲ್ಲಿಕಾರ್ಜುನಾ !

೭೨

ಎನ್ನ ತುಂಬಿದ ಜವ್ವನ ತುಳುಕುವೆ ಮೋಹನವ
ನಿನಗೆ ಇಂಬು ಮಾಡಿಕೊಂಡಿರ್ದೆನಲ್ಲಾ ಎಲೆಯಯ್ಯ?
ಎನ್ನ ಲಂಬಿಸುವ ಲಾವಣ್ಯದ ರೂಪು ರೇಖೆಗಳ
ನಿನ್ನ ಕಣ್ಣಿಂದೆ ಕೈವಿಡಿದಂತೆ ಮಾಡಿರ್ದೆನಲ್ಲಯ್ಯ
ನಿನ್ನ ಮುಂದಿಟ್ಟಿರಲನ್ಯರು ಕೊಂಡೊಯಿವಾಗಲೆಂತು ಸೈರಿಸಿದೆ ಹೇಳಾ
ಚೆನ್ನಮಲ್ಲಿಕಾರ್ಜುನಾ.

೭೩

ಊರಮುಂದೆ ಹಾಲತೋಱೆ ಇರಲು
ನೀರಡಸಿ ಬಂದೆನಲ್ಲಯ್ಯ ನಾನು.
ಬಱುದೊಱೆವೋದವಳನೆನ್ನಪ್ಪದಿರಯ್ಯ
ನೀನೋತಿರ್ದ ಕಾರಣ ಬಂದೆನಲ್ಲಯ್ಯ
ಹೆಱೆಗೆ ಕೂತವಳ ತೆಗೆದಪ್ಪುವನೆಗ್ಗ
ಈ ಸೂನೆಗಾಱಂಗೆ ಕುಱಿಯ ಮಾಱುವರೆ ?
ಮಾಱಿದರೆಮ್ಮವರೆನ್ನ ನಿನಗೆ !
ಎನ್ನತ್ತ ಮುಂದಾಗದಿರು ಎನ್ನ ಮೇಲೆ ಕಾಲನಿಡದಿರು
ಚೆನ್ನಮಲ್ಲಿಕಾರ್ಜುನಂಗೆ ಸಲೆ ಮಾಱುವೋದವಳಾನು.

೭೪

ವಿಷಯದ ಸುಖ ವಿಷವೆಂದಱಿಯದ ಮರುಳೆ
ವಿಷಯಕ್ಕೆ ಅಂಗವಿಸದಿರಾ
ವಿಷಯದಿಂದ ಕೆಡನೆ ರಾವಣನು?
ವಿಷಯದಿಂದ ಕೆಡನೆ ದೇವೇಂದ್ರನು?
ವಿಷಯದಿಂದಾರು ಕೆಡರು ಹೇಳಾ ಮರುಳೆ?
ವಿಷಯ ನಿರ್ವಿಷಯವಾಯಿತ್ತೆನಗೆ ನಿನ್ನಲ್ಲಿ.
ಚೆನ್ನಮಲ್ಲಿಕಾರ್ಜುನಂಗೆ ಒಲಿದವಳ
ನೀನಪ್ಪಹೆನೆಂದೊಡೆ ಒಣಗಿದ ಮರನನಪ್ಪುವಂತೆ ಕಾಣಾ ಮರಳೆ

೭೫

ಅಮೇಧ್ಯದ ಹಡಿಕೆಯ ಮೂತ್ರದ ಕುಡಿಕೆಯ
ಎಲುವಿನ ತಡಿಕೆಯ ಕೀವಿನ ಹಡಿತೆಯ ಸುಡಲೀ ದೆಹವ
ಬಿಡು, ಬಿಡು, ವಿಷಯದ ಸಂಗವ, ಒಡಲಿವಿಡಿದು ಕೆಡದಿರು
ಚೆನ್ನಮಲ್ಲಿಕಾರ್ಜುನನಱಿಯದ ಮರುಳೇ !

೭೬

ಎನ್ನ ಮನ ಪ್ರಾಣ ಭಾವ ನಿಮ್ಮಲ್ಲಿ ನಿಂದ ಬಳಿಕ
ಕಾಯದ ಸುಖವ ನಾನೇನೆಂದಱಿಯೆನು
ಆರು ಸೊಂಖಿದರೆಂದಱಿಯೆನು
ಚೆನ್ನಮಲ್ಲಿಕಾರ್ಜುನನ ಮನದೊಳಗೆ ಒಚ್ಚತವಾದ ಬಳಿಕ
ಹೋಱಿಗೇನಾಯಿತ್ತೆಂದಱಿಯೆನು.

೭೭

ಕಾಮವುಳ್ಳವರಿಗೆ ಕಾಯಸಂಗ ಮಚ್ಚು ನೋಡಾ
ಕಾಮವಿಲ್ಲದವರಿಗೆ ಲಿಂಗಸಂಗ ಮಚ್ಚು ನೊಡಾ
ಕಾಮವಿಕಾರಿ ಕಾಯದತ್ತ ಮುಂತಾದಡೆ ನಾ ನಿಮ್ಮತ್ತ ಮುಂತಾದೆ
ಚೆನ್ನಮಲ್ಲಿಕಾರ್ಜುನಯ್ಯಾ ಕಾಮವಿಕಾರಿಯ ಸಂಗವ ಹೊದ್ದಿದಡೆ ನಿಮ್ಮಾಣೆ !

೭೮

ಮಗನಗವೆನ್ನದು ತನುವೆನ್ನದು ಧನವೆನ್ನದೆನ್ನೆನಯ್ಯ
ಮನ ನಿಮ್ಮದು ತನು ನಿಮ್ಮದು ಧನ ನಿಮ್ಮದು ಎಂದಿಪ್ಪೆನಯ್ಯ
ಸತಿಯಾನು ಪತಿಯುಂಟು ಸುಖವುಂಟೆಂಬುದು
ಮನ, ಭಾವದಲ್ಲಿ ಅಱಿದೆನಾದಡೆ ನಿಮ್ಮಾಣೆಯಯ್ಯ
ನೀನಿರಿಸದ ಗೃಹದಲ್ಲಿ ನಿನ್ನಿಚ್ಛೆಯುಳ್ಳವನಾಗಿಪ್ಪೆನಲ್ಲದೆ
ಅನ್ಯವಱಿಯೆ ಕಾಣಾ ಚೆನ್ನಮಲ್ಲಿಕಾರ್ಜುನಾ.

೭೯

ನೀನು ಹೋಗೆಂದೆಡೆ ಹೋದೆನಯ್ಯ ನೀನು ಹುಟ್ಟೆಂದೆಡೆ ಹುಟ್ಟಿದೆನಯ್ಯ
ನೀನು ಬೆಳೆಯೆಂದ ಠಾವಿನಲ್ಲಿ ಬೆಳೆದೆನಯ್ಯ
ನೀನು ಹಿಡಿ ಎಂದವರ ಮನೆಯ ಹೊಕ್ಕೆನಯ್ಯ
ನೀನು ಮಾಡೆಂದ ಕೆಲಸವ ಮಾಡಿಕೊಂಡು
ನಿಮ್ಮ ಬೆಸಲಾದ ಮಗಳಾಗಿರ್ದೆ ಕಾಣಾ ಚೆನ್ನಮಲ್ಲಿಕಾರ್ಜುನಾ.

೮೦

ಗಡ ಮನೆಗೆ ಒಡೆಯನಲ್ಲ;
ಹೆಂಡತಿ ಮನೆಗೆ ಒಡತಿಯೆ? ಒಡತಿಯಲ್ಲ
ಗಂಡ ಹೆಂಡಿರ ಸಂಬಂಧವಿಲ್ಲಯ್ಯ ಗಂಡುಗಲಿಯೆ ?
ಚೆನ್ನಮಲ್ಲಿಕಾರ್ಜುನಾ
ನೀ ಮನೆಯೊಡೆಯನೆಂದು ನಾ ದುಡಿವೆ ತೊತ್ತುಗೆಲಸವನು.

---

೧ ನೆ ೧

೮೧

ಲಾಂಛನ ಸಹಿತ ಮನೆಗೆ ಬಂದಡೆ
ತತ್ಕಾಲವನಱಿತು ಪ್ರೇಮವ ಮಾಡದಿರ್ದಡೆ
ನೀನಿರಿಸಿದ ಮನೆಯ ತೊತ್ತಲ್ಲ.
ತತ್ಕಾಲ ಪ್ರೇಮವ ಮಾಡುವಂತೆ ಎನ್ನ ಮುದ್ದ ಸಲಿಸಯ್ಯ
ಅಲ್ಲದೊಡೆ ಒಯ್ಯಯ್ಯ ಗಿರಿಶೈಲ ಚೆನ್ನಮಲ್ಲಿಕಾರ್ಜುನಾ !

೮೨

ಊರ ಸೀರೆಗೆ ಅಸಗ ತಡಬಡಗೊಂಬಂತೆ
ಹೊನ್ನೆನ್ನದು ಮಣ್ಣೆನ್ನದು ಎಂದು ನೆನೆನೆನೆದು ಬಡವಾದೆ
ನಿಮ್ಮನರಿಯದ ಕಾರಣ ಕೆಮ್ಮನೆ ಕೆಟ್ಟೆನು ಚೆನ್ನಮಲ್ಲಿಕಾರ್ಜುನಾ !

೮೩

ಅಯ್ಯಾ ನಿಮ್ ಶರಣರ ಬರವಿಂಗೆ ಗುಡಿ ತೋರಣವ ಕಟ್ಟುವೆನು
ಅಯ್ಯಾ ನಿಮ್ಮ ಶರಣರ ಬರವೀಂಗೆ ಮುಡುಹಿನಲ್ಲಿ ಪಟ್ಟವ ಕಟ್ಟಿ
ಅಯ್ಯಾ ನಿಮ್ಮ ಶರಣರು ಎನ್ನ ಮನೆಗೆ ಬರೆ
ಅವರ ಪಾದ ೧[ವನೆ]೧ ನ್ನ ಹೃದಯದಲ್ಲಿ
ಬಗೆದಿಟ್ಟುಕೊಂಬೆ ಕಾಣಾ ಚೆನ್ನಮಲ್ಲಿಕಾರ್ಜುನಾ !

೮೪

ಜಂಗಮವೆನ್ನ ಪ್ರಾಣ ಜಂಗಮವೆನ್ನ ಜೀವ
ಜಂಗಮವೆನ್ನ ನಿಧಿ ನಿಧಾನ ಜಂಗಮವೆನ್ನ ಪುಣ್ಯದ ಫಲ
ಜಂಗಮದೆನ್ನ ಹರುಷದ ಮೇರೆ
ಚೆನ್ನಮಲ್ಲಿಕಾರ್ಜುನಾ ಜಂಗಮ ತಿಂಥಿಣಿಯೊಳಗೋಲಾಡುವೆನು !

೮೫

ಊಡಿದೊಡುಣ್ಣದು ನೀಡಿದೊಡರಿಯದು
ಕಾಡದು, ಬೇಡದು, ಒಲಿಯದು ನೋಡಾ

---

೧ ವೆ ೧.

ಊಡಿದರುಂಡು ನೀನಿದಡೊಲಿದು
ಬೇಡಿದ ವರವ ಕೊಡುವ ಜಂಗಮಲಿಂಗದ ಪಾದವಿಡಿದು
ಬದುಕಿದೆನು ಕಾಣಾ ಚೆನ್ನಮಲ್ಲಿಕಾರ್ಜುನಾ.

೮೬

ನಾನುಣ್ಣದ ಮುನ್ನ ಜಂಗಮಕ್ಕೆ ಅಮೃತಾನ್ನ ನೀಡುವೆ
ನಾನುಡದ ಮುನ್ನ ಜಂಗಮಕ್ಕೆ ದೇವಾಂಗನುಡಿಸುವೆ
ನಾನು ಪೂಸದ ಮುನ್ನ ಜಂಗಮಕ್ಕೆ ಸುಗಂಧವ ಪೂಸುವೆ
ನಾನು ಮುಡಿಯದ ಮುನ್ನ ಜಂಗಮಕ್ಕೆ
ಪರಿಪರಿಯ ಪುಷ್ಪವ ಮುಡಿಸುವೆ
ನಾನು ತೊಡದ ಮುನ್ನ ಜಂಗಮಕ್ಕೆ ತೊಡಿಗೆಯ ತೊಡಿಸುವೆ.
ನಾನಾವ ಭೋಗವ ಭೋಗಿಸುವಡೂ
ಜಂಗಮ ಮುನ್ನ ಭೋಗಿಸಿದಲ್ಲದೆ ನಾನು ಮುನ್ನವೆ ಭೋಗಿಸಿದೊಡೆ
ನಿಮ್ಮಾಣೆ ಕಾಣಾ ಚೆನ್ನಮಲ್ಲಿಕಾರ್ಜುನಾ.

೮೭

ಮಚ್ಚು ಅಚ್ಚುಕವಾಗಿ ಒಪ್ಪಿದ ಪರಿಯ ನೋಡಾ
ಎಚ್ಚಡೆ ಎಸುಗೆ ಗರಿದೋರಿದಂತಿರಬೇಕು
ಅಪ್ಪಿದೊಡೆ ಅಸ್ಥಿಗಳು ನುಗ ನು ೧[ರೆ]ಯಾಗ೧ಬೇಕು.
ಬೆಚ್ಚಡೆ ಬೆಸುಗೆ ಅರಿಯದಂತಿರಬೇಕು.
ಮಚ್ಚು ಒಪ್ಪಿತ್ತು ಚೆನ್ನಮಲ್ಲಿಕಾರ್ಜುನಾ ನಿಮ್ಮಲ್ಲಿ !

೮೮

ನಾನು ನಿನಗೊಲಿದೆನು ನೀನು ಎನಗೊಲಿದೆ
ನೀನೆನ್ನನಗಲಿದಿಪ್ಪೆ [ನಾ] ನಿನ್ನನಗಲದಿಪ್ಪೆ
ನಿನಗೆ ಎನಗೆ ಬೇಱೆ ಠಾವುಂಟೆ?
ನೀನು ಕರುಣಿ ಎಂಬುದನು ಬಲ್ಲೆನು
ನೀನಿಗಿರಿಸದ ಗತಿಯೊಳಿಪ್ಪವಳಾನು
ನೀನೆ ಬಲ್ಲೆ ಚೆನ್ನಮಲ್ಲಿಕಾರ್ಜುನಾ.

---

೧ ಗ್ಗಾಗ ೧

೮೯

ಚಂದನವ ಕಡಿದ ಕೊಱೆದು ತೇದಡೆ
೧ನೊಂದೆನೆಂದು ಕಂಪ ಬಿಟ್ಟಿತ್ತೆ೧
ತಂದು ಸುವರ್ಣವ ಕಡಿದೊರೆದಡೆ
ಬೆಂದು ಕಳಂಕ ಹಿಡಿದಿತ್ತೆ ?
ಸಂದು ಸಂದು ಕಡಿದ ಕಬ್ಬನು ತಂದು ಗಾಣದಲ್ಲಿಕ್ಕಿ ಅಱದಡೆ
ಬೆಂದು ಪಾಕಗುಡದೆ ಸಕ್ಕರೆಯಾಗಿ ನೊಂದೆನೆಂದು ಸಿಹಿಯ ಬಿಟ್ಟಿತ್ತೆ?
ಒಂದೊಂದು ವಿಷಯವ ತೋಱೆಸಿ ಎನ್ನ ಮುಂದುಗೆಡಿಸಿ
ತಱಕಟ ಕಾಡಿದಡೆ ಎನ್ನ ತಂದೆ ಚೆನ್ನಮಲ್ಲಿಕಾರ್ಜುನಾ
ಎನ್ನ ಕೊಂದಡೂ ನಿಮ್ಮ ಶರಣರಿಗೆ ಶರಣೆಂಬುದ ಮಾಣೆನು ೧

೯೦

ತನುವ ಬೇಡಿದಡೆ ತನುವ ಕೊಟ್ಟು ಶುದ್ಧವಪ್ಪೆ
ಮನವ ಬೇಡಿದಡೆ ಮನವ ಕೊಟ್ಟು ಶುದ್ಧವಪ್ಪೆ
ಧನವ ಬೇಡಿದಡೆ ಧನವ ಕೊಟ್ಟು ಶುದ್ಧವಪ್ಪೆ
ನೀನಾವುದ ಬೇಡಿದಡೂ ಓಸರಿ೨ಸದೆ೨
ಎನ್ನ ಕಲಿತನದ ಬಿನ್ನಪವ ಕಡೆತನಕ ನಡೆಸದಿರ್ದಡೆ
ತಲೆದಂಡ ಕಾಣಾ ಚೆನ್ನಮಲ್ಲಿಕಾರ್ಜುನಾ !

೯೧

ಅಂದೂ ನೀನೆ ಇಂದೂ ನೀನೆ ಎಂದು ನೀನೆ ಕೇಳಾ ತಂದೆ
ನಿನ್ನ ಬೆಂಬಳಿವಿಡಿದ ಹಳೆಮಗಳಾನಯ್ಯ
ಅಂದೂ ಇಂದೂ ಎಂದೂ ನಿನ್ನ ನಂಬಿದ ಒಲವಿನ ಶಿಶು ನಾನಯ್ಯ
ಒಂದಲ್ಲದೆ ಎಡಱಯೆನಯ್ಯ
ಎನ್ನ ತಂದೆ ಕೇಳಾ ಚೆನ್ನಮಲ್ಲಿಕಾರ್ಜುನಾ
ನಿಮ್ಮ ಎಂಜಲನುಂಬ ಹಳೆಯವಳಾನಯ್ಯ !

---

೧ x ೧ ೨ ಸಿದಡೆ ೨, ೩ ದ ೩
೯೨

ನಿಮ್ಮ ಒಕ್ಕುದ ಕೊಂಡು ಓಲಾಡುವೆ
ಮಿಕ್ಕುದ ಕೊಂಡು ಕುಣಿದಾಡುವೆ
ನಿಮ್ಮ ತೊತ್ತಿನ ತೊತ್ತಿನ ಕರುಣಪ್ರಸದವ ಕೊಂಡು
ನಿತ್ಯಳಾಗಿ ಬದುಕಿದೆನು ಕಾಣಾ ಚೆನ್ನಮಲ್ಲಿಕಾರ್ಜುನಾ !

೯೩

ಎನ್ನ ನಾಲಿಗೆ ಬಪ್ಪ ರುಚಿ ನಿಗರ್ಪಿತ
ಎನ್ನ ನಾಸಿಕಕ್ಕೆ ಬಪ್ಪ ಪರಿಮಳನಿಮಗರ್ಪಿತ
ಎನ್ನ ಕಾಯಕ್ಕೆ ಬಪ್ಪ ಸುಖ ನಿಮಗರ್ಪಿತ
ಚೆನ್ನಮಲ್ಲಿಕಾರ್ಜುನಯ್ಯಾ
ನಿಮಗರ್ಪಿಸದ ಮುನ್ನ ಮುಟ್ಟಲಮ್ಮೆಯನಯ್ಯ.

೯೪

ಲಿಂಗಕ್ಕೆ ರೂಪನರ್ಪಿಸುವೆ ಜಂಗಮಕ್ಕೆ ರುಚಿಯ ಸಲಿಸುವೆ
ಕಾಯಕ್ಕೆ ಶುದ್ಧಪ್ರಸಾದವ ಕೊಂಬೆ ಪ್ರಾಣಕ್ಕೆ ಸಿದ್ಧ ಪ್ರಸಾದವ ಕೊಂಬೆ
ನಿಮ್ಮ ಪ್ರಸಾದದಿಂದ ಧನ್ಯಳಾದೆನು ಕಾಣಾ ಚೆನ್ನಮಲ್ಲಿಕಾರ್ಜುನಾ.

೯೫

ಕಾಯ ಪ್ರಸಾದವೆನ್ನ ೧ಜೀವ೧ ಪ್ರಸಾದವೆನ್ನ
೨ಪ್ರಾಣ೩ ಪ್ರಸಾದವೆನ್ನ ಮನ ಪ್ರಸಾದವೆನ್ನ
ಧನ ಪ್ರಸಾದವೆನ್ನ ೩ ಭಾವ ಪ್ರಸಾದವೆನ್ನ
ಸಯದಾನ ಪ್ರಸಾದವೆನ್ನ೩ ಸಮಭೋಗ ಪ್ರಸಾದವೆನ್ನ
ಚೆನ್ನಮಲ್ಲಿಕಾರ್ಜುನಯ್ಯಾ
ನಿಮ್ಮ ಪ್ರಸಾದವ ಹಾಸಿ ಹೊದಿಸಿ ಕೊಂಡಿಪ್ಪೆನಯ್ಯಾ !

---

೧ ಪ್ರಾಣ ೧, ೨ ಜೀವ ೨,

೯೬

ಎಲ್ಲರ ಪ್ರಾಣವಂಗೈಯಲಿದೆ ಎನ್ನ ಪ್ರಾಣ ಜಂಗಮದಲ್ಲಿದೆ
ಎಲ್ಲರ ಆಯುಷ್ಯ ಶಿರದಲ್ಲಿ ಬರೆದಿದೆ.
ಎನ್ನ ಆಯುಷ್ಯ ನಿಮ್ಮಲ್ಲಿ ಸಂದಿದೆ
ಚೆನ್ನಮಲ್ಲಿಕಾರ್ಜುನಾ
ನಿಮ್ಮ ಶರಣರೆ ಎನ್ನ ಪ್ರಾಣಲಿಂಗವೆಂದು ಧರಿಸಿರ್ದೆನು.

೯೭

ಆತುರ ಧ್ಯಾನದಿಮದ ಧಾಔತಿಗೊಂಡೆ
ಜ್ಯೋತಿರ್ಲಿಂಗವ ಕಾಣಿಸಬಾರದು
ಮಾತಿನ ಮಾಲೆಗೆ ಸಿಲುಕುವನಲ್ಲ
ಧಾತುಗೆಡಿಸಿ ಮನವ ನೋಡಿ ಕಾಡುವನು
ಆತುಮನಂತರ ಪರವನಜೆದಡೆ ಆತನೆ ಶಿವಯೋಗಿ
ಆತನ ಪಾದಕ್ಕೆ ಶರಣೆಂಬೆ ಕಾಣಾ ಚೆನ್ನಮಲ್ಲಿಕಾರ್ಜುನಾ !

೯೯

ನಚ್ಚುಗೆ ಮನ ನಿಮ್ಮಲ್ಲಿ ಮಚ್ಚುಗೆ ಮನ ನಿಮ್ಮಲ್ಲಿ
ಸಲುಗುಗೆ ಮನ ನಿಮ್ಮಲ್ಲಿ ಸೋಲುಗೆ ಮನ ನಿಮ್ಮಲ್ಲಿ
ಅಳಲುಗೆ ಮನ ನಿಮ್ಮಲ್ಲಿ ಬಳಲುಗೆ ಮನ ನಿಮ್ಮಲ್ಲಿ
ಕರಗುಗೆ ಮನ ನಿಮ್ಮಲ್ಲಿ ಕೊಜಗುಗೆ ಮನ ನಿಮ್ಮಲ್ಲಿ
ಎನ್ನ ಪಂಚೇಂದ್ರಿಯ ಕಬ್ಬುನ ಉಂಡ ನೀರಿನಂತೆ
ನಿಮ್ಮಲ್ಲಿ ಬೆರಸುಗೆ ಚೆನ್ನಮಲ್ಲಿಕಾರ್ಜುನಾ !

೧೦೦

ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಆಜ್ಞೇಯವೆಂದು
ಹೇಳಿದರೇನು? ಕೇಳಿದರೇನು?
ಆದಿಯನಾದಿಯ ಸುದ್ಧಿಯ ಹೇಳಿದರೇನು? ಕೇಳಿದರೇನು
ತನ್ನಲ್ಲಿದ್ದುದನು ತಾನಱಿಯದನ್ನಕ್ಕರ ?
ಉನ್ಮನಿಯ ರಭಸದ ಮನಃ ಪವನದ ಮೇಲೆ
ಚೆನ್ನಮಲ್ಲಿಕಾರ್ಜುನನ ಭೇದಿಸದನ್ನಕ್ಕರ?

೧೦೧

ಅಯ್ಯಾ ತನ್ನ ತಾನರಷಿಯಬೇಕಲ್ಲದೆ
ತನ್ನಲ್ಲಿ ಅಱಿವು ಸ್ವಯವಾಗಿರಲು ಅನ್ಯರಲ್ಲಿ ಕೇಳಲುಂಟೆ?
ಚೆನ್ನಮಲ್ಲಿಕಾರ್ಜುನಾ, ನೀನಱಿವಾಗಿ
ಎನಗೆ ಮುಂದುದೋಱಿದ ಕಾರಣ ನಿಮ್ಮಿಂದ ನಿಮ್ಮನಱಿವೆನು.

೧೦೨

ಕಲ್ಲ ತಾಗಿದ ಮಿಟ್ಟೆ ಕೆಲಕ್ಕೆ ಸಾರುವಂತೆ ಆನು ಬಲ್ಲೆನೆಂಬ ನುಡಿ ಸಲ್ಲದು.
ಲಿಂಗದಲ್ಲಿ ಮಱೆದು ಮಚ್ಚದ ಮನ ಹೊಱಗೆ ಬೀಸರವೋಗದೆ?
ಉಱಿತಾಗಿದ ಕೋಲು ಗಱಿ ತೋಱದಂತೆ
ಮೊಱೆದು ಬೀಸುವ ಗಾಳಿ ಪರಿಮಳವನುಂಡಂತೆ
ಎನ್ನನಿರಿಸಯ್ಯಾ ಚೆನ್ನಮಲ್ಲಿಕಾರ್ಜುನಾ

೧೦೩

ಅಱಿದಿಹೆನೆಂದರೆ ಅಱಿಯಬಾರದು ನೋಡ,
ಘನಕ್ಕೆ ಘನ ಆನೆ ನೋಡಾ.
ಚೆನ್ನಮಲ್ಲಿಕಾರ್ಜುನನ ನಿರ್ಣಯವಿಲ್ಲದೆ ಸೋತೆನು.

೧೦೪
ಘನವ ಕಂಡೆ ಆನುವ ಕಂಡೆ ಆಯತ ಸ್ವಾಯತ ಸನ್ನಿಹಿತ ಸುಖವ ಕಂಡೆ
ಅಱಿದಱಿದು ಮಱಹ ಮಱೆದೆ
ಕಱುಹಿನ ಮೋಹದ ಮೋರೆಯನೀಡಾಡಿದೆ
ಚೆನ್ನಮಲ್ಲಿಕಾರ್ಜುನಾ ನಿನ್ನನಱಿದು ಸೀಮೆಗೆಟ್ಟೆನು !

೧೦೫

ತನು ನಿಮ್ಮ ರೂಪಾದ ಬಳಿಕ ಅರಿಗೆ ಮಾಡುವೆ ?
ಮನ ನಿಮ್ಮ ರೂಪಾದ ಬಳಿಕ ಆರ ನೆನೆವೆ?
ಪ್ರಾಣ ನಿಮ್ಮ ರೂಪಾದ ಬಳಿಕ ಅರ ನೆನೆವೆ ?
೧ಅಱಿವು ನಿಮ್ಮಲ್ಲಿ ಸ್ವಯವಾದ ಬಳಿಕ ಆರನಱಿವೆ?೧
ಚೆನ್ನಮಲ್ಲಿಕಾರ್ಜುನ೨ಯ್ಯಾ
ನಿಮ್ಮಿಂದ ನೀವೆಯಾದಿರಾಗಿ ನಿಮ್ಮನೆ ಅರಷಿವುತಿದೆನು೨.

೧೦೬

ಭಾವಿಸಿ ನೋಡಿದಡೆ ಅಂಗವಾಯಿತ್ತು
ಅಂಗಸಂಗ ಸಂಯೋಗದ ಮಱದು ಲಿಂಗಸೈವೆಱಗಾದೆ
ಲಿಂಗೈಕ್ಯಳಾಗಿ ನಿಮ್ಮನಗಲದೆ ಅಂಗರುಚಿಗಳ ಮಱೆದು
ಲಿಂಗರುಚಿಗಳಲ್ಲಿ ಸೈವೆಱಗಾದೆ; ಲಿಂಗಸೈವೆಱಗಾದ ಬಳಿಕ

ಚೆನ್ನಮಲ್ಲಿಕಾರ್ಜುನನ ಕೊಂದು ಸಾವ ಭಾಷೆ.

೧೦೭

ಅಂಗ ಲಿಂಗವ ಬೆರಸಿ ಅಂಗ ಲಿಂಗದೊಳಗಾಯಿತ್ತು
ಮನ ಲಿಂಗವ ಬೆರಸಿ ಮನೆ ಲಿಂಗದೊಳಗಾಯಿತ್ತು
ಭಾವ ಲಿಂಗವ ಬೆರಸಿ ಭಾವ ಲಿಂಗದೊಳಗಾಯಿತ್ತು
ಚೆನ್ನಮಲ್ಲಿಕಾರ್ಜುನಾ
ನಿಮ್ಮ ಒಲುಮೆ ಸಂದಳಿದು ಸ್ವಯಲಿಂಗವಾಯಿತ್ತು !

೧೦೮

ಕಾಯದೊಳಗೆ ಅಕಾಯವಾಯಿತ್ತು ೩ಜೀವದೊಳಗೆ ನಿರ್ಜೀವವಾಯಿತ್ತು೩
ಭಾವದೊಳಗೆ ನಿರ್ಭಾವವಾಯಿತ್ತು
ನೆನಹಿನೊಳಗೆ ಮನ ಘನವಾಯಿತ್ತು
ಎನ್ನ ತಲೆ ಮೊಲೆಯ ನೋಡಿ ಸಲಹಿದ ಕಾರಣ
ಚೆನ್ನಮಲ್ಲಿಕಾರ್ಜುನನ ಧರ್ಮದವಳಾನು.

---

೧ x೧, ೨ ನಾ = ನಿಮ್ಮಲ್ಲಿ= ಲೀಯ್ಯನಾಗಿ = ನಿಮ್ಮ ಮಱೆದೆನು ೨ ; ೩ x೩

೧೦೯

ಲಿಂಗವೆನ್ನೆ ಲಿಂಗೈಕ್ಯವೆನ್ನೆ ಸಂಗವೆನ್ನೆ ನಿಸ್ಸಂಗವೆನ್ನೆ
ಆಯಿತೆನ್ನೆ ಆಗದೆನ್ನೆ ನೀನೆನ್ನೆ ನಾನೆನ್ನೆ
ಚೆನ್ನಮಲ್ಲಿಕಾರ್ಜುನನಲ್ಲಿ ಲಿಂಗೈಕ್ಯವಾದ ಬಳಿಕವೇನೂ ಎನ್ನೆನು !

೧೧೦

ಭಕ್ತೆಯಾನಪ್ಪೆನಯ್ಯಾ ಕರ್ತೃ ಭೃತ್ಯತ್ವವನಱಿಯೆ.
ಮಾಹೇಶ್ವರಿಯಾನಪ್ಪೆನಯ್ಯ ವ್ರತ ನಿಯಮ ಛಲವನಱಿಯೆ
ಪ್ರಸಾದಿಯಾನಪ್ಪೆನಯ್ಯ ಅರ್ಪಿತಾನರ್ಪಿತ ಭೇದವ ಮುನ್ನವಱಿಯೆ.
ಪ್ರಾಣಿಂಗಿಯಾನಪ್ಪೆನಯ್ಯ ಅನುಭಾವದ ಘನವನಱಿಯೆ
ಶರಣೆಯಾನಪ್ಪೆನಯ್ಯ ಶರಣಸತಿ ಲಿಂಗಪತಿ ಎಂಬ ಭಾವವನಱಿಯೆ.
ಲಿಂಗೈಕ್ಯಳಾನಪ್ಪೆನಯ್ಯ ಬೆರಸಿ ಭೇದವನಱಿಯೆ.
ಚೆನ್ನಮಲ್ಲಿಕಾರ್ಜುನಯ್ಯಾ, ಷಡಸ್ಥಲದಲ್ಲಿನಃಸ್ಥಲವಾಗಿಪ್ಪೆನು.

೧೧೧

ಮಾಟಕೂಟದಲ್ಲಿ ಬಸವಣ್ಣನಿಲ್ಲ
ನೋಟಕೂಟದಲ್ಲಿ ಪ್ರಭುದೇವರಿಲ್ಲ
ಭಾವಕೂಟದಲ್ಲಿ ಅಜಗಣ್ಣನಿಲ್ಲ
'ಸ್ನೇಹಕೂಟದಲ್ಲಿ ಬಾಚಿರಾಜನಿಲ್ಲ'
ಇವರೆಲ್ಲರ ಕೂಟದಲ್ಲಿ ಚೆನ್ನಬಸವಣ್ಣನಿಲ್ಲ
ಎನಗಾವ ಕೂಟವೂ ಇಲ್ಲ ಕಾಣಾ ಚೆನ್ನಮಲ್ಲಿಕಾರ್ಜುನಾ

೧೧೨

ಲೋಕವ ಹಿಡಿದು ಲೋಕದ ಸಂಗದಲ್ಲಿಪ್ಪೆ
ಆಕಾರವಿಡಿದು ಸಾಕಾರ ಸಹಿತ ನಡವೆ
ಹೊಱಗೆ ಬಳಸಿ ಒಳಗೆ ಮಱದಿಪ್ಪೆ

ಬೆಂದ ನುಲಿಯಂತೆ ಹುರಿಗುಂದದಿಪ್ಪೆ
ಚೆನ್ನಮಲ್ಲಿಕಾರ್ಜುನಯ್ಯಾ ಹತ್ತರೊಳಗೆ ಹನ್ನೊಂದಾಗಿಪ್ಪೆ
ನೀರತಾವರೆಯಂತಿರ್ದೆನು.

---

೧ x ೧

೧೧೩

ಬಿಡುಬಿಡು ಸಂಗವ ಸುಡುಸುಡು ವಿಷಯವ
ಎನ್ನೊಡೆಯರು ಬಾಗಲಿಗೆ ಬಂದರು ತಡೆಯದಿರಾ ಮರುಳೆ
ಹಡಿಕೆಯ ಸಂಸಾರದ ಸುಖವ ಕಡೆಯಲ್ಲಿ ಹೇಸಿ
ಇದಕ್ಕೆ ಹಿಡಿಯದಿರು ಸಜಗನು
ಚೆನ್ನಮಲ್ಲಿಕಾರ್ಜುನದೇವರು ಮನೆಗೆ ಬಂದಲ್ಲಿ
ಇದಿರೇಳದಿರ್ದಡೆ ನಾಯಕ ನರಕ !

೧೧೪

ಕಾಯ ವಿಕಾರಿಯೆ ಕಾಯಕ್ಕೆ ಮೆಚ್ಚಿದೆ
ವಾಯದ ಸುಖ ನಿನಗೆ ಮುಮದೆ ನರಕವೆಂದಜೆಯೆ
ದೇವರಸದೇವಂಗೆ ವಂದಿಸ ಹೋದಡೆ
ಬಾಯ ಬಿಡದಿರು ಕೈವಿಡಿದು ಸೆಳೆಯದಿರು
ಚೆನ್ನಮಲ್ಲಿಕಾರ್ಜುನನ ಪಾದಕ್ಕಜಗುವ ಭರವೆನಗೆ ಮರುಳೆ.

೧೧೫

ಎಮ್ಮೆಗೊಂದು ೧ಚಿಂತೆ೧ ಸಮ್ಮಗಾಜಗೊಂದು ಚಿಂತೆ
ಧರ್ಮಿಘೊಂ೨ದು ಚಿಂತೆ೨ ಕರ್ಮಿಗೊಂ೩ದು ಚಿಂತೆ೩
ಎನಗೆ ಎನ್ನ ಚಿಂತೆ ನಿನಗೆ ನಿನ್ನ ವಿಷಯದ ಚಿಂತೆ
ಬಿಡು ಬಿಡು ಸೆಜಗ ಹಿಡಿಯದಿರು ಮರುಳೆ
ಎನಗೆ ಎಮ್ಮ ಚೆನ್ನಮಲ್ಲಿಕಾರ್ಜುನದೇವ
ಒಲಿದಿಹನೋ ಒಲಿಯನೋ ಎಂದೆಂಬ ಚಿಂತೆ.

೧೧೬

ಮುನ್ನ ಮುನ್ನ ಮುನ್ನವೆ ಮನ ಗುರುವಿನೆಡೆಗೆಯಿದಿತ್ತು
ತನುವಿನಲ್ಲಿ ಡಿಂಬ ನೋಡಾ
ಮನ ಬೇಜಾದವರ ತನುವನಪ್ಪುವನೆಗ್ಗ ನೋಡಾ
ಚೆನ್ನಮಲ್ಲಿಕಾರ್ಜುನನ ನೋಡಿ ಕೂಡಿ ಬಂದಿಹೆನಂತಿರುವಂತಿರು.

---

೧ ಬುದ್ದಿ ೧, ೨ ಕ ೨, * ನಿ ; ೩ ದೇಣಿಕೆ ೨

೧೧೭

ಅಜಲುಗೊಂಡ ಕೆಜಿಗೆ ತೊಜೆಬಂದು ಹಾಯ್ವಂತಾಯಿತ್ತು ನೋಡಾ
ಬಜಲುಗೊಂಡ ಸಸಿಗೆ ಮಳೆ ಸುರಿಸಿದಂತಾಯಿತ್ತು ನೋಡಾ
ಇಂದೆನಗೆ ಇಹದ ಸುಖ ಪದದ ಗತಿಯೊಂದಾದಂತಾಯಿತ್ತೆನಗೆ ನೋಡಾ
ಚೆನ್ನಮಲ್ಲಿಕಾರ್ಜುನಾ ಗುರುಪಾದವ ಕಂಡು ಧನ್ಯಳಾದೆನು.

೧೧೮

ನಿತ್ಯವೆನ್ನ ಮನೆಗೆ ನಡೆದು ಬಂದಿತ್ತು ಇಂದು
ಮುಕ್ತಿಯೆನ್ನ ಮನೆಗೆ ನಡೆದು ಬಂದಿತ್ತು ಇಂದು
ಜಯ ಜಯ ಹರ ಹರ ಶಂಕರ ಶಂಕರ
ಗುರುವೆ ನಮೋ ಪರಮ ಗುರುವೆ ನಮೋ
ಚೆನ್ನಮಲ್ಲಿಕಾರ್ಜುನನ ತೋಱಿದ ಗುರುವೆ ನಮೋ ।ನಮೋ।

೧೧೯

ನರಜನ್ಮವ ತೊಡೆದು ಹರಜನ್ಮವ ಮಾಡಿದ ಗುರುವೆ
ಭವಬಂಧನವ ಬಿಡಿಸಿ ಪರಮ ಸುಖವ ತೋಱಿದ ಗುರುವೆ,
ಭವಿಯೆಂಬುದ ತೊಡೆದು ಭಕ್ತೆಯೆಂದೆನಿಸಿದ ಗುರುವೆ
ಚೆನ್ನಮಲ್ಲಿಕಾರ್ಜುನನ ತಂದು ಎನ್ನ ೨ಕೈ೨ವಕ್ಕೆ ಕೊಟ್ಟ ಗುರುವೆ ನಮೋ ನಮೋ

೧೨೦

ನಿತ್ಯವೆಂಬ ನಿಜಪದವೆನ್ನ ಹತ್ತೆಸಾರ್ದುದ ಕಂಡ ಬಳಿಕ
ಚಿತ್ತ ಕರಗಿ ೨ಮನೆ೩ ಕೊಱಗಿ ಹೃದಯವರಳಿತ್ತು ನೋಡಯ್ಯ
ಒತ್ತಿ ಬಿಗಿದ ೪ಸೆಱೆ೪ಯೊಳೆ ಅತ್ತಿತ್ತಲೆಂದಱಿಯದೆ
ಚೆನ್ನಮಲ್ಲಿಕಾರ್ಜುನನ ಪಾದದಲ್ಲಿ ಮಱದೊಱಗಿದೆನಯ್ಯಾ

೧೨೧

ಇಂದೆನ್ನ ಮನೆಗೆ ಒಡೆಯರು ಬಂದರೆ ತನುವೆಂಬ ಕಳಸದಲುದಕವ ತುಂಬಿ
ಕಂಗಳ ಸೋನೆಯೊಡನೆ ಪಾದಾರ್ಚನೆಯ ಮಾಡುವೆ

---

೧ x೧; ೨ x ೨ ; ೩ x ೩ ; ೪ ಸೀರೆ ೪.

ನಿನ್ನ ಶಾಂತಿಯೆಂಬ ಶೈತ್ಯದೊಡನೆ ಸುಗಂಧವ ಪೂಸುವೆ
ಅಕ್ಷಯ ಸಂಪದವೆಂದಱಿದು ಅಕ್ಷತೆಯನೇಱಿಸುವೆ
ಹೃದಯಕಮಲ ಪುಷ್ಪದೊಡನೆ ಪೂಜೆಯ ಮಾಡುವೆ
ಸದ್ಭಾವನೆಯೊಡನೆ ಧೂಪವ ಬೀಸುವೆ
ಶಿವಜ್ಞಾನ ಪ್ರಕಾಶದೊಡನೆ ಮಂಗಳಾರತಿಯನೆತ್ತುವೆ
ನಿತ್ಯ ತೃಪ್ತಿಯೊಡನೆ ನೈವೇದ್ಯವ ಕೈಕೊಳಿಸುವೆ.
ಪರಿಣಾಮದೊಡನೆ ಕರ್ಪೂರ ವೀಳೆಯವ ಕೊಡುವೆ.
ಪಂಚಬ್ರಹ್ಮದೊಡನೆ ಪಮುಚಮಾಹಾವಾದ್ಯಮಂ ಕೇಳಿಸುವೆ
ಹರುಷದೊಡನೆ ನೊಡುವೆ ಆನಂದದೊಡನೆ ಕುಣಿದಾಡುವೆ
ಪರವಶದೊಡನೆ ಹಾಡುವೆ ಭಕ್ತಿಯೊಡನೆ ಎಱಗುವೆ ನಿತ್ಯದೊಡನೆ ಕೂಡುವೆ
ಚೆನ್ನಮಲ್ಲಿಕಾರ್ಜುನಾ ನಿಮ್ ನಿಲವ ತೋಱಿದ
ಗುರುವಿನಡಿಯಲ್ಲಿ ಅರಗಾಗಿ ಕರಗುವೆ.

೧೨೨

ಅಯ್ಯಾ ನಿಮ್ಮ ೧ಶರಣ೧ರ ಕೂಡಿದ ಸುಖವನುಪಮೆಗೆ ತರಬಾರದಯ್ಯ
ಅಯ್ಯಾ ನಿಮ್ಮ ಮಹಂತರ ಕೂಡಿ ಅಗಲುವ ಥಾವತಿಯಿಂದ
ಸಾವು ಕರ ಲೇಸಯ್ಯ, ಚೆನ್ನಮಲ್ಲಿಕಾರ್ಜುನಯ್ಯಾ
ನಿಮ್ಮನಱುಹಿದ ಮಹಿಮರನಗಲಿ ೨ಅನು೨ ನಿಲಲಾಱನಯ್ಯ

೧೨೩

ಕಂಡಡೆ ಒಂದು ಸುಖ, ಮಾತನಾಡಿದಂತೆ ಅನಂತ ಸುಖ

ನಚ್ಚಿ ಮೆಚ್ಚಿದಡೆ ಕಡೆಯಿಲ್ಲದ ಹರುಷ
ಮಾಡಿದ ಸುಖವನಗಲಿದರೆ ಪ್ರಾಣದ ಹೋಕು ಕಂಡಯ್ಯ
ಚೆನ್ನಮಲ್ಲಿಕಾರ್ಜುನದೇವಯ್ಯಾ
ನಿಮ್ಮ ತೋಱಿದ ಶ್ರೀ ಗುರುವಿನ ಪಾದವ ನೀನೆಂ ೩[ದೇ]೩

೧೨೪

ಒಲುಮೆ ಒಚ್ಚತವಾದವರು ಕುಲ ಚಲವನಱಸುವರೆ?
ನೆಱೆ ಮರುಳುಗೊಂಡವರು ಲಜ್ಜೆ ನಾಚಿಕೆಯ ಬಲ್ಲರ?

——
೧ ಮ – ಹಂತ ೧; ೨ x ೨ ; ೩ ದು ೩

ಚೆನ್ನಮಲ್ಲಿಕಾರ್ಜುನಂಗೆ ಒಲಿದವರು
ಲೋಕದ ಅಭಿಮಾನವ ಬಲ್ಲರೆ ಮರುಳೆ?

೧೨೫

ಪುರುಷನ ಮುಂದೆ ಮಾಯೆ
ಸ್ತ್ರೀಯೆಂಬ ಅಭಿಮಾನವಾಗಿ ಕಾಡುವುದು
ಸ್ತ್ರೀ ಮುಂದೆ ಮಾಯೆ
ಪುರುಷ೧ನೆಂ೧ಬ ಅಭಿ೩ಮಾನವಾಗಿ ಕಾಡುವುದು
ಲೋಕವೆಂಬ ಮಾನವರಿಗೆ
ಶಿವಶರಣರ ಚರಿತ್ರ ಮರುಳಾಗಿ ತೋಱುವುದು
ಚೆನ್ನಮಲ್ಲಿಕಾರ್ಜುನನೊಲಿದ ಶರಣರಿಗೆ
ಮಾಯೆಯಿಲ್ಲ ಮಱಹಿಲ್ಲ ಅಭಿಮಾನವಿಲ್ಲ ಮರುಳೆ.

೧೨೬

ದೇಹ ಉಳ್ಳನ್ನಕ್ಕರ ಲಜ್ಜೆ ಬಿಡದು ಅಹಂಕಾರಬಿಡದು
ದೇಹದೊಳಗೆ ಮನ ಉಳ್ಳನ್ನಕ್ಕರ ಅಭಿಮಾನ ಬಿಡದು
ನೆನಹಿನ ವ್ಯಾಪ್ತಿಬಿಡದು
ದೇಹ ಮನವೆರಡೂ ಇದ್ದಲ್ಲಿ ಸಂಸಾರ ಬಿಡದು
ಸಂಸಾರವುಳ್ಳಲ್ಲಿ ಭವ ಬೆನ್ನ ಬಡಿದು.
ಭವದ ಕುಣಿಕೆಯುಳ್ಳನ್ನಕ್ಕರ ವಿಧಿ ವಶ ಬಿಡದು
ಚೆನ್ನಮಲ್ಲಿಕಾರ್ಜುನನೊಲಿದ ಶರಣರಿಗೆ
ದೇಹವಿಲ್ಲ ಮನವಿಲ್ಲ ಅಭಿಮಾನವಿಲ್ಲ ಕಾಣಾ ಮರುಳೆ.

೧೨೭

ನಾಳದ ಮಱೆಯ ನೂಲು ಸಡಿಲಲು
ನಾಚುವರು ನೋಡಾ ಗಂಡು ಹೆಣ್ಣೆಂಬ ಜಾತಿಗಳು
ಪ್ರಾಣದೊಡೆಯ ಜಗದೊಳಗೆ ಮುಳುಗುತ್ತ ತೆಱಹಿಲ್ಲದಿರಲು

——
* ಯೆಂಬ ಜಾತಿ ; ೧ ರೆಂ ೧

೧ದೇವರ೧ ಮುಂದೆ ನಾಚಲೆಡೆಯುಂಟೆ?
ಚೆನ್ನಮಲ್ಲಿಕಾರ್ಜುನ, ಜಗವೆಲ್ಲಾ ಕಣ್ಣಾಗಿ ನೋಡುತ್ತಿರಲು
ಮುಚ್ಚಿ ಮಱಸುವ ಠಾವಾವುದು ಹೇಳಯ್ಯ?

೧೨೮

ಆಡುವುದು ಹಾಡುವುದು ಹೇಳುವುದು ಕೇಳುವುದು ನಡೆ ನುಡಿ
ಸರಳ ಸಮ್ಮೇಳವಾಗಿಪುದು ಶರಣರೊಡನೆ
ಚೆನ್ನಮಲ್ಲಿಕಾರ್ಜುನ ಕೊಟ್ಟ ಆಯುಷ್ಯವುಳ್ಳನ್ನಕ್ಕರ
ಲಿಂಗಸುಖಿಗಳ ಸಂಗದಲ್ಲಿ ದಿನಗಳ ಕಳೆವುದು.

೧೨೯

ಆಯುಷ್ಯ ಹೋಗುತ್ತಿದೆ ಭಾಷೆ ತೊಲಗುತ್ತಿದೆ
ಕೊಡಿರ್ದ ಸತಿ ಸುತರು ತಮತಮಗೆ ಹರಿದು ಹೋಗುತ್ತೆ ಧಾರೆ
ಬೇಡ ಬೇಡ ದಿನ ಬಂಜೆಯಾಗಿ ಕೆಡಬೇಡ ಬಯಲೀಮಗೆ ಮನವೆ
ಚೆನ್ನಮಲ್ಲಿಕಾರ್ಜುನನ ಶರಣರ ಸಂಗದಲ್ಲಿ
ಹೊಣೆಹೊಕ್ಕು ಬದುಕು ಕಂದಾ ಮನವೆ !

೧೩೦

ಪಡೆದವುದರಿದು ನರಜನ್ಮವ ೨ಪಡೆವುಽ ದರಿದು ಹರಭಕ್ತಿಯ
೨ಪಡೆವು೨ದರಿದು ಗುರುಕಾರುಣ್ಯವ ೨ಪಡೆವುಽದರಿದು ಲಿಂಗಜಂಗಮ
೨ಪಡೆವು೨ ದರಿದು ಸತ್ಯಶರಣನುಭಾವವೆ
೨ಇಂತಾಗಿ೨ ಚೆನ್ನಮಲ್ಲಿಕಾರ್ಜುನನ ಕರುಣ ಕಡೆಗೋಡಿದವರಿವಂತೆ
ಶಿವಶರಣರ ಸಂಗದಲ್ಲಿ ನಲಿದಾಡು ಕೆಂಡಾ ಮನವೆ !

೧೩೧

ಆಜೆಯದವರೊಡನೆ ಸಂಗದ ಮಾಡಿದಡೆ
ಕಲ್ಲ ಹೊಸೆದು ಕಿಡಿಯ ತೆಗೆದುಕೊಂಡಂತಾಯಿತ್ತಯ್ಯ
ಬಿಲ್ಲವರೊಡನೆ ಸಂಗವ ಮಾಡಿದಡೆ

---

೧ x ೧, ೨ x ೨

ಮೊಸರ ಹೊಸೆದು ಬೆಣ್ಣೆಯ ತೆಗೆವಂತೆ ಕಾಣಾ !
ಅಯ್ಯಾ ಚೆನ್ನಮಲ್ಲಿಕಾರ್ಜುನಯ್ಯಾ ನಿಮ್ಮ ಶರಣರ ಸಂಗ
ಕರ್ಪೂರದ ಗಿರಿಯನುರಿಕೊಂಡಂತಾಯಿತ್ತಯ್ಯ !

೧೩೨

ಮರ ಮರ ಮಥನಿಸಿ ಕಿಚ್ಚು ಹುಟ್ಟಿ
ಸುತ್ತಣ ತುರಮರಾದಿಗಳ ಸುಡಲಾಯಿತ್ತು
ಆತ್ಮ ೧ಆತ್ಮ೧ ಮಥನಿಸಿ ಅನುಭಾವ ಹುಟ್ಟಿ
ಹೊದ್ದಿರ್ದ ತನುಗೂನಾದಿಗಳ ಸುಡಲಾಯಿತ್ತು
ನಿಮ್ಮ ಅನುಭವಿಗಳ ಅನುಭಾವದ ತೋಜೆ
ಎನ್ನ ಒಡಲನುಳುಹಿಕೊಳ್ಳಾ ಚೆನ್ನಮಲ್ಲಿಕಾರ್ಜು.

೧೩೩

ಅಯ್ಯಾ ನಿಮ್ಮ ಅನುಭಾವಿಗಳ ಸಂಗದಿಂದ
ಎನ್ನ ತನು ಶುದ್ಧವಾಯಿತ್ತಯ್ಯ
೨ ಅಯ್ಯಾ ನಿಮ್ಮ ಅನುಭಾವಿಗಳ ಸಂಗದಿಂದ೨
ಎನ್ನ ಮನ ಶುದ್ಧವಾಯಿತ್ತಯ್ಯ

೨ಅಯ್ಯಾ ನಿಮ್ಮ ಅನುಭಾವಿಗಳ ಸಂಗದಿಂದ೨
ಎನ್ನ ಪ್ರಾಣ ಶುದ್ಧವಾಯಿತ್ತಯ್ಯ
ಅಯ್ಯಾ ನಿಮ್ಮ ಅನುಭಾವಿಗಳು
ಎನ್ನನೊರೆದೊರೆದು ಕಡಿಕಡಿದು ಅರೆದರೆದು
ಅಗುಮಾಡಿದ ಕಾರಣ
ಚೆನ್ನಮಲ್ಲಿಕಾರ್ಜುನಾ ನಿಮಗಾನು ತೊಡಿಗೆಯಾದೆನು !

೧೩೪

ಸಂಗದಿಂದಲ್ಲದೆ ಅಗ್ನಿ ಹುಟ್ಟದು.
ಸಂಗದಿಂದಲ್ಲದೆ ಬೀಜ ಮೊಳೆ೩ದೋಱ೩ದು
೪ಸಂಗದಿಂದಲ್ಲದೆ ಹೂವಾಗದು೪

---

೧ x ೧, ೨ x ೨, ೩ x ೩, ೪ x ೪

ಆನು ನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ೨ಸೈಱಿಸಲಾಱೆನಯ್ಯಾ೨
೧ಅಯ್ಯಾ೧ ನೀನು ಮೆಚ್ಚಿದೆಡೆ ಮೆಚ್ಚು ಮೆಚ್ಚದಿರ್ದಡೆ ಮಾಣು
೧ಅನು೧ ನಿನ್ನನಪ್ಪಿದಲ್ಲದೆ ಸೈಱಿಸಲಾಱೆನಯ್ಯಾ
೧ಅಯ್ಯಾ೧ ನೀನು ಒಲಿದಡೆ ಒಲಿ ಒಲಿಯದಿರ್ದಡೆ ಮಾಣು
೧ಅನು೧ ನಿನ್ನು ಪೂಜಿಸಿದಲ್ಲದೆ ಸೈಱಿಸಲಾಱೆನಯ್ಯಾ
ಚೆನ್ನಮಲ್ಲಿಕಾರ್ಜುನಾ
೧ಅನು೧ ನಿಮ್ಮನರ್ಚಿಸಿ ಪೂಜಿಸಿ ಹರುಷದೊಳೋಲಾಡುವೆ.

೧೩೮

ಎಲೆ ಕಾಲಂಗೆ ಸೂಱೆಯಾದ ಕರ್ಮಿ
ಎಲೆ ಕಾಮಂಗೆ ಗುರಿಯಾದ ಮರುಳೆ ಬಿಡು ಬಿಡು ಕೈಯ
ನರಕವೆಂದಱಿಯದೆ ತಡೆವರೆ ಮನುಜಾ ?
ಚೆನ್ನಮಲ್ಲಿಕಾರ್ಜುನನ ಪೂಜೆಯ ವೇಳೆ ತಪ್ಪಿದರೆ
ನಾಯಕ ನರಕ ಕಾಣಾ ನಿನಗೆ

೧೩೯

ಒಂದರಳ ಶಿವಂಗೆಂದ ಫಲದಿಂದ
ಶಿವಪದಂಗಳಾದುದ ಕೇಳಯಱಿಯಾ
ಒಂದರಳನೇಱಿಸುವಲ್ಲಿ ಅಡ್ಡವಿಸಿದರೆ
ಗೊಂದಣದ ಕುಲಕೋಟಿಗೆ ನರಕ ಕಾಣಾ
ಇಂದು ಚೆನ್ನಮಲ್ಲಿಕಾರ್ಜುನನ ವೇಳೆ ತಡೆದಡೆ
ಮುಂದೆ ಬಹ ನರಕಕ್ಕೆ ಕಡೆಯಿಲ್ಲ ಮರುಳೆ !

೧೪೦

ಶಿವಂಗೆ ತಪ್ಪಿದ ಕಾಲ ಭಸ್ಮವಾದುದನಱಿಯಾ
ಶಿವಂಗೆ ತಪ್ಪಿದ ಕಾಮನುರಿದುದನಱಿಯಾ
ಶಿವಂಗೆ ತಪ್ಪಿದ ಬ್ರಹ್ಮನ ಸಿರ ಹೋದುದನಱಿಯಾ
ಚೆನ್ನಮಲ್ಲಿಕಾರ್ಜುನನ ಪಾದಕ್ಕೆ ತಪ್ಪಿದಡೆ
ಭವ ಘೋರ ನರಕವೆಂಱಿಯಾ ಮರುಳೆ !

---

೧ x ೧, ೨ ನಿಲ್ಲಲಾಱೆನು ೨

೧೪೧

ಶಿವಭಕ್ತರ ರೋಮನೊಂದಡೆ ಶಿವ ನೋವ ನೋಡ
ಶಿವಭಕ್ತರು ಪರಿಣಾಮಿಸಿದಡೆ ಒಡನೆ ಶಿವ ಪರಿಣಾಮಿಸುವ ನೋಡಾ
ಭಕ್ತದೇಹಿಕ ದೇವನೆಂದಜೆದು ಶ್ರುತಿಗಳು ಹೊಳಗುವ ಕಾರಣ
ಶಿವಭಕ್ತರ ಲೇಸು ಹೊಲ್ಲೆಹ ಶಿವನ ಮುಟ್ಟುವುದು ನೋಡ
ತಾಯಿ ನೊಂದಡೆ ಒಡಲ ಶಿಶು ನೋವಂತೆ
ಭಕ್ತರು ನೊಂದಡೆ ಚೆನ್ನಮಲ್ಲಿಕಾರ್ಜುನ ತಾ ನೋವಾ ನೋಡಾ !

೧೪೨

ಕೆಡದಿರೆ ಕೆಡಿದರೆ ಮೃಡನಡಿವಿಡಿಯಿರೋ
ದೃಢವಲ್ಲ ನೋಡಿರೆ ನಿಮ್ಮೊಡಲು
ದೃಢವಲ್ಲ ನೋಡಿರೆ ಸಂಸಾರಸೂಖವು
ಚೆನ್ನಮಲ್ಲಿಕಾರ್ಜುನ ಬರೆದ ಅಕ್ಷರವು ತೊಡೆಯದ ಮುನ್ನವೆ
ಬೇಗೆ ಬೇಗ ಶಿವಶರಣೆನ್ನಿ

೧೪೩

ಪಂಚೇಂದ್ರಿಯ ಗುಣಂಗಳೊಳಗೆ ಒಂದಕ್ಕೆ ಪ್ರಿತನಾದಡೆ ಸಲದೆ?
ಸಪ್ತವ್ಯಸನಂಗಳೊಳಗೆ ಒಮದಕ್ಕೆ ಪ್ರೀತನಾದಡೆ ಸಾಲದೆ?
ರತ್ನದ ಸಂಕಲೆಯಾದಡೇನು ಬಂಧನ ಬಿಡುವುದೇ
ಚೆನ್ನಮಲ್ಲಿಕಾರ್ಜುನಾ ?

೧೪೪

ಪೃಥ್ವಿ ಪೃಥ್ವಿಯ ಕೂಡದ ಮುನ್ನ
ಅಪ್ಪು ಅಪ್ಪುವ ಕೂದ ಮುನ್ನ
ತೇಜ ತೇಜವ ಕೂಡದ ಮುನ್ನ
ವಾಯು ವಾಯುವ ಕೂಡದ ಮುನ್ನ
ಆಕಾಶವಾಕಾಶವ ಕೂಡದ ಮುನ್ನ
ಪಂಚೇಂದ್ರಿಯಂಗಳೆಲ್ಲ ಹಂಚು ಹಜೀಯಾಗದ ಮುನ್ನ
ಚೆನ್ನಮಲ್ಲಿಕಾರ್ಜುನಂಗೆ ಶರಣೆನ್ನಿರೆ.
೧೪೫

ಸುಖವಿಲ್ಲ ಹಂದೆಗೆ ಎಂತು ಮಱುಗಿದಡೆಯು
ಕಲಿಗೆ ಭಯವಿಲ್ಲ ಎತ್ತೆತ್ತ ಹೋದಡೆಯು
ಈವಂಗವಗುಣವಿಲ್ಲ ಕಾಣಿರೇ ನಿಮ್ಮ ಮುಟ್ಟಿ
ಪರಧನ ಪರಸತಿ ಪರದೈವದ ತೊಜೆದವಂಗೆ
ಭಯವಿಲ್ಲ ಕಾಣಾ, ಚೆನ್ನಮಲ್ಲಿಕಾರ್ಜುನಾ

೧೪೬

ಕಡೆಗೆ ಮಾಡಿದ ಬಕ್ತಿ ದೃಢವಿಲ್ಲದಾಳುತನ
ಮೃಡನೊಲಿಯ ಹೇಳಿದಡೆ ಎಂತೊಲಿವನಯ್ಯ?
ಮಾಡಲಾಗದು ಅಳಿ ಮನವ,
ಅಳುಕಿದೊಡೆ ಮನದೊಡೆಯ ಬಲ್ಲನಯ್ಯ
ವಿರಳವಿಲ್ಲದ ಮಣಿಯ ಪವಣಿಸಿಹೆನೆಂದಡೆ
ಚೆನ್ನಮಲ್ಲಿಕಾರ್ಜುನನೊಪ್ಪನಯ್ಯ

೧೪೭

ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ
ಭಕ್ತಂಗೆ ಭವಿಸಂಗವತಿಘೋರ ನರಕ
ಶರಣಸತಿ ಲಿಂಗಪತಿಯಾದ ಬಳಿಕ
ಶರಣಂಗೆ ಸತಿಸಂಗವತಿ ಘೋರ ನರಕ
ಚೆನ್ನಮಲ್ಲಿಕಾರ್ಜುನಾ ಲಿಂಗೈಕ್ಯಂಗೆ
ಪ್ರಾಣಗುಣವಳಿಯದವರ ಸಂಗವೇ ಭಂಗ.

೧೪೮

ಉಣಲೆಂದು  ಬಂದ ಸುಖ ಉಂಡಲ್ಲದೆ ಹಱಿಯದು
ಕಾಣಲೆಂದು ಬಂದ ದುಃಖ ಕಂಡಲ್ಲದೆ ಹಱಿಯದು.
ತನುವಿಂಗೆ ಬಂದ ಕರ್ಮ ಹಱಿವ ಕಾಲಕ್ಕೆ
ಚೆನ್ನಮಲ್ಲಿಕಾರ್ಜುನದೇವರು ಕಡೆಗಣ್ಣಿನಲ್ಲಿ ನೋಡಿದರು.

೧೪೯

ಕಯ್ಯ ಸಂಕಲೆಯ ಕಳೆದೆಯಲ್ಲಾ
ಕಾಲ ಸಱುತ್ತಿದ ಪಾಶವ ಹಱಿದೆಯಲ್ಲಾ
ಸುತ್ತಿ ಮುತ್ತದಿ ಬಲೆಯ ಕುಣಿಕೆಯಿಂದ ಹೊಱವಡಿಸದೆಯಲ್ಲಾ
ಚೆನ್ನಮಲ್ಲಿಕಾರ್ಜುನಾ,
ನೀನು ಕೊಟ್ಟವಧಿ ತುಂಬುವ ಮುನ್ನ ಮುಟ್ಟುವೆ ನಿಮ್ಮನು

೧೫೦

ಮುಂಗೈಯಲ್ಲಿ ವೀರಕಂಕಣ೧ವಿಕ್ಕಿ೧
ಮುಂಗಾಲಲ್ಲಿ ತೊಡರು ಬಾವಲಿಯ ಕಟ್ಟಿದೆನು
ಗಂಡುಡಿಗೆಯನುಟ್ಟಿಹೆನೆಂಬ ಮಾತಿನ ಬಿರಿದ ನುಂಗಿದೆನು
ಚೆನ್ನಮಲ್ಲಿಕಾರ್ಜುನ ನಿಮ್ಮ ಆಣೆಗೆ ಊಣೆಯುವ ತಂದೆನಾದಡೆ
ನಿಮ್ಮ ತೊತ್ತಿನ ಮಗಳಲ್ಲಾ

೧೫೧

ಉರಿಯೊಡ್ಡಿದಡೆ ಸೀತಳವೆನಗೆ ಗಿರಿ ಮೇಲೆ ಬಿದ್ದರೆ ಪುಷ್ಪವೆನಗೆ
ಸಮುದ್ರ ಮೇಲುವಾಯಿದರೆ ಕಾಲುವೆಯೆನಗೆ
ಚೆನ್ನಮಲ್ಲಿಕಾರ್ಜುನಾ ನಿಮ್ಮಾಣೆಯೆಂಬುದು
ತಲೆಯೆತ್ತಿ ಬಾ ೨[ಗ]೨ ದ ಭಾರವೆನಗೆ

೧೫೨

ಆಳುತನದ ಮಾತನೇಱಿಸಿ ನುಡಿದಡೆ
ಆಗಳೆ ಕಟ್ಟಿದೆನು ಗಂಡುಡಿಗೆಯನು
ತಿಗುರನೇಱಿಸಿ ತಿಲಕವಿಟ್ಟು ಕೈದುವ ಕೊಂಡು ಕಳನೇರಷಿದ ಬಳಿಕ
ಕಟ್ಟಿದ ನಿಱಿ ಸಡಿಲಿದರೆ ಇನ್ನು ನಿಮ್ಮಾಣೆ ಕಾಣಾ
ಚೆನ್ನಮಲ್ಲಿಕಾರ್ಜುನಾ !

---

೧ x ೧, ೨ x ೨

೧೫೩

ಹಿಡಿಯದಿರು ತಡೆಯದಿರು ಬಿಡು ಬಿಡು ಕೈಯ ಸೆಱಗ
ಭಾಷೆಯ ಬರೆದು ಕೊಟ್ಟು ಸತ್ಯಕ್ಕೆ ತಪ್ಪಿದರೆ
ಅಘೋರ ನರಕವೆಂಬುದನಱಿಯಾ
ಚೆನ್ನಮಲ್ಲಿಕಾರ್ಜುನನ ಕೈವಿಡಿದ ಸತಿಯ ಮುಟ್ಟಿದರೆ
ಕೆಡುವೆ ಕಾಣಾ ಮರುಳೇ

೧೫೪

ವಟವೃಕ್ಷದೊಳಡಗಿದ ಸಮರಸ ಬೀಜ ಭಿನ್ನ ಭಾವಕ್ಕೆ ಬಪ್ಪುದೇ?
ಕಂಗಳ ನೋಟ, ಕಱೆವಿಟ್ಟ ಮನದ ಸೊಗಸು
ಅನಂಗನ ಧಾಳಿಯ ಗೆಲಿದವು ಕಾಣಾ
ಈ ಮರೀಚಿಕಾಜಲದೊಳಡಗಿದ ಪ್ರಾಣಿ
ವ್ಯಾಧನ ಬೆಲೆಗೆ ಸಿಲುಕುವುದೆ?
ನಿನ್ನ ಕೈವಶ ಸಿಕ್ಕಿಹಳೆಂಬುದ ಮಱೆಯಾ ಮರುಳೇ.
ಚೆನ್ನಮಲ್ಲಿಕಾರ್ಜುನನಲ್ಲದೆ ಪರಪುರುಷ ನಮಗಾಗದ ಮೋಱಿ ನೋಡಾ !

೧೫೫

ಮುತ್ತು ಒಡೆದಡೆ ಬೆಸೆಯಬಹುದೆ? ಮನ ಮುಱಿದಡೆ ಸಂತಕ್ಕೆ ತರಬಹುದೆ?
ಅಪ್ಪುಗೆ ಸಡಲಿದ ಸುಖವ ಮರಳಿ ಅಱಿಸಿದರುಂಟೆ?
ಸಾಧಕನೊಯಿದ ನಿಧಾನದ ಕುಳಿಯಂತೆ ಅಲ್ಲಿಯೇನುಂಟು
ಮೆಚ್ಚು ಪಲ್ಲಟವಾಗಿ ನೋಟದ ಸುಖವ ಹಿಂಗಿದರೊಳವೆ?
ನೋಡದಿರು ಕಾಡದಿರು ಮನಬಳಸದಿರು
ಭಾಷೆಗೆ ತಪ್ಪಿದರೆ ಮುಳ್ಳುಮೊನೆಯ ಕಿಚ್ಚಿನಂತೆ
ಲೇಸು ಬಿಸರವೋಗದ ಮುನ್ನ
ಚೆನ್ನಮಲ್ಲಿಕಾರ್ಜುನನ ಕೂಡಿ ಧಾತುಗೆಟ್ಟ ಬಳಿಕ ಒಳವೆ?

೧೫೬

ಹೊನ್ನು ಮುಱಿದಡೆ ಬೆಸಸಬಹುದಲ್ಲದೆ ಮುತ್ತು ಒಡೆದಡೆ ಬೆಸಸಬಹುದೆ?
ಮನ ಮುಱಿದಡೆ ಮನಕೊಬ್ಬರೊಡೆಯುರುಂಟೇ?
ಚೆನ್ನಮಲ್ಲಿಕಾರ್ಜುನ ಸಾಕ್ಷಿಯಾಗಿ ಬೇಟವುಳ್ಳಲ್ಲಿ ಬೆರಸೆ ಘನ

೧೫೭

ಕೆತ್ತಿದ ಚಕ್ಕೆ ಮರಳಿ ಹತ್ತುವುದೆ ಮುನ್ನಿನಂತೆ ?
ರಿಣ ತಪ್ಪಿದಲ್ಲಿ ಗುಣವನಱಸುವರೆ?
ಸಕ್ಕರೆ ಹಾಲು ತುಪ್ಪ ಎಂದರೆ ಕಪ್ಪು [ಕಂಡಲ್ಲಿ]ಮನವೆಳಸುವುದೇ
೧ಕರ್ತೃವೆ೧ ಚೆನ್ನಮಲ್ಲಿಕಾರ್ಜುನನಿಯ್ಯಾ
ಸತ್ತವರು ಮರಳಿ ತಕ್ಕೈ ೩ ಸಿ ಕೊಂಬರೆ?೩

೧೫೮

ಗೂಗೆ ಕಣ್ಣ ಕಾಣಲಱಿಯದೆ ರವಿಯ ಬೈವುದು
ಕಾಗೆ ಕಣ್ಣ ಕಾಣಲಱಿಯದೆ ಶಶಿಯ ಬೈವುದು
ಕುರುಡ ಕಣ್ಣ ಕಾಣಲಱಿಯದೆ ಕನ್ನಡಿಯ ಬೈವನು
ಇವರಷ ಮಾತೆಲ್ಲಾ ಸಹಜವಹವೇ?
ನರಕ ಸಂಸಾರದಲ್ಲಿ ಹೊದಕುಳಿಗೊಳುತ್ತ
ಶಿವನಿಲ್ಲ ಮುಕ್ತಿಯಿಲ್ಲ ಹುಸಿಯಿಂದಡೆ
ನರಕದಲ್ಲಿಕ್ಕದೆ ಬಿಡುವರೆ ಚೆನ್ನಮಲ್ಲಿಕಾರ್ಜುನ ದೇವರು

೧೫೯

ಎಲುವಿಲ್ಲದ ನಾಲಗೆ ಹೊದಕುಳಿಗೊಂಡಾಡುವುದು
ಎಲೆ ಕಾಲಂಗೆ ಗುಜೆಯಾ ಕರ್ಮಿ
ಉಲಿಯದಿರು ಉಲಿಯದಿರು ಭವಭಾರಿ ನೀನು
ಹಲವು ಕಾಲದ ಹುಲುಮನುಜಂಗೆ
ಹುಲುಮನುಜ ಹೆಂಡತಿ ! ಇವರಿದ್ದರೆ ಅದಕ್ಕದು ಸರಿ
ಚೆನ್ನಮಲ್ಲಿಕಾರ್ಜುನನಗೆ ಗಂಡನೆನಗೆ
ಲೋಕದೊಳಗೆ ಹೆಂಡಿರುಂಟಾದರೆ ಮಾಡಿಕೋ ಎನ್ನ ಬಿಡು ಮರುಳೇ

೧೬೦

ತನುವೆಮಬ ಸಾಗರ ತುಂಬಲು
ಮನವೆಮಬುದು ಹಜೆಗೋಲಾಯಿತ್ತು ಅಂಬಿಗಾ !
ಎನ ಗಮ್ಮನೆ ತೆಗೆಯೋ ಅಂಬಿಗಾ

---

೧ x ೧, ೨ ದೇವಜೆಯಬು ೨, + ಬಂದು; ೨ ಸುವರೆ ಮರೇಳೆ ೩

ತೊಜೆಯ ದಾಂಟಿಹೆನೆಂಬ ಭರವಸ ಕರಘನ.
ಗಮ್ಮನೆ ತೆಗೆಯೋ ಅಂಬಿಗಾ.
ಸಿರಿಶೈಲ ಚೆನ್ನಮಲ್ಲಿಕಾರ್ಜುನ ನಿನ್ನ ಕಾಣಲು ಬಂದಿಹೆ ಅಂಬಿಗಾ ನಾನೂ.

೧೬೧

ಮದನಾರಿ ಎಂಬ ಮಳೆ ಹೊಯ್ಯಲು ಶಿವಯೋಗವೆಂಬ ತೊರೀ ಬರಲು
ಕಾಮನೆ ಅಂಬಿಗನಾದ ನೋಡಾ ! ಕರ್ಮದ ಕಡಲೆನ್ನನೆಳದೊಯ್ವಾಗ
ಕಯ್ಯ ನೀಡು ತಂದೆ ಚೆನ್ನಮಲ್ಲಿಕಾರ್ಜುನಾ.

೧೬೨

ಕರ್ಮ ಸೆಜಿಗ ಹಿಡಿದವರೇಕೆ ಬಿಟ್ಟಪೆ ತಂದೆ?
ಕರ್ಮಘಾಯಇಮ್ಮೈಗೊಂಡು ನೊಂದೆ ನೋಡಯ್ಯ
ನಿಮ್ಮ ನಂಬಿದ ನೆಚ್ಚಿದ ಮಗಳ ಬೆಂಬಿಟ್ಟರೆ
ಎಂತು ಬದುಕುವೆನಯ್ಯ ಚೆನ್ನಮಲ್ಲಿಕಾರ್ಜುನಾ?

೧೬೩

ನಾಳದ ಮಜೆಯ ನಾಚಿಕೆ
ನೂಲ ಮಱೆಯಲ್ಲಿ ಅಡಗಿತ್ತೆಂದು ಅಂಜುವರು ಅಳುಕುವರು
ಮನಮೆಚ್ಚದಭಿಮಾನಕ್ಕೆ ಅವುದು ಮಱೆ ಹೇಳಾ?
ಕಾಯ ಮಣ್ಣೆಂದು ಕಳೆದ ಬಳಿಕ ದೇಹದಭಿಮಾನ ಅಲ್ಲಿಯೆ ಹೋಯಿತ್ತು
ಪ್ರಾಯ ಬಯಲೆಂದು ಕಳೆದ ಬಳಿಕ ಮನದ ಲಜ್ಜೆಯಲ್ಲಿಯೆ ಹೋಯಿತ್ತು
ಚೆನ್ನಮಲ್ಲಿಕಾರ್ಜುನನ ಕೂಡ ಲಜ್ಜೆಗೆಟ್ಟವಳ ಉಡಿಗೆಯ ಸೆಳೆದ ಕೊಂಡಡೆ
ಮುಚ್ಚಿದ ಸೀರೆ ಹೋದರೆ ಅಂಜುವರೆ ಮರುಳೇ?

೧೬೪

ಕಯ್ಯ ಧನವ ಕೊಂಡರೆ ಮೈಯ ಭಾಷೆಯ ಕೊಳಬಹುದೆ?
ಉಟ್ಟ ಉಡುಗೆಯ ಸೆಳೆದುಕೊಂಡರೆ
ಮುಚ್ಚಿ ಮುಸುಕಿದ ನಿರ್ವಾಣವ ಸೆಳೆಯಬಹುದೆ?

ನೋಡುವಿರಿ ಎಲೆ ಅಣ್ಣಗಳಿರಾ,
ಕುಲವಳಿದು ಛಲವಳಿದು ಭವಗೆಟ್ಟು ಭಕ್ತೆಯಾದವಳ
ಎನ್ನನೇಕೆ ನೋಡುವಿರಿ ಎಲೆ ತಂದೆಗಳಿರಾ
ಚೆನ್ನಮಲ್ಲಿಕಾರ್ಜುನನ ಕೂಡಿ ಕುಲವಳಿದು ಛಲವಳಿದವಳನು.

೧೬೫

ಕೈ ಸಿರಿಯ ದಂಡವ ಕೊಳ್ಳಬಹುದಲ್ಲದೆ
ಮೈ ಸಿರಿಯ ದಂಡವ ಕೊಳಲುಂಟೆ?
ಉಟ್ಟ ಉಡುಗೆಯ ಸೆಳೆದುಕೊಂಡರೆ
ಮುಚ್ಚಿದ ನಿರ್ವಾಣವ ಸೆಳೆಯಬಹುದೆ?
ಚೆನ್ನಮಲ್ಲಿಕಾರ್ಜುನನ ಬೆಳಗನುಟ್ಟು ಲಜ್ಜೆಗೆಟ್ಟವನು
ಉಡುಗೆಯ ಹಂಗ ಬಲ್ಲಳೆ ಮರುಳೆ?

೧೬೬

ಅಲ್ಲದವರೊಡನಾಡಿ ಎಲ್ಲಾ ಸಂಗವ ತೊಱೆದೆ ನಾನು
ನಾರಿ ಸಂಗವ ತೊರೆದೇ, ನೀರ ಹೊಳೆಯ ತೊಱೆದೆ ನಾನು
ಎನ್ನ ಮನದೊಡೆಯ ಚೆನ್ನಮಲ್ಲಿಕಾರ್ಜುನನ ಕೂಡುವ ಭರದಿಂದ
ಎಲ್ಲಾ ಸಂಗವ ತೊಱೆದೆ ನಾನು !

೧೬೭

ಮೊಲೆ ಬಿದ್ದು ಮುಡಿ ಸಡಿಲಿ,
ಗಲ್ಲ ಬತ್ತಿ ತೋಳು ಕಂದಿದವಳ
ಎನ್ನನೇಕೆ ನೋಡುವಿರಿ ಎಲೆ ಅಣ್ಣಗಳಿರಾ?
ಕುಲವಳಿದು ಛಲವಳಿದು ಭವಗೆಟ್ಟು ಭಕ್ತೆಯಾದವಳ
ಎನ್ನನೇಕೆ ನೋಡುವಿರಿ ಎಲೆ ತಂದೆಗಳಿರಾ?
ಚೆನ್ನಮಲ್ಲಿಕಾರ್ಜುನನ ಕೂಡಿ ಕುಲವಳಿದು ಛಲವಳಿದವಳನು

೧೬೮

ಹಸಿವು ತೃಷೆಯಾದಿಗಲು ಎನ್ನೊಳಗಾದ ಬಲಿಕ
ವಿಷಯ ವಿಕಾರವೆನ್ನಿರಿಸಿ ಹೋದವು ಕಾಣಾ ತಂದೆ
ಅದೇ ಕಾರಣ ನೀವು ಅಱಸಿಕೊಂಡು ಬಂದಿರಣ್ಣ
ನೀವು ಅಱಸುವ ಅಱಕೆ ಎನ್ನೊಳಗಾಯಿತ್ತು
ಎನ್ನ ದೇವ ಚೆನ್ನಮಲ್ಲಿಕಾರ್ಜುನ
ತನ್ನೊಳಗೆನ್ನನಿಂಬಿಟ್ಟುಕೊಂಡನಾಗಿ
ಇನ್ನು ನಿನ್ನ ತಂದೆತಾಯಿತನವನೊಲ್ಲೆ ನಾನು.

೧೬೯

ಎಳೆವರೆಯದಲ್ಲಿ ಮೋಹ ಮೊಳೆ ಹುಟ್ಟಿತ್ತು
ಗುರುಹಸ್ತದಲ್ಲಿ ಅಂಕುರವಾಯಿತ್ತು
ಏಳೆಲೆ ಹೋಯಿತ್ತು ಬಳದ ನಡುವೆ
ಕೇಳೆಲೆಯವ್ವಾ ನೀನು ಕೇಳು ತಾಯೆ
ಒಯಿತ್ತಲೆ ಎಂದಿಗೆ ಪರಿಪೂರ್ಣವಾಯಿತು ನೋಡವ್ವಾ
ಚೆನ್ನಮಲ್ಲಿಕಾರ್ಜುನನಗೆ ಗಂಡನೆನಗೆ
ಲೋಕದವರ ಸಂಬಂಧವಿಲ್ಲೆಂದು ಬಿಟ್ಟು ತೊಲಗಿದೆನು ಕಾಣಾ ಎಲೆ ಅವ್ವಾ !

೧೭೦

ಎಲೆ ತಾಯೆ ನೀನಂತಿರು ಎಲೆ ತಂದೆ ನೀನಂತಿರು
ಎಲೆ ಬಂಧುವೆ ನೀನಂತಿರು ಎಲೆ ಕುಲವೆ ನೀನಂತಿರು
ಎಲೆ ಬಲವೆ ನೀನಂತಿರು
ಚೆನ್ನಮಲ್ಲಿಕಾರ್ಜುನನ ಕೂಡುವ ಭರದಿಂದ ಹೋಗುತ್ತಿದ್ದೇನೆ;
ನಿಮಗೆ ಶರಣಾರ್ಥಿ ಶರಣಾರ್ಥಿ

೧೭೧

ಹಸಿವೆ ನೀನಂತಿರು ಬರಬೇಡ, ವಿಷಯವೆ ನೀನಂತಿರು ಬರಬೇಡ
ಕಾಮವೆ ನೀನಂತಿರು ಬರಬೇಡ, ಕ್ರೋಧವೆ ನೀನಂತಿರು ಬರಬೇಡ,
ಚೆನ್ನಮಲ್ಲಿಕಾರ್ಜುನ ದೇವರ ವ್ಯಸನದ ಅವಸರವಾಗಿ
ಹೋಗುತ್ತಿದ್ದೇನೆ ನೀವಂತಿರು ಬರಬೇಡಿ !

೧೭೨

ತಾಯ ತೊಱದು ನಾನೇನ ಮಾಡುವೆ?
ತಂದೆಯ ತೊಱದು ನಾನೇನ ಮಾಡುವೆ ?
ಎತ್ತ ಮುಂತಾಗಿ ನಡೆದು ನಾನೇನ ಮಾಡುವೆ ?
ಚೆನ್ನಮಲ್ಲಿಕಾರ್ಜುನಾ, ನೀನೊಲಿಯದನ್ನಕ್ಕರ?

೧೭೩

ತನ್ನವಸರಕ್ಕೆ ಹಗಲುಗನ್ನವಿಕ್ಕಿಹೆನೆಂದು ಹೋದರೆ
ಈ ಕನ್ನವು ಸವೆಯದು ಕಳವು ದೊರಕದಂತಾಯಿತ್ತು !
ಬೊಬ್ಬುಲಿಯನೇರಷಿದ ಮರ್ಕಟನಂತೆ,
ಮೆಲ್ಲಲು ಫಲವಿಲ್ಲ ೧ಕುಳ್ಳಿರೆ ತಾವಿಲ್ಲ೧
ನಾನು ಸರ್ವಸಂಗದ ತೊರಷದವ೨ಳಲ್ಲ೨
*ಚೆನ್ನಮಲ್ಲಿಕಾರ್ಜುನನ ಕೂಡಿ೩ದವಳಲ್ಲ೩

೧೭೪

ಸಾಕ್ಷಿ ಸತ್ತಿತ್ತು ಬೆಂದಿತ್ತು ಲೆಕ್ಕ ತುಂಬಿತ್ತು
ಜೀವ ಜೀವಿತದ ಆಸೆ ನಿಂದಿತ್ತು
ಭಾಷೆ ಪೂರಯಿಸಿ ಹೋಯಿತ್ತು ದೇಶವೆಲ್ಲಾ ಆಱಿಯೆ
ಎನ್ನ ಜೀವ ಚೆನ್ನಮಲ್ಲಿಕಾರ್ಜುನಯ್ಯಾ
ನಿನ್ನ ನಂಬೀ ಎಲ್ಲಾ ಹಂಬಲ ಮಱೆದು ನಿನ್ನ ಬೆಂಬತ್ತಿದೆನ

೧೭೫

ಆರೂ ಇಲ್ಲದವಳೆಂದು ಆಳಿಗೊಳಬೇಡ
ಏನ ಮಾಡಿದರೂ ನಾನಂಜುವವಳಲ್ಲ ತಱಗೆಲೆಯ ಮೆಲಿದು ನಾನಿಹೆನು
ಸಱಿಯ ಮೇಲೊಱಗಿ ನಾನಿಹೆನು
ಚೆನ್ನಮಲ್ಲಿಕಾರ್ಜುನಯ್ಯಾ ೪ಕರಕೇಡನೊಡ್ಡಿದಡೆ೪
ಒಡಲನು ಪ್ರಾಣವನು ನಿಮಗರ್ಪಿಸಿ ಶುದ್ಧ೪ಹೆನು

೧೭೬

ಮುಡಿಬಿಟ್ಟು ತೊಂಗವಾಱಿದವು ಕೇಳು ತಂದೆ
ಉಡಿ ಚೋಲಿ ಅಡಿಗಿಕ್ಕಿ ಹೋಯಿತ್ತು ಶಿವ ಶಿವಾ

---

೧ಮುಳ್ಳು ಕರಘನ೧; ೨ ಳು ೨, * ಅಲ್ಲಿ; ೩x೩, ೪ ನೀವು ಕಡೆ ನೋಡಿದರೆ ೪

ನಡೆಗೆಟ್ಟು ನಿಧಿ ನಿಂದಿತ್ತು ಕೇಳಾ ಎನ್ನ ತಂದೆ
ಪ್ರಾಣದೊಡೆಯ ಕರುದಿಂದೊಪ್ಪುಗೊಳ್ಳಾ ಚೆನ್ನಮಲ್ಲಿಕಾರ್ಜುನಾ.

೧೭೭

ಅಯ್ಯಾ ನಿಮ್ಮ ಶರಣರು ಮಟ್ಟಿದ ಧರೆ ಪಾವನವಯ್ಯ
ಅಯ್ಯಾ ನಿಮ್ಮ ಶರಣರಿದ್ದ ಪುರ ಕೈಲಾಸವಯ್ಯ
ಅಯ್ಯಾ ನಿಮ್ಮ ಶರಣರು ನಿಂದುದೆ ನಿಜ ನಿವಾಸವಯ್ಯ
ಚೆನ್ನಮಲ್ಲಿಕಾರ್ಜುನಯ್ಯಾ
ನಿಮ್ಮ ಶರಣ ಬಸವಣ್ಣನಿದ್ದ ಕ್ಷೇತ್ರ ಅವಿಮುಕ್ತಕ್ಷೇತ್ರವಾಗಿ
ಅನು ಸಂಗನ ಬಸವಣ್ಣನ ಪಾದಕ್ಕೆ ನಮೋ ನಮೋ ಎಂಬೆನು.

೧೭೮

ಅಯ್ಯಾ, ನಿಮ್ಮ ಸಜ್ಜನ ಸದ್ಭಕ್ತರ ಕಂಡೆನಾಗಿ
ಎನ್ನ ಕಂಗಳ ಪಟಲ ಹಱಿಯಿತ್ತು ಇಂದು.
ಅಯ್ಯಾ, ನಿಮ್ಮ ಸಜ್ಜನ ಸದ್ಭಕ್ತರ ಕಂಡು ಅವರ ಶ್ರೀಚರಣಕ್ಕೆಱಗಿದೆನಾಗಿ
ಎನ್ನ ಹಣೆಯ ೧ಲಿ೧ ಖಿತ ತೊಡೆಯಿತ್ತು ಇಂದು.
ಚೆನ್ನಮಲ್ಲಿಕಾರ್ಜುನಯ್ಯಾ, ನಿಮ್ಮ ಶರಣ ಬಸವಣ್ಣನ ಪಾದಕ್ಕೆ
ಮಿಗೆ ಮಿಗೆ ನಮೋ ನಮೋ ಎನ್ನುತ್ತಿರ್ದೆನು.

೧೭೯

ಗುರುವೆ ತೆತ್ತಿಗನಾದ ಲಿಂಗವೆ ಮದವಣಿಗನಾದ
ನಾನೆ ಮದವಳಿಯಾದೆನು !
ಈ ಭುವನವಱಿಯಲು ಅಸಂಖ್ಯಾಥರೆನಗೆ ತಂದೆತಾಯಿಗಳು.
ಕೊಟ್ಟರು ಸಾದೃಶವಪ್ಪ ವರನ ನೋಡಿ.
ಇದು ಕಾರಣ ಚೆನ್ನಮಲ್ಲಿಕಾರ್ಜುನನೆ ಗಂಡನೆನಗೆ
ಮಿಕ್ಕಿನ ೨ಲೋಕದವರೆನಗೆ ಸಂಬಂಧವಿಲ್ಲ೨ವಯ್ಯ.

---

೧ ದುರ್ಲಿ ೧ ; ೨ ವರು ಗಂಡರೆಂಬ ಸಂಬಂಧನೆಮಗಿಲ್ಲ ೨.

೧೮೦

ಅಂಗವ ಲಿಂಗಮುಖದಲ್ಲಿ ಅರ್ಪಿಸಿ ಅಂಗ ಅನಂವಾಯಿತ್ತು
ಮನವ ಅಱಿವಿಂಗೆ ಅರ್ಪಿಸಿ ಮನ ಲಯವಾಯಿತ್ತು
೧ಭಾವವ ತೃಪ್ತಿಗರ್ಪಿಇಸಿ ಭಾವ ಬಯಾಲಯಿತ್ತು೧
ಅಂಗ ಮನ ಭಾವವಳಿದ ಕಾರಣ ಕಾಯವಕಾಯವಾಯಿತ್ತು.
ಎನ್ನ ಕಾಯದ ಸುಖ ಭೋಗವ ಲಿಂಗನೆ ಭೋಗಿಸುವನಾಗಿ
ಶರಣಸತಿ ಲಿಂಗಪತಿಯಾದೆನು
ಇದು ಕಾರಣ ಚೆನ್ನಮಲ್ಲಿಕಾರ್ಜುನನೆಂಬ
ಗಂಡನೊಳಹೊಕ್ಕು ಬೆರಸಿದೆನು!

೧೮೧

ಬಸವಣ್ಣನ ಮನೆಯ ಮಗಳಾಗಿ ಬದುಕಿದೆನಾಗಿ
ತನ್ನ ಕರುಣಪ್ರಸಾದವ ಕೊಟ್ಟನು
ಚೆನ್ನಬಸವಣ್ಣನ್ನ ತೊತ್ತಿನಮಗಳಾದ ಕಾರಣ ಒಕ್ಕಪ್ರಸಾದವ ಕೊಟ್ಟನು

ಪ್ರಭುದೇವರ ತೊತ್ತಿನ ತೊತ್ತಿನ ಮಗಳಾದ ಕಾರಣ ಜ್ಞಾನಪ್ರಸಾದವ ಕೊಟ್ಟನು
ಸಿದ್ಧರಾಮಯ್ಯನ ಶಿಶುಮಗಳಾದ ಕಾರಣ ಪ್ರಾಣಪ್ರಸಾದವ ಕೊಟ್ಟನು
ಮಡಿವಾಳ ಮಾಚಿತಂದೆಯ ಮನೆಯ ಮಗಳಾದ ಕಾರಣ
ನಿರ್ಮಳಪ್ರಸಾದವ ನಿಶ್ಚೈಸಿ ಕೊಟ್ಟನು
ಇಂಉು ಅಸಂಖ್ಯಾತರೆಲ್ಲರೂ ತಮ್ಮ ಕರುಣದ ಕಂದನೆಂದು
ತಲೆದಡವಿ ರಕ್ಷಿಸಿದ ಕಾರಣ
ಚೆನ್ನಮಲ್ಲಿಕಾರ್ಜುನನ ೨ಶ್ರೀ೨ ಪಾದಕ್ಕೆ ಯೋಗ್ಯಳಾದೆನು

೧೮೨

ಲಿಂಗ ಸಂಗ ಸುಖದಲ್ಲಿ ಮನ ವೇದ್ಯವಾಯಿತ್ತು
ಇನ್ನೆಲ್ಲಿಯಯ್ಯಾ ಎನಗೆ ನಿಮ್ಮಲ್ಲಿ ನರವಯವು?

---

1x1, ೨x೨

ಇನ್ನೆಲ್ಲಿಯಯ್ಯಾ ಎನಗೆ ನಿಮ್ಮಲ್ಲಿ ಕೂಡುವದು
ಪರಮ ಸುಖ ಪರಿಣಾಮ ಮನ ಮೇರೆದಪ್ಪಿ
ತಾನು ನಿಜವನ್ನೆದುವ ಠಾವ ಹೇಳಾ ಚೆನ್ನಮಲ್ಲಿಕಾರ್ಜುನಾ.

೧೮೩
ಒಡಲಿಲ್ಲದ ನುಡಿಯಿಲ್ಲದ ಕಡೆಯಿಲ್ಲದ
ನಲ್ಲನ ಒಡಗೂಡಿ ಸುಖಿಯಾದೆನು ಕೇಳಯ್ಯ
ಭಾಷೆ ಪೈಸರವಿಲ್ಲ ಓಸರಿಸೆನನ್ಯಕ್ಕೆ
ಆಸೆ ಮಾಡೆನು ಮತ್ತೆ ಭಿನ್ನ ಸುಖಕ್ಕೆ
ಅಱಳಿದು ಮೂಱಗಿ ಮೂಱಳಿದು ಎರಡಾಗಿ
ಎರಡಳಿದು ಒಂದಾಗಿ ನಿಂದೆನಲ್ಲಾ
ಬಸವಣ್ಣ ಮೊದಲಾದ ಶರಣರಿಗೆ ಶರಣಾರ್ಥಿ
ಪ್ರಭುವಿನಿಂದ ಕೃತಕೃತ್ಯಳಾದೆನಲ್ಲಾ
ಮಱೆಯಲಾಗದು ನಿಮ್ಮ ಶಿಶುವೆಂದು ಎನ್ನುವನು !
ಚೆನ್ನಮಲ್ಲಿಕಾರ್ಜುನನ ಬೆರಸೆಂದು ಹರಸುತ್ತಿಹುದು.

೧೮೪

ಇಂದ್ರ ನೀಲದ ಗಿರಿಯನೇಱಿಕೊಂಡು
ಚಂದ್ರಕಾಂತದ ಶಿಲೆಯನಪ್ಪಿಕೊಂಡು
ಕೊಂಬ ಬಾರಿಸುತ್ತ ಶಿವನೆ ನಿಮ್ಮ ನೆನೆವುತ್ತ ಎಂದಿಪ್ಪೆನೊ ?
ಅಂಗಭಂಗ ಮನಭಂಗವಳಿದು ನಿಮ್ಮನೆಂದಿಂಗೊಮ್ಮೆ ನೆನೆವೆನಯ್ಯಾ
ಚೆನ್ನಮಲ್ಲಿಕಾರ್ಜುನಾ?

೧೮೫

ಒಡಲ ಕಳವಳಕಾಗಿ ಅಡವಿಯ ಹೊಕ್ಕೆನು
ಗಿಡುಗಿಡು ತಪ್ಪದೆ ಬೇಡಿದೆನೆನ್ನಂಗಕ್ಕೆಂದು.
ಅವು ನೀಡಿದವು ತಮ್ಮ ಲಿಂಗಕ್ಕೆಂದು !
ಆನು ಬೇಡಿ ಭವಿಯಾದೆನು. ಅವು ನೀಡಿ ಭಕ್ತರಾದವು !
ಇನ್ನು ಬೇಡಿದನಾದಡೆ ಚೆನ್ನಮಲ್ಲಿಕಾರ್ಜುನಯ್ಯಾ ನಿಮ್ಮಾಣೆ.

೧೮೬

ಚಿಲಿಮಿಲಿಯೆಂದು ಓದುವ ಗಿಳಿಗಿರಾ ನೀವು ಕಾಣಿರೇ ನೀವು ಕಾಣಿರೇ

ಸರನೆತ್ತಿ ಹಾಡುವ ಕೋಗಿಲೆಗಳಿರಾ ನೀವು ಕಾಣಿರೇ ನೀವು ಕಾಣಿರೇ
ಎಱಗಿ ಬಂದಾಡುವ ತುಂಬಿಗಳಿರಾ ನೀವು ಕಾಣಿರೇ ನೀವು ಕಾಣಿರೇ
ಸರೋವರದೊಳಗಾಡುವ ಹಂಸೆಗಳಿರಾ ನೀವು ಕಾಣಿರೇ ನೀವು ಕಾಣಿರೇ
ಗಿರಿ ಗಹ್ವರದೊಳಗಾಡುವ ನವಿಲುಗಳಿರಾ ನೀವು ಕಾಣಿರೇ ನೀವು ಕಾಣಿರೇ
ಚೆನ್ನಮಲ್ಲಿಕಾರ್ಜುನೆಲ್ಲಿರ್ದಹನೆಂದು ಹೇಳಿರೆ.

೧೮೭

ಅಳಿ ಸಂಕುಳವೇ ಮಾಮರವೇ ಬೆಳದಿಂಗಳೇ ಕೋಗಿಲೆಯೇ
ನಿಮ್ಮನೆಲ್ಲರನು ಒಂದ ಬೇಡುವೆನು
ಎನ್ನೊಡೆಯ ಚೆನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋಱಿರೆ.

೧೮೮

ವನವೆಲ್ಲಾ ನೀನೆ, ವನದೊಳಣ ದೇತರವುಎಲ್ಲಾ ನೀನೆ,
ತರುವಿನೊಳಗಾಡುವ ಜಗ ಮೃಗವೆಲ್ಲಾ ನೀನೆ
ಚೆನ್ನಮಲ್ಲಿಕಾರ್ಜುನಾ ಸರ್ವಭರಿತನಾಗಿ ನೀ ಎನಗೇಕೆ ಮುಂದೋಱೆ?

೧೮೯

ಮೂಲಾಧಾರದ ಬೇರ ಮೆಟ್ಟಿ ಭೂಮಂಗಲವನೇಱಿದೆ
ಆಚರದ ಬೇರ ಹಿಡಿದು ಐಕ್ಯದ ತುದಿಯನೇಱಿದೆ.
ವೈರಾಗ್ಯದ ಸೋಪಾನದಿಂದ ಶ್ರೀ ಪರ್ವತವನೇಱಿದೆನು
ಕೈವಿಡಿದುಕೊಳ್ಳಾ ಚೆನ್ನಮಲ್ಲಿಕಾರ್ಜುನಾ.

೧೯೦

ಕಳನೇರಷಿ ಇಳಿವುದು ವೀರಂಗೆ ಮತವಲ್ಲ
ಶಿವಶರಣಂಗೆ ಹಿಮ್ಮೆಟ್ಟುವುದು ಪಥವಲ್ಲ
ಮನದೊಡೆಯ ಮನವನಿಂಬುಗೊಂಬರನಯ್ಯಾ
ಏಱಲಾಗದು ಶ್ರೀ ಪರ್ವತವ ಏಱೆ ಇಳಿವಡೆ ವ್ರತಕ್ಕೆ ಭಂಗ
ಕಳನೇಱಿ ಕೈದು ಮಱೆದಡೆ ಮಾಱಾಂತ
ಚೆನ್ನಮಲ್ಲಿಕಾರ್ಜುನ ನಿಮ್ಮ ಗಾಣಲಿಱಿದೆನು

೧೯೧

ಕ್ರೀಯುಳ್ಳುಡಂತೊಂದಾಸೆ ಭಕ್ತ ನುಡಿಗಡಣ ಉಳ್ಳಡಂತೊಮದಾಸೆ
ಶ್ರೀ ಪವ್ವತವನೇಱಿ ನಿಮ್ಮ ಬೆರಸಿದಡೆ
ಎನ್ನಾಸೆಗೆ ಕಡೆಯೇ ಅಯ್ಯ?
ಆವ ಆಸೆಯೂ ಇಲ್ಲದೆ
ನಿಮ್ಮ ನಂಬಿ ಬಂದು ಕೆಟ್ಟೆನಯ್ಯ
ಚೆನ್ನಮಲ್ಲಿಕಾರ್ಜುನಾ!

೧೯೨

ಬಯಲು ಲೀಂಗವೆಂಬೆನೆ? ಬಗಿದು ನಡೆದಲ್ಲಿ ಹೋಯಿತ್ತು
ಬೆಟ್ಟ ಲಿಂಗವೆಂಬೆನೆ? ಮೆಟ್ಟಿ ನಿಂದಲ್ಲಿ ಹೋಯಿತ್ತು
ತರುಮರಾದಿಗಳು ಲಿಂಗವೆಂಬೆನೆ? ತಱಿದಲ್ಲಿ ಹೋಯಿತ್ತು
ಲಿಂಗ ಜಂಗಮದ ಪಾದವೇ ಗತಿಯೆಂದು ನಂಬಿದ
ಸಂಗನ ಬಸವಣ್ಣನ ಮಾತ ಕೇಳಿ
ನಿಮ್ಮಲ್ಲಿಗೆ ಬಂದು ಕೆಟ್ಟೆನಯ್ಯಾ ಚೆನ್ನಮಲ್ಲಿಕಾರ್ಜುನಾ !

೧೯೩

ಬೆರಸುವರೆ ಬೇಗ ತೋಱು ಹೊಱ ಹಾಯಿಕದಿರಯ್ಯ.
ನಿಮ್ಮಲ್ಲಿ ಸಲೆ ಸಂದ ತೊತಾನು ಎನ್ನ ಹೊಱ ಹಾಯಿಕದಿರಯ್ಯ
ಚೆನ್ನಮಲ್ಲಿಕಾರ್ಜುನಯ್ಯಾ.
ನಿಮ್ಮ ನಂಬಿ ಬೆಂಬಲಿ ಬಂದೆನು, ಇಂಬುಗೊಳ್ಳಯ್ಯ ಬೇಗದೊಳು.

೧೯೪

ನೋಡುವ ಕಂಗಳಿಗೆ ರೂಪಿಂಬಾಗಿರಲು
ನೀವು ಮನನಾಚೆ ಬಮದಿರಣ್ಣಾ
ಕೇಳುವ ಶ್ರೋತ್ರದ ಸೊಗಸಿಗೆ ನೀವು ಮರುಳಾಗಿ ಬಂದಿರಣ್ಣಾ
ನಾರಿಯೆಂಬ ರೂಹಿಂಗೆ ನೀವು ಒಲಿದು ಬಂದಿರಣ್ಣಾ
ಮೂತ್ರವೆಂಬ ಬಿಂದುನಾಳಕ್ಕೆ ಮುಂದುಗಾಣದೆ ಬಂದಿರಣ್ಣಾ
ಬುದ್ದಿಗೇಡಿತನದಿಂದ ಪರಮಾರ್ಥದ ಸುಖವ ಹೋಗಲಾಡಿಸಿಕೊಂಡು
ಇದಾವ ಕಾರಣವೆಂಱಿಯದೆ ನೀವು ನರಕ ಹೇತುವೆಂದಱಿತು
ಮನ ಹೇಸದೆ ಬಂದಿರಣಾನ
ಚೆನ್ನಮಲ್ಲಿಕಾರ್ಜುನನಲ್ಲದೆ * ಮಿಕ್ಕಿ ೧ನ ಪುರುಷರನೆಗೆ ಸಹೋದರರು ೧

---

* ಕಿನ್ನರ; ೧ ವರು ಸೋದರರೆನಗೆ ೧

೧೯೫

ಬಟ್ಟಿಹ ಮೊಲೆಯ ಭರದ ಜವ್ವನದ ಚೆಲುವ ಕಂಡು ಬಂದಿರಣ್ಣಾ
ಅಣ್ಣಾ ನಾನು ಹೆಂಗೂಸಲ್ಲಾ
೧ಅಣ್ಣಾ ನಾನು೧ ಸೂಳೆಯಲ್ಲಾ
ಏನೆಂದು ಬಂದಿರಣ್ಣಾ?
ಚೆನ್ನಮಲ್ಲಿಕಾರ್ಜುನಲಲ್ಲದ ಮಿಕ್ಕಿನ ಪರಪುರುಷರು
ನಮಗಾಗದ ಮೊಱೆ ನೋಡಾ ಅಣ್ಣಾ

೧೯೬

ಎನ್ನಂತೆ ಪುಣ್ಯಗೆಯಿದವರುಂಟೆ?
ಎನ್ನಂತೆ ಭಾಗ್ಯಗೆಯಿದವರುಂಟೆ?
ಕಿನ್ನರನಂತಪ್ಪ ಸೋದರರೆನಗೆ
ಏಳೇಳು ಜನ್ಮದಲ್ಲಿ ಶಿವಭಕ್ತರೆ ೨ಬಂಧುಗಳ೨ನಗೆ
ಚೆನ್ನಮಲ್ಲಿಕಾರ್ಜುನನಂತಪ್ಪ ಗಂಡ ನೋಡಾ ಎನಗೆ

೧೯೭

ಅಂಗದ ಭಂಗವ ಲಿಂಗದ ಮುಖದಿಂದ ಗೆಲಿದೆ
ಮನದ ಭಂಗವ ಅಱಿವಿನ ಮುಖದಿಂದ ಗೆಲಿದೆ
ಜೀವವ ಭಂಗವ ಶಿವಭಾವದಿಂದ ಗೆಲಿದೆ
ಕರಣದ ಕತ್ತಲೆಯ ಬೆಳಗನುಟ್ಟು ಗೆಲಿದೆ
* ಜವ್ವನದ ಹೊಱಮಿಂಚಿನಲ್ಲಿ ನಿಮ್ಮ ಕಣ್ಣಿಂಗೆ ತೋಱುವ
ಕಾಮನ ಸುಟ್ಟುರುಹಿದ ಭಸ್ಮವ ನೋಡಯ್ಯ!
ಚೆನ್ನಮಲ್ಲಿಕಾರ್ಜುನಾ
ಕಾಮನ ಕೊಂದು ಮನಸಿಜನಾಗುಳುಹಿದಡೆ
ಮನಸಿಜನ ತಲೆಯ ಬರಹವ ತೊಡೆದೆ * ನಾನು !

೧೯೮

ಎಲೆಯಣ್ಣಾ ನೀವು ಮರುಳಲ್ಲಾ ಅಣ್ಣಾ; ಎನ್ನ ನಿವ್ವಳವೆ?
ಹದಿನಾಲ್ಕು ಲೋಕವ ನುಂಗಿದ ಕಾಮನ ಬಾಣದ ಗುಣ ಎನ್ನ ನಿನ್ನಳವೆ?

---

1x1, ೨ ಬಳಗವೆ ೨, * ಎನ್ನ; * ನು.

ವಾರುವ ಮುಗ್ಗಿದಡೆ, ಮಿಡಿಹಜೆಯ ಹೊಯಿದವರುಂಟೆ?
ಮುಗ್ಗಿದ ಭಂಗವ ಮುಂದೆ ರಣದಲ್ಲಿ ತಿಳಿವುದು
ನಿನ್ನ ನೀ ಸೈರಿಸಿ ಕೈದುವ ಕೊಳ್ಳಿರಣ್ಣಾ
ಚೆನ್ನಮಲ್ಲಿಕಾರ್ಜುನನೆಂಬ ಹಗೆಗೆ ಬೆಂಗೊಂಡದಿರಣ್ಣಾ !

೧೯೯

ಪೃಥ್ವಿ ಗೆಲಿದ ಏಲೇಶ್ವರ ಲಿಂಗವ ಕಂಡೆ.
ಭಾವಭ್ರಮೆಯ ಗೆಲಿದ ಬ್ರಹ್ಮೇಶ್ವರ ಲಿಂಗವ ಕಂಡೆ
ಸತ್ಯ ರಜ ತಮವ ಗೆಲಿದ ತ್ರಿಪುರಾಂತಕನ ಕಂಡೆ.
ಅಂತರಂದ ಆತ್ಮ 'ಜ್ಞಾನದಿಮದ ಜ್ಯೋತಿಸಿದ್ಧ'ನ ಕಂಡೆ
ಇವರೆಲ್ಲರ ಮಧ್ಯದ ಮೂಲಸ್ಥಾನ ಪ್ರಾಣಲಿಂಗ ಜಂಗಮನೆಂದು
ತೋಜೆಸಿದ ಸಂಗನ ಬಸವಣ್ಣನ ಪ್ರಸಾದದಿಂದ
ಚೆನ್ನಮಲ್ಲಿಕಾರ್ಜುನನ ಕಂಡೆ !

೨೦೦

ವನವೆಲ್ಲಾ ಕಲ್ಪತರು, ಗಿಡುವೆಲ್ಲಾ ಮಜುಜವಣಿ,
ಶಿಲೆಯೆಲ್ಲಾ ಪರ್ವತ, ನೆಲನೆಲ್ಲಾ ಅವಿಮುಕ್ತಕ್ಷೇತ್ರ
ಜಲವೆಲ್ಲಾ ಹರಳೆಲ್ಲಾ ನಿರ್ಜರಾಮೃತ, ಮೃಗವೆಲ್ಲಾ ಪುರುಷಾಮೃಗ,
ಎಡಹುವ ಹರಳಲೆಲಾ ಚಿಂತಾಮಣಿ !
ಚೆನ್ನಮಲ್ಲಿಕಾರ್ಜುನಯ್ಯನ ನಚ್ಚಿ ಗಿರಿಯ ಸುುತ್ತಿ
ನೋಡುತ್ತ ನೋಡುತ್ತ ಬಂದು ಕದಳಿಯ ಬನವೆಮಬುದ ಕಮಡೆ ನಾನು !

೨೦೧

ಹೊಳೆವ ಕೆಂಜೆಡೆಗಳ ಮಣಿಮಕುಟಇದಇ
ಒಪ್ಪುವ ಸುಲಿತ ಳಪಲ್ಲಳಳ ನಗೆಮೊಗದ ಕಂಗಳ ಕಾಂತಿಯ
ಈರೇಉ ಭವನದ ಬೆಳಗುವ ದಿವ್ಯಸ್ವರೂಪನ ಕಂಡೆ ನಾನು !
ಕಂಡೆನ್ನ ಕಂಗಳ ಬಜೆ ಹಿಂಗಿತ್ತಿಂದು !
ಗಂಡಗಂಡರೆಲ್ಲರ ಹೆಂಡಿರಾಗಿ ಆಳುವ ಗರುವನ ಕಂಡೆ ನಾನು
ಜಗದಾದಿ ಶಕ್ತಿಯೋಲು ಬೆರಸಿ ಮಾತನಾಡುವ

---

+ ನಾನು, + ನ/ಸು, + ನಾನು; + ನು; ೨ ತ್ತೆ ೨ ; ಇಇ, ಳ ಬ್ಲ
ಳ

---

ಳ

ಪರಮಗುರು ಚೆನ್ನಮಲ್ಲಿಕಾರ್ಜುನನ
ನಿಲವ ಕಂಡು ಬದುಕಿದೆನು

೨೦೨

ಮುತ್ತು ನೀ೨ರಲಾಯಿ೨ತ್ತು, ಉಪ್ಪು ನೀ೧ರಲಾಯಿ೧ತ್ತು,
ವಾರಿಕಲ್ಲು ನೀ೧ರಲಾಯಿ೧ತ್ತು
ಉಪ್ಪು ಕರಗಿತ್ತು
ವಾರಿಕಲ್ಲು ಕರಗಿತ್ತು
ಮುತ್ತು ಕರಗದಂತೆ ಇದ್ದಿತು.
ಲಿಂಗವ ಮುಟ್ಟಿ ಪೂಜಿಸಿದವರೆಲ್ಲರೂ ಭವಭಾರಿಗಳಾದರು
ಚೆನ್ನಮಲ್ಲಿಕಾರ್ಜುನಯ್ಯಾ,
ನಾ ನಿಮ್ಮ ಮುಟ್ಟಿ ಕರಿಗೊಂಡೆ ಕಾಣಾ !

೨೦೩

ಕದಲಿ ಎಂಬುದು ತನು, ಕದಳಿ ಎಂಬುದು ಮನ
ಕದಳಿ ಎಂಬುದು ವಿಷಯ ಸಂಕುಳ
ಕದಳಿ ಎಂಬುದು ಭವಘೋರಾರಣ್ಯ
ಕದಲಿ ಎಂಬುದ ಗೆದ್ದು ತವೆ ಬದುಕಿ ಬಂದು
ಕದಳಿಯ ಬನದಲ್ಲಿ ಭವಹರನ ಕಂಡೆನು
ಭವಗೆಟ್ಟು ಬಂದ ಮಗಳೆಂದು
ಕರುಣದಿಂದ ತೆಗೆದಪ್ಪಿ ಬಿಗಿದೊಲಿದಪ್ಪಿದರೆ
ಚೆನ್ನಮಲ್ಲಿಕಾರ್ಜುನನ ಹೃದಯ ಕಮಲದಲ್ಲಿ ಅಡಗಿದೆನು

ಅಕ್ಕಗಳ ವಚನಗಳು ಸಮಾಪ್ತಂ
– ಮಂಗಳ ಮಹಾ ಶ್ರೀ ಶ್ರೀ ಶ್ರೀ –

೧ ರಿ ನಲ್ಲ ಹುಟ್ಟಿ ೧

**ಅಕ್ಕಗಳ ಹೆಚ್ಚಿನ ವಚನಗಳು** *

೧

ಅಂಗ ಕ್ರಿಯಾಲಿಂಗವ ವೇಧಿಸಿ, ಅಂಗ ಲಿಂಗದೊಳಗಾಯಿತ್ತು
ಮನ ಅರಿವ ಬೆರಸಿ, ಜಂಗಮ ಸೇವೆಯ ಮಾಡಿ,
ಮನ ಜಂಗಮಲಿಂಗದೊಳಗಾಯಿತ್ತು
ಭಾವ ಗುರುಲಿಂಗದೊಳಗೆ ಬೆರಸಿ, ಮಹಾಪ್ರಸಾದವ ಭೋಗಿಸಿ,
ಭಾವ ಗುರುಲಿಂಗದೊಳಗಾಯಿತ್ತು
ಚೆನ್ನಮಲ್ಲಿಕಾರ್ಜುನಾ
ನಿಮ್ಮ ಒಲುಮೆಯಿಂದ ಸಂದಳಿದು
ಸ್ವಯಲಿಂಗಿಯಾದೆನಯ್ಯಾ ಪ್ರಭುವ.

೨

ಅಂಗದಲ್ಲಿ ಆಚಾರವ ತೋರಿದ;
ಆ ಆಚಾರವೇ ಲಿಂಗವೆಂದರುಹಿದ
ಪ್ರಾಣದಲ್ಲಿ ಅರಿವ ನೆಲೆಗೊಳಿಸಿದ;
ಆ ಅರಿವೆ ಜಂಗಮನೆಂದು ತೋರಿದ
ಚೆನ್ನಮಲ್ಲಿಕಾರ್ಜುನನ ಹೆತ್ತ ತಂದೆ ಸಂಗನಬಸವಣ್ಣನು
ಎನಗೀ ಕ್ರಮವನರುಹಿದನಯ್ಯ ಪ್ರಭುವೆ

೩

ಅಂಗದೊಳಗೆ ಅಂಗೌಆಗಿ ಅಂಗವ ಲಿಂಗೈಕ್ಯವ ಮಾಡಿದೆ
ಮನದೊಳಗೆ ಮನವಾಗಿ, ಮನವ ಲಿಂಗೈಕ್ಯವ ಮಾಡಿದೆ
ಭಾವದೊಳಗೆ ಭಾವವಾಗಿ, ಭಾವವ ಲಿಂಗೈಕ್ಯವ ಮಾಡಿದೆ
ಅರಿವಿನೊಳಗೆ ಅರಿವಾಗಿ, ಅರಿವ ಲಿಂಗೈಕ್ಯವ ಮಾಡಿದೆ
ಜ್ಞಾನದೊಳಗೆ ಜ್ಞಾನವಾಗಿ, ಜ್ಞಾನವ ಲಿಂಗೈಕ್ಯವ ಮಾಡಿದೆ

---

* ಇಲ್ಲಿನ ವಚನಗಳನ್ನು ಡಾ.ವೀರಣ್ಣ ರಾಜೂರ ಸಂಪಾದಿತ 'ಶಿವಶರಣೆಯರ ಸಂಪುಟ-೫ ರಿಂದ ಆಯ್ದಿರಿಸಲಾಗಿದೆ.
ಇಲ್ಲಿ ಸಕಟರೇಫಕ್ಕೆ ಬದಲು ರೇಫೆಯನ್ನು ಬಳಸಲಾಗಿದೆ.
ಇವ ಅಕಾರಾದಿಯಲ್ಲೇ ಇರುವುದರಿಂದ ಕಡೆಯ ಪಟ್ಟಿಯಲ್ಲಿ ಸೇರಿರುವುದಿಲ್ಲ.

ಕ್ರೀಗಳೆಲ್ಲವ ನಿಲಿಇಸ ಕ್ರಿಯಾತೀತವಾಗಿ,
ನಿಃಪತಿ ಲಿಂಗೈಕ್ಯವ ಮಾಡಿದೆ
ನಾನೆಂಬುದ ನಿಲಿಸಿ, ನೀನೆಂಬುದ ಕೆಡಿಸಿ,
ಉಭಯವ ಲಿಂಗೈಕ್ಯವ ಮಾಡಿದೆ.
ಚೆನ್ನಮಲ್ಲಿಕಾರ್ಜುನಯ್ಯನೊಳಗೆ ನಾನಳಿದೆನಾಗಿ,
ಲಿಂಗವೆಂಬ ಘನವು ಎನ್ನಲ್ಲಿ
ಅಳಿಯಿತ್ತು ಕಾಣಾ ಸಂಗಬಸವಣ್ಣಾ

೪

ಅಂಗವಿಕಾರಸಂಗವ ಮರೆದು,
ಲಿಂಗವನೊಡಗೂಡುತಿಪ್ಪವರ ತೋರಾ ಎನಗೆ,
ಕಾಮವಿಕಾರಕತ್ತಲೆಯಳಿದು,
ಭಕ್ತಿಪ್ರಾಣವಾಗಿಪ್ಪವರ ತೋರಾ ಎನಗೆ,
ತ್ರಿಕರಣ ಶುದ್ಧವಾಗಿ ನಿಮ್ಮ ನೆರೆ ನಂಬಿದ

ಸದ್ಭಕ್ತರ ತೋರಾ ಎನಗೆ ಚೆನ್ನಮಲ್ಲಿಕಾರ್ಜುನಾ.

೫

ಅಂಗಸಂಗದಲ್ಲಿ ಲಿಂಗಸಂಗಿಯಾದೆನು
ಲಿಂಗಸಂಗದಲ್ಲಿ ಅಂಗಸಂಗಿಯಾದೆನು
ಉಭಯಸಂಗವನೂ ಅರಿಯದೆ ಪರಿಣಾಮಿಯಾದೆನು
ನುಡಿಯ ಗಡಣವ ಮರೆದು ತೆರಹಿಲ್ಲದಿದ್ದೆನು
ಎನ್ನ ದೇವ ಚೆನ್ನಮಲ್ಲಿಕಾರ್ಜುನನ ಬೆರಸಿದ ಬಳಿಕ
ಎನ್ನ ನಾನು ಏನೆಂದೂ ಅರಿಯೆನಯ್ಯಾ

೬

ಅಕ್ಕಿಯಿಲ್ಲದ ತುಷಕ್ಕೆ ಅಗ್ಗವಣಿಯನೆರೆದಡೆ
ಅದೆಂದಿಂಗೆ ಬೆಳೆದು ಫಲವಪ್ಪುದಯ್ಯಾ?
ಅರಿವಲ್ಲದವರಿಗೆ ಆಚಾರವಿದ್ದಡೆ
ಅರಕೆಗೆಟ್ಟು ಸುಖವೆಂದಪ್ಪುದಯ್ಯಾ
ಹೊರೆದ ಪರಿಮಳ ಸ್ಥಿರವಾಗಬಲ್ಲುದೆ?
ಎನ್ನದೇವ ಚೆನ್ನಮಲ್ಲಿಕಾರ್ಜುನನರಿಯದವರಿಗೆ
ಆಚಾರವಿಲ್ಲ ಕಾಣಿರಣ್ಣಾ

೭

ಅಘಟಿತ ಘಟಿತನ ಒಲವಿನ ಶಿಶು !
ಕಟ್ಟಿದೆನು ಜಗಕ್ಕೆ ಬಿರಿದನು.
ಕಾಮ ಕ್ರೊಧ ಲೋಭ ಮೋಹ ಮದ ಮತ್ಸರಂಗಳಿಗೆ
ಇಕ್ಕಿದೆನು ಕಾಲಲಿ ತೊಡರನು
ಗುರುಕೃಪೆಯೆಂಬ ಇರುಗನಿಕ್ಕಿ
ಮಹಾಶರಣೆಂಬ ತಿಲಕವನಿಕ್ಕಿ
ನಿನ್ನ ಕೊಲುವೆ ಗೆಲುವೆ ಶಿವಶರಣೆಂಬ ಅಲಗ ಕೊಂಡು
ಬಿಡು ಬಿಡು ಕರ್ಮವೆ, ನಿನ್ನ ಕೊಲ್ಲದೆ ಮಾಣೆನು
ಕೆಡಹಿಸಿಕೊಳ್ಳದೆನ್ನ ನುಡಿಯ ಕೇಳಾ
ಕೆಡದ ಶಿವಶರಣೆಂಬಅಲಗನೆ ಕೊಂಡು
ನಿನ್ನ ಕೊಲುವೆ ಗೆಲುವ ಎನಾನು
ಬ್ರಹ್ಮಪಾಶವೆಂಬ ಕಳನನೆ ಸವರಿ,
ವಿಷ್ಣು ಮಾಯೆಯೆಂಬ ಎಡೆಗೋಲನೆ ನೂಕಿ
ಎನ್ನೊಡೆಯ ಚೆನ್ನಮಲ್ಲಿಕಾರ್ಜುನಯ್ಯಾ
ತಲೆದೂಗಲಿ ಕಾದುವೆನು ನನು.

೮

ಅಪಾರ ಘನಗಂಭೀರದ ಅಂಬುಧಿಯಲ್ಲಿ
ತಾರಾಪಥವಂ ನೋಡಿ ನಡೆಯೆ
ಛೈತ್ರದಿಮದ ದ್ವೀಪ ದ್ವೀಪಾಂತರಕ್ಕೆ
ಸಕಲ ಪದಾರ್ಥವನೆಯ್ದುಸುವುದು
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯನ
ಸಮೀಪ ಸೂರ್ಯಸಂಭಾಷಣೆಯನರಿದಡೆ
ಮುನ್ನಿನನಲ್ಲಿಗೆಯ್ದುಸುವುದು

೯

ಅಯ್ಯಾ, ನಿನ್ನ ಮುಟ್ಟಿ ಮುಟ್ಟದೆನ್ನ ಮನ ನೋಡಾ
ಬಿಚ್ಚಿ ಬೀಸರವಾಯಿತ್ತೆನ್ನ ಮನ
ಹೊಳಲ ಸುಂಕಿಗನಂತೆ ಹೊದಕುಳಿಗೊಂಡಿತೆನ್ನ ಮನ
ಎರಡೆಂಬುದ ಮರೆದು ಬರಡಾಗದೆನ್ನ ಮನ
ನೀನು ಆನಪ್ಪ ಪರಿಯೆಂತು ಹೇಳಾ, ಚೆನ್ನಮಲ್ಲಿಕಾರ್ಜುನಾ ?

೧೦

ಅಯ್ಯಾ, ಸರ್ವಮೂಲಸಂಹಾರವಿಡಿದು
ಕುಲಭ್ರಮೆ ಛಲಭ್ರಮೆ ಜಾತಿಭ್ರಮೆ
ನಾಮ ವರ್ಣ ಆಶ್ರಯ ಮತ ಶಾಸ್ತ್ರಭ್ರಮೆ,
ತರ್ಕಭ್ರಮೆ, ರಾಜ್ಯಭ್ರಮೆ, ಧನ ಧಾನ್ಯ ಪುತ್ರ ಮಿತ್ರಭ್ರಮೆ,
ಐಶ್ವರ್ಯ ತ್ಯಾಗ ಭೋಗ ಯೋಗಭ್ರಮೆ
ಕಾಯ ಕರಣ ವಿಷಯಭ್ರಮೆ
ವಾಯು ಮನ ಭಾವ ಜೀವ ಮೋಹಭ್ರಮೆ,
ನಾಹಂ ಕೋಹಂ ಸೋಹಂ ಮಾಯಾಭ್ರಮೆ ಮೊದಲಾದ
ಬತ್ತೀಸ ಪಾಶಭ್ರಮಿತರಾಗಿ ತೊಳಲುವ ವೇಷಧಾರಿಗಳ ಕಂಡು
ಶಿವಶಕ್ತಿ ಶಿವಭಕ್ತ ಶಿವಪ್ರಸಾದಿ ಶಿವಶರಣ ಶಿವೈಕ್ಯ
ಶಿವಜಂಗಮವೆಂದು ನುಡಿಯಲಾರದೆ ಎನ್ನ ಮನ ನಾಚಿ
ನಿಮ್ಮಡಿಗಭಿಮುಖವಯಿತ್ತಯ್ಯಾ ಚೆನ್ನಮಲ್ಲಿಕಾರ್ಜುನಾ.

೧೧

ಅರ್ಥಸನ್ಯಾಸಿಯಾದಡೇನಯ್ಯಾ
ಆವಂದಿಮದ ಬಂದಡೂ ಕೊಳದಿರಬೆಕು
ರುಚಿಸನ್ಯಾಸಿಯಾದಡೇನಯ್ಯಾ
ಜಿಹ್ವೆಯ ಕೊನೆಯಲ್ಲಿ ಮಧುರವನರಿಯದಿರಬೇಕು
ಸ್ತ್ರೀಯ ಸನ್ಯಾಸಿಯಾದಡೇನಯ್ಯಾ
ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ ತಟ್ಟಿಲ್ಲದಿರಬೇಕು
ದಿಗಂಬರಿಯಾದಡೇನಯ್ಯಾ
ಮನ ಬತ್ತಲೆ ಇರಬೇಕು
ಇಂತೀ ಚತುರ್ವಿಧದ ಹೊಲಬರಿಯದೆ ವೃಥಾ ಕೆಟ್ಟರು
ಕಾಣಾ ಚೆನ್ನಮಲ್ಲಿಕಾರ್ಜುನಾ.

೧೨

ಅಷ್ಟದಳಕಮಲದ ಆತ್ಮನೊಳಗೆ ಸೃಷ್ಟಿ ಜನಿಸಿ,
ಕೂರುಮ ದಿಗುದಂತಿ ದಿಗುವಳಯವ ನುಂಗಿ,
ನಿಜಶೂನ್ಯ ತಾನಾದ ಬಳಿಕ,
ತನ್ನ ತಾನರಿದ ನಿಜಪದ ಭಿನ್ನಯೋಗಕ್ಕೆ ಬಹುದೆ?
ಕಂಗಳ ನೋಟದಲ್ಲಿ ಮನದ ಸೊಗಸಿನಲ್ಲಿ,
ಅನಂಗನ ದಾಳಿಯನಗಲಿದೆನಣ್ಣಾ,
ಮರೀಚಿಕಾಜಲದೊಳಡಗಿದ ಪ್ರಾಣಿ ವ್ಯಾಧನ ಬಲೆಯೊಳಗಹುದೆ?
ಎನ್ನದೇವ ಚೆನ್ನಮಲ್ಲಿಕಾರ್ಜುನನಲ್ಲದೆ
ಪರಪುರುಷರು ನಮಗಾಗದಣ್ಣಾ.

೧೩

ಅಷ್ಟವಿಧಾರ್ಚನೆಯ ಮಾಡಿ ಒಲಿಸುವೆನೆ ಅಯ್ಯಾ?
ನೀನು ಬಹಿರಂಗವ್ಯವಹಾರದೂರಸ್ಥರನು
ಅಂತರಂಗದಲ್ಲಿ ಧ್ಯಾನವ ಮಾಡಿ ಒಲಿಸುವೆನೆ ಅಯ್ಯಾ?

ನೀನು ವಾಙ್ಮನಕ್ಕತೀತನು
ಆಪಸ್ತೋತ್ರದಿಮದ ಒಲಿಸುವೆನೆ ಅಯ್ಯಾ?
ನೀನು ನಾದಾತೀತನು.
ಭಾವಜ್ಞಾನದಿಂದ ಒಲಿಸುವೆನೆ ಅಯ್ಯಾ?
ನೀನು ಸರ್ವಾಂಗ ಪರಿಪೂರ್ಣನು.
ಒಲಿಸಲೆನ್ನಳವಲ್ಲ; ನೀನೊಲಿವುದೆ ಸುಖವಯ್ಯಾ
ಚೆನ್ನಮಲ್ಲಿಕಾರ್ಜುನಯ್ಯಾ

೧೪

ಆಸನದಿಂದ, ಕುದಿದು,
ವ್ಯಸನದಿಂದ ಬೆಂದು,
ವಿಷಯಕ್ಕೆ ಹರಿವ ಜೀವಗಳು ನಿಮ್ಮನರಿಯರು
ಕಾಲಕಲ್ಪಿತ ಪ್ರಳಯ ಜೀವಿಗಳೆಲ್ಲ
ನಿಮ್ಮನೆತ್ತ ಬಲ್ಲರಯ್ಯ ಚೆನ್ನಮಲ್ಲಿಕಾರ್ಜುನಾ ?

೧೫

ಆವ ವಿದ್ಯೆಯ ಕಲಿತಡೇನು?
ಸಾವ ವಿದ್ಯೆ ಬೆನ್ನಬಿಡದು.
ಆಶನವ ತೊರೆದಡೇನು, ವ್ಯಸನವ ಮರೆದಡೇನು?
ಉಸುರ ಹಿಡಿದಡೇನು, ಬಸುರ ಕಟ್ಟಿದಡೇನು?
ಚೆನ್ನಮಲ್ಲಿಕಾರ್ಜುನದೇವಯ್ಯಾ,
ನೆಲ ತಳವಾರನಾದಡೆ ಕಳ್ಳನೆಲ್ಲಿಗೆ ಹೋಹನು?

೧೬

ಆಹಾರವ ಕಿರಿದು ಮಾಡಿರಣ್ಣಾ, ಆಹಾರವ ಕಿರಿದು ಮಾಡಿ.
ಆಹಾರದಿಂದ ವ್ಯಾಧಿ ಹಬ್ಬಿ ಬಲಿವುದಯ್ಯಾ
ಆಹಾರದಿಂದ ನಿದ್ರೆ, ನಿದ್ರೆಯಿಂ ತಾಮಸ, ಅಜ್ಞಾನ, ಮೈಮರಹು,
ಅಜ್ಞಾನದಿಂದ ಮನೋವಿಕಾರ, ಇಂದ್ರಿಯವಿಕಾರ,
ಭಾವವಿಕಾರ, ವಾಯುವಿಕಾರವನುಂಟುಮಾಡಿ,
ಸೃಷ್ಟಿಗೆ ತಹುದಾದ ಕಾರಣ ಕಾಯದ ಅತಿಪೋಷಣ ಬೇಡ
ಅತಿ ಪೋಷಣೆ ಮೃತ್ಯುವೆಂದುದು.
ಜಪ ತಪ ಧ್ಯಾನ ಧಾರಣ ಪೂಜೆಗೆ ಸೂಕ್ಷ್ಮದಿಂದ ತನು ಮಾತ್ರವಿದ್ದರೆ ಸಾಲದೆ?
ತನುವ ಪೋಷಿಸುವ ಆಸೆ ಯತಿತ್ವಕ್ಕೆ ವಿಘ್ನವೆಂದುದು.
ತನು ಪೋಷಣೆಯಿಂದ ತಾಮಸ ಹೆಚ್ಚಿ, ಅಜ್ಞಾನದಿಂ ವಿರಕ್ತಿ ಹಾನಿ,
ಅರಿವು ನಷ್ಟ, ಪರವು ದೂರ, ನಿರಕೆ ನಿಲವಿಲ್ಲದ ಕಾರಣ,
ಚೆನ್ನಮಲ್ಲಿಕಾರ್ಜುನನೊಲಿಸ ಬಂದ ಕಾಯವ
ಕೆಡಿಸೆ ಉಳಿಸಿಕೊಳ್ಳಿರಯ್ಯಾ.

೧೭

ಆಳುತನದ ಮಾತನಾಡಿದರೆಲವೋ
ಮೇಲೆ ಕಾರ್ಯ ದಿಮ್ಮಿತ್ತಣ್ಣಾ
ಅಲಗಿನ ಮೊನೆಯ ಧಾರೆ ಮಿಂಚುವಾಗ
ಕೋಡದೆ ಕೊಂಕದೆ ನಿಲಬೇಕಯ್ಯ
ಬಂಟ ಬೆಟ್ಟ ಭಕ್ತಿಯೊಂದೆ ಕಂಡಯ್ಯ
ಚೆನ್ನಮಲ್ಲಿಕಾರ್ಜುನನಂತಲ್ಲದೊಲ್ಲ.

****

೧೮

ಇಹಕ್ಕೊಬ್ಬ ಗಂಡನೆ? ಪರಕ್ಕೊಬ್ಬ ಗಂಡನೆ?
ಲೌಕಿಕ್ಕೊಬ್ಬ ಗಂಡನೆ? ಪಾರಮಾರ್ಥಕ್ಕೊಬ್ಬ ಗಂಡನೆ?
ಎನ್ನಗಂಡ ಚೆನ್ನಮಲ್ಲಿಕಾರ್ಜುನದೇವರಲ್ಲದೆ
ಮಿಕ್ಕಿನ ಗಂಡರೆಲ್ಲ ಮುಗಿಲಮರೆಯ ಬೊಂಬೆಯಂತೆ.

೧೯

ಈಳೆ ನಿಂಬೆ ಮಾವು ಮಾದಲಕೆ
ಹುಳಿನೀರನೆರೆದವರಾರಯ್ಯಾ?
ಕಬ್ಬು ಬಾಳೆ ಹಲಸು ನಾರಿವಾಳಕ್ಕೆ
ಸಿಹಿನೀರನೆರೆದವರಾರಯ್ಯಾ?
ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ
ಪರಿಮಳದುದಕವನೆರೆದವರಾರಯ್ಯಾ?
ಇಂತೀ ಜಲವು ಒಂದೆ, ನೆಲನು ಒಂದೆ, ಆಕಾಶವು ಒಮದೆ.
ಜಲವು ಹಲವು ದ್ರವ್ಯಂಗಳ ಕೂಡಿ
ತನ್ನ ಪರಿ ಬೇರಾಗಿಹ ಹಾಗೆ
ಎನ್ನದೇವ ಚೆನ್ನಮಲ್ಲಿಕಾರ್ಜುನಯ್ಯನು
ಹಲವು ಜಗಂಗಳ ಕೂಡಿಕೊಂಡಿರ್ದಡೇನು?
ತನ್ನ ಪರಿ ಬೇರೆ

೨೦

ಉದಯಾಸ್ತಮಾನವೆಂಬೆರಡು ಕೊಳಗದಲ್ಲಿ,
ಆಯುಷ್ಯವೆಂಬ ರಾಶಿ ಅಳೆದು ತೀರದ ಮುನ್ನ
ಶಿವನ ನೆನೆಯಿರೆ ! ಶಿವನ ನೆನೆಯಿರೆ ! ಈ ಜನ್ಮ ಬಳಿಕಿಲ್ಲ
ಚೆನ್ನಮಲ್ಲಿಕಾರ್ಜುನ ದೇವರದೇವನ ನೆನೆದು
ಪಂಚಮಹಾಪಾತರೆಲ್ಲರು ಮುಕ್ತವಡೆದರಂದು

೨೧

ಉಸುರಿನ ಪರಿಮಳವಿರಲು
ಕುಸುಮದ ಹಂಗೇಕಯ್ಯಾ?
ಕ್ಷಮೆ ದಮೆ ಶಾಂತಿ ಸೈರಣೆಯಿರಲು
ಸಮಾಧಿಯ ಹಂಗೇಕಯ್ಯಾ?
ಲೋಕವೆ ತಾನಾದ ಬಳಿಕ ಏಕಾಂತದ ಹಂಗೇಕಯ್ಯಾ
ಚೆನ್ನಮಲ್ಲಿಕಾರ್ಜುನಾ?

೨೨

ಉಳ್ಳುದೊಂದು ತನು, ಉಳ್ಳುದೊಂದು ಮನ,
ನಾನಿನ್ನಾವ ಮನದಲ್ಲಿ ಧ್ಯಾನವ ಮಾಡುವೆನಯ್ಯಾ?
ಸಂಸಾರವನಾವ ಮನದಲ್ಲಿ ತಲ್ಲೀಯವಾಹೆನಯ್ಯಾ?
ಅಕಟಕಟಾ, ಕೆಟ್ಟೆ ಕೆಟ್ಟೆ! ಸಂಸಾರಕ್ಕಲ್ಲಾ, ಪರಮಾರ್ಥಕ್ಕಲ್ಲಾ!
ಎರಡಕ್ಕೆ ಬಿಟ್ಟ ಕರುವಿನಂತೆ !
ಬಿಲ್ವ ಬೆಳವಲಕಾಯನೊಂದಾಗಿ ಹಿಡಿಯಬಹುದೆ
ಚೆನ್ನಮಲ್ಲಿಕಾರ್ಜುನಾ?

೨೩

ಎರೆಯಂತೆ ಕರಕರಗಿ, ಮಳಲಂತೆ ಜರಿಜರಿದು,
ಕನಸಿನಲ್ಲಿ ಕಳವಳಿಸಿ, ಆನು ಬೆರಗಾದೆ.
ಆವಿಗೆಯ ಕಿಚ್ಚಿನಂತೆ ಸುಳಿಸುಳಿದು ಬೆಂದೆ;
ಆಪತ್ತಿಗೆ ಸಖಿಯರನಾರನೂ ಕಾಣೆ.
ಅರಸಿ ಕಾಣದ ತನುವ, ಬೆರಸಿ ಕೂಡದ ಸುಖವ,
ಎನಗೆ ನೀ ಕರುಣಿಸಾ, ಚೆನ್ನಮಲ್ಲಿಕಾರ್ಜುನಾ.

೨೪

ಎಲ್ಲ ಎಲ್ಲವನರಿದು ಫಲವೇನಯ್ಯಾ
ತನ್ನ ತಾನವರಿಯಬೇಕಲ್ಲದೆ?
ತನ್ನಲ್ಲಿ ಅರಿವು ಸ್ವಯವಾಗಿರಲು
ಅನ್ಯರ ಕೇಳಲುಂಟೆ?
ಚೆನ್ನಮಲ್ಲಿಕಾರ್ಜುನಾ
ನೀನರಿವಾಗಿ ಮುಂದುದೋರಿದ ಕಾರಣ
ನಿಮ್ಮಿಂದ ನಿಮ್ಮನರಿದೆನಯ್ಯಾ ಪ್ರಭುವೆ.

೨೫

ಎಲ್ಲಿ ಹೋದಡೆ ಕಲಿಗೆ ಭಯವಿಲ್ಲ
ಹಂದೆಗೆ ಸುಖವಿಲ್ಲ ಕಾಣಿರಣ್ಣಾ
ಈವಂಗವಗುಣವಿಲ್ಲ, ಕರುಣವುಳ್ಳವಂಗೆ ಪಾಪವಿಲ್ಲ
ನಿಮ್ಮ ಮುಟ್ಟಿ ಪರಧನ ಪರಸ್ತ್ರೀಯ ತೊರೆದಾತಂಗೆ
ಮುಂದೆ ಭವವಿಲ್ಲ ಚೆನ್ನಮಲ್ಲಿಕಾರ್ಜುನಾ

೨೬

ಒಬ್ಬಂಗೆ ಇಹವುಂಟು ಒಬ್ಬಂಗೆ ಪರವುಂಟು
ಒಬ್ಬಂಗೆ ಇಹವಿಲ್ಲ ಒಬ್ಬಂಗೆ ಪರವಿಲ್ಲ
ಒಬ್ಬಂಗೆ ಇಹಪರವೆರಡೂ ಇಲ್ಲ
ಚೆನ್ನಮಲ್ಲಿಕಾರ್ಜುನದೇವರ ಶರಣರಿಗೆ
ಇಹಪರವೆರಡೂ ಉಂಟು

೨೭

ಒಳಗ ಶೋಧಿಸಿ ಹೊರಗೆ ಶುದ್ಧಯಿಸಿ
ಒಳಹೊರಗೆಂಬ ಉಭಯ ಶಂಕೆಯ ಕಳೆದು
ಸ್ಫಟಿಕದ ಶಲಾಕೆಯಂತೆ ತಳವೆಳಗು ಮಾಡಿ
ಸುಕ್ಷೇತ್ರವನರಿದು ಬೀಜವ ಬಿತ್ತುವಂತೆ –
ಶಿಷ್ಯನ ಸರ್ವ ಪ್ರಪಂಚ ನಿವೃತ್ತಿಯಂ ಮಾಡಿ ನಿಜೋಪದೇಶವನಿತ್ತು
ಆ ಶಿಷ್ಯನ ನಿಜದಾದಿಯನೈದಿಸುವನೀಗ ಜ್ಞಾನಗುರು
ಆ ಸಹಜ ಗುರುವೀಗ ಜಗದಾರಾಧ್ಯನು
ಅವನ ಶ್ರೀಪಾದಕ್ಕೆ ನಮೋ ನಮೋ ಎಂಬೆ
ಕಾಣಾ ಚೆನ್ನಮಲ್ಲಿಕಾರ್ಜುನಾ.

೨೮

ಓದಿ ಓದಿ ವೇದ ವಾದಕ್ಕಿಕ್ಕಿತ್ತು
ಕೇಳಿ ಕೇಳಿ ಶಾಸ್ತ್ರ ಸಂದೇಹಕ್ಕಿಕ್ಕಿತ್ತು
ಆರಿದೆಹೆ ಅರಿದೆಹೆನೆಂದು ಆಗಮ ಅರೆಇಯಾಗಿ ಹೋಯಿತ್ತು

ಪೂರೈಸಿದೆ ಪೂರೈಸಿಹೆನೆಂದು
ಪುರಾಣ ಪೂರ್ವದ ಬಟ್ಟೆಗೆ ಹೋಯಿತು
ನಾನೆತ್ತ ತಾನೆತ್ತ?
ಬೊಮ್ಮ ಬಟ್ಟಬಯಲು ಚೆನ್ನಮಲ್ಲಿಕಾರ್ಜುನ.

೨೯

ಕಂಗಳಲ್ಲಿ ಕಾಂಬೆನೆಂದು
ಕತ್ತಲೆಯ ಹೊಕ್ಕಡೆಂತಹುದಯ್ಯಾ?
ಬೆಟ್ಟದ ತುದಿಯ ಮೆಟ್ಟಲೆಂದು
ಹಳ್ಳಕೊಳ್ಳಂಗಳಲ್ಲಿ ಇಳಿದಡೆಂತಹುದಯ್ಯಾ?
ನೀನಿಕ್ಕಿದ ಸಯದಾನವನೊಲ್ಲದೆ
ಬೇರೆ ಬಯಸಿದೊಡೆಂತಹುದಯ್ಯಾ?
ಚೆನ್ನಮಲ್ಲಿಕಾರ್ಜುನನ ಘನವನರಿಯಲೆಂದು
ಕಿರುಕುಳಕ್ಕೆ ಸಂದಡೆಂತಹುದಯ್ಯಾ?

೩೦

ಕಂಗಳೊಳಗೆ ತೊಲಗಿ ಬೆಳಗುವ
ದಿವ್ಯ ರೂಪವ ಕಂಡು ಮೈಮರೆದೆನವ್ವಾ,
ಮಣಿಮುಕುಟದ ಫಣಿಕಂಕಣದ ನಗೆಮೊಗದೆ
ಸುಲಿಪಲ್ಲ ಸೊಬಗನ ಕಂಡು ಮನಸೋತೆನವ್ವಾ,
ಇಂತಾಇ ಚೆನ್ನಮಲ್ಲಿಕಾರ್ಜುನನೆನ್ನ ಮದುವಣಿಗ,
ಆನು ಮದುವಣಿಗಿ ಕೇಳಾ ತಾಯೆ.

೩೧

ಕಟಿಹಾದ ಬಿದಿರಿನಲ್ಲಿ ಮರಳಿ ಕಳಲೆ ಮೂಡಬಲ್ಲುದೆ?
ಸುಟ್ಟು ಮಡಕೆ ಮುನ್ನಿನಂತೆ ಮರಳಿ ಧರೆಯನಪ್ಪಬಲ್ಲುದೆ?
ತೊಟ್ಟು ಬಿಟ್ಟು ಬಿದ್ದ ಹಣ್ಣು ಮರಳಿ ತೊಟ್ಟನಪ್ಪಬಲ್ಲುದೆ?
ಕಷ್ಟಕರ್ಮಿ ಮನುಜರು ಕಾಣದೆ ಒಂದು ನುಡಿದಡೆ
ನಿಷ್ಠೆಯುಳ್ಳ ಶರಣರು ಮರಳಿ ಮರ್ತ್ಯಕ್ಕೆ ಬಪ್ಪರೆ
ಚೆನ್ನಮಲ್ಲಿಕಾರ್ಜುನಾ ?

೩೨

ಕಣ್ಗೆ ಶೃಂಗಾರ ಗುರುಹಿರಿಯ ನೋಡುವುದು
ಕರ್ಣಕ್ಕೆ ಶೃಂಗಾರ ಪುರಾತನರ ಸುಗೀತಂಗಳ ಕೇಳುವುದು
ವಚನಕ್ಕೆ ಶೃಂಗಾರ ಸತ್ಯವ ನುಡಿವುದು
ಸಂಭಾಷಣೆಗೆ ಶೃಂಗಾರ ಸದ್ಭಕರ ನುಡಿಗಡಣ
ಕರಕ್ಕೆ ಶರಂಗಾರ ಸತ್ಪಾತ್ರಕ್ಕೀವುದು
ಜೀವಿಸುವ ಜೀವನಕ್ಕೆ ಶೃಂಗಾರ ಗಣಮೇಳಾಪ –
ಇವಿಲ್ಲದ ಜೀವಿಯ ಬಾಳುವೆ ಏತಕ್ಕೆ ಬಾತೆಯಯ್ಯಾ
ಚೆನ್ನಮಲ್ಲಿಕಾರ್ಜುನಾ?

೩೩

ಕರುವಿನ ರೂಹು ಅರಗಿಳಿಯನೋದಿಸುವಂತೆ,
ಓದಿಸುವುದಕ್ಕೆ ಜೀವವಿಲ್ಲ; ಕೇಳುವುದಕ್ಕೆ ಜ್ಞಾನವಿಲ್ಲ
ಚೆನ್ನಮಲ್ಲಿಕಾರ್ಜುನದೇವಯ್ಯಾ,
ನಿಮ್ಮ ನರಿಯದವನ ಭಕ್ತಿ

ಕರುವಿನ ರೂಹು ಆ ಅರಗಿಳಿಯನೋದಿಸುವಂತೆ

೩೪

ಕಾಮಾರಿಯ ಗೆಲಿದನು ಬಸವಾ ನಿಮ್ಮಿಂದ
ಸೋಮಧರನ ಹಿಡಿತಪ್ಪೆನು ಬಸವ ನಿಮ್ಮ ಕೃಪೆಯಿಂದ
ನಾಮದಲ್ಲಿ ಹೆಂಗೂಸೆಂಬ ಹೆಸರಾದಡೇನು?
ಭಾವಿಸಲು ಗಂಡು ರೂಪು ಬಸವಾ ನಿಮ್ಮ ದಯದಿಂದ
ಅತಿಕಾಮಿ ಚೆನ್ನಮಲ್ಲಿಕಾರ್ಜುನಂಗೆ ತೊಡರಿಕ್ಕಿ
ಎರಡುವರಿಯದೆ ಕೂಡಿದೆನು ಬಸವಾ ನಿಮ್ಮ ಕೃಪೆಯಿಂದ

೩೫

ಕಾಯ ಕರ್ರನೆ ಕಂದಿದಡೇನಯ್ಯಾ?
ಕಾಯ ಮಿರ್ರನೆ ಮಿಂಚಿದಡೇನಯ್ಯಾ?
ಅಂತರಂಗ ಶುದ್ಧವದ ಬಳಿಕ
ಚೆನ್ನಮಲ್ಲಿಕಾರ್ಜುನಯ್ಯಾ
ನೀನೊಲಿದ ಕಾಯವು ಹೇಗಿದ್ದಡೇನಯ್ಯಾ?

೩೬

ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವಾ
ಏರಿಲ್ಲದ ಗಾಯದಲ್ಲಿ ನೊಂದೆನವ್ವಾ
ಸುಖವಿಲ್ಲದೆ ಧಾವತಿಗೊಂಡೆನವ್ವಾ
ಚೆನ್ನಮಲ್ಲಿಕಾರ್ಜುನದೇವಂಗೊಲಿದು
ಬಾರದ ಭವಂಗಳಲ್ಲಿ ಬಂದೆನವ್ವಾ

೩೭

ಕಿಡಿಕಿಡಿ ಕೆದರಿದಡೆ ಎನಗೆ ಹಸಿವು ತೃಷೆಯಡಗಿತ್ತೆಂಬೆನು
ಮುಗಿಲು ಹರಿದು ಬಿದ್ದಡೆ ಎನಗೆ ಮಜ್ಜನಕ್ಕೆರೆದರೆಂಬೆನು
ಗಿರಿ ಮೇಲೆ ಬಿದ್ದಡೆ ಎನಗೆ ಪುಷ್ಪವೆಂಬೆನು
ಚೆನ್ನಮಲ್ಲಿಕಾರ್ಜುನಯ್ಯಾ
ಶಿರ ಹರಿದು ಬಿದ್ದಡೆ ಪ್ರಾಣ ನಿಮಗರ್ಪಿತವೆಂಬೆನು

೩೮

ಗಂಗೆಯೊಡನಾಡಿದ ಘಟ್ಟ ಬೆಟ್ಟಂಗಳು ಕೆಟ್ಟ ಕೇಡ ನೋಡಿರಯ್ಯಾ
ಅಗ್ನಿಯೊಡಾಡಿದ ಕಾಷ್ಠಂಗಳು ಕೆಟ್ಟ ಕೇಡ ನೋಡಿರಯ್ಯಾ
ಜ್ಯೋತಿಯೊಡನಾಡಿದ ಕತ್ತಲೆ ಕೆಟ್ಟ ಕೇಡ ನೋಡಿರಯ್ಯಾ
ಜ್ಞಾನಿಯೊಡನಾಡಿದ ಅಜ್ಞಾನಿ ಕೆಟ್ಟ ಕೇಡ ನೋಡಿರಯ್ಯಾ
ಎಲೆ ಪರಶಿವಮೂರ್ತಿ ಹರನೆ, ನಿಮ್ಮ ಜಂಗಮಲಿಂಗದೊಡನಾಡಿ
ಎನ್ನ ಭವಾದಿ ಭವಂಗಳು ಕೆಟ್ಟ ಕೇಡ ನೋಡಾ, ಚೆನ್ನಮಲ್ಲಿಕಾರ್ಜುನಾ

೩೯

ಗಗನದ ಗುಂಪ ಚಂದ್ರಮ ಬಲ್ಲುದಲ್ಲದೆ
ಕಡೆಯಲಿದ್ದಾಡುವ ಹದ್ದು ಬಲ್ಲುದೆ ಅಯ್ಯಾ?
ನದಿಯ ಗುಂಪ ತಾವರೆ ಬಲ್ಲುದಲ್ಲದೆ
ಕಡೆಯಲ್ಲಿದ್ದ ಹೊನ್ನಾವರಿಕೆ ಬಲ್ಲುದೆ ಅಯ್ಯಾ?
ಪುಷ್ಪದ ಪರಿಮಳವ ತುಂಬಿ ಬಲ್ಲುದಲ್ಲದೆ,

ಕಡೆಯಲಿದ್ದಾಡುವ ನೊರಜು ಬಲ್ಲುದೆ ಅಯ್ಯಾ?
ಚೆನ್ನಮಲ್ಲಿಕಾರ್ಜುನಯ್ಯಾ, ನಿಮ್ಮ ಶರಣರ ನಿಲವ ನೀವೇ ಬಲ್ಲಿರಲ್ಲದೆ
ಈ ಕೋಣನ ಮೈಮೇಲಣ ಸೊಳ್ಳೆಗಳೆತ್ತ ಬಲ್ಲರಯ್ಯಾ?

೪೦

ಗಟ್ಟಿದುಪ್ಪ ತಿಳಿದುಪ್ಪಕ್ಕೆ ಹಂಗುಂಟೆ ಅಯ್ಯಾ?
ದೀಪಕ್ಕೆ ದೀಪ್ತಿಗೆ ಭೇದವುಂಟೆ ಅಯ್ಯಾ?
ಅಂಗಕ್ಕೆ ಆತ್ಮಂಗೆ ಭಿನ್ನವುಂಟೆ ಅಯ್ಯಾ?
ಎನ್ನಂಗವನು ಶ್ರೀಗುರು ಮಂತ್ರವಮಾಡಿ ತೋರಿದನಾಗಿ,
ಸಾವಯಕ್ಕೂ ನಿರವಯಕ್ಕು ಭಿನ್ನವಿಲ್ಲವಯ್ಯಾ
ಚೆನ್ನಮಲ್ಲಿಕಾರ್ಜುನ ದೇವರ ಬೆರಸಿ
ಮತಿಗೆಟ್ಟವಳನೇತಕ್ಕೆ ನುಡಿಸುವರಯ್ಯಾ ?

೪೧

ಚಕ್ರ ಬೆಸಗೆಯ್ವಡೆ ಅಲಗಿನ ಹಂಗೇಕೆ?
ಮಾಣಿಕ್ಯದ ಬೆಳಗುಳ್ಳಡೆ ದೀಪದ ಹಂಗೇಕೆ?
ಪರುಷ ಕೈಯ್ಯಲುಳ್ಳಡೆ ಸಿರಿಯ ಹಂಗೇಕೆ ?
ಕಾಮಧೇನು ಕರೆವಡೆ ಕರುವಿನ ಹಂಗೇಕೆ?
ಎನ್ನದೇವ ಚೆನ್ನಮಲ್ಲಿಕಾರ್ಜುನ ಲಿಂಗವು
ಕರಸ್ಥಳದೊಳಗುಳ್ಳಡೆ ಇನ್ನಾವ ಹಂಗೇಕೆ?

೪೨

ತುಂಬಿದುದು ತುಳುಕದು ನೋಡಾ.
ನಂಬಿದುದು ಸಂದೇಹಿಸದು ನೋಡಾ
ಒಲಿದುದು ಓಸರಿಸದು ನೋಡಾ
ನೆರಯರಿದುದು ಮರೆಯದು ನೋಡಾ
ಚೆನ್ನಮಲ್ಲಿಕಾರ್ಜುನಯ್ಯಾ
ನೀನೊಲಿದ ಶರಣಂಗೆ ನಿಸ್ಸೀಮಸುಖವಯ್ಯಾ

೪೩

ಧನದ ಮೇಲೆ ಬಂದವರೆಲ್ಲ ಅನುಸರಿಗಳಲ್ಲದೆ
ಆಗಮಾಡಬಂದವರಲ್ಲ
ಮನದ ಮೆಲೆ ಬಂದು ನಿಂದು ಜರೆದು ನುಡಿದು
ಪವ ತೋರಬಲ್ಲಡಾತನೆ ಸಂಬಂಧಿ
ಹಾಗಲ್ಲದೆ ಅವರಿಚ್ಚೆಯ ನುಡಿದು ತನ್ನುದರವ ಹೊರೆವ
ಬಚ್ಚಣಿಗಳ ಮೆಚ್ಚುವನೆ ಚೆನ್ನಮಲ್ಲಿಕಾರ್ಜುನ?

೪೪

ನಡೆಶುಚಿ, ನುಡಿಶುಚಿ, ತನುಶುಚಿ, ಮನಶುಚಿ, ಭಾವಶುಚಿ
ಇಂತೀ ಪಂಚ ತೀರ್ಥಂಗಳನೊಳಕೊಂಡು ಮರ್ತ್ಯದಲ್ಲಿ ನಿಂದ
ನಿಮ್ಮ ಶರಣರ ತೋರಿ ಎನ್ನನುಳಹಿಕೊಳ್ಳಾ
ಚೆನ್ನಮಲ್ಲಿಕಾರ್ಜುನಾ !

೪೫

ನಾ ಹುಟ್ಟಿಲ್ಲಿ ಸಂಸಾರ ಹುಟ್ಟಿತ್ತು

ಸಂಸಾರ ಹುಟ್ಟಿದಲ್ಲಿ ಅಜ್ಞಾನ ಹುಟ್ಟಿತ್ತು
ಅಜ್ಞಾನ ಹುಟ್ಟಿದಲ್ಲಿ ಆಶೆ ಹುಟ್ಟಿತ್ತು
ಆ ಕೋಪಾಗ್ನಿಯ ತಾಮಸಧೂಮ್ರ ಮುಸುಕಿದಲ್ಲಿ
ನಾ ನಿಮ್ಮ ಮರೆದು ಭವದುಃಖಕ್ಕೀಡಾದೆ
ನೀ ಕರುಣದಿಂದೆತ್ತಿ ಎನ್ನ ಮರಹ ವಿಂಗಡಿಸಿ
ನಿಮ್ಮ ಪಾದವನರುಹಿಸಯ್ಯಾ, ಚೆನ್ನಮಲ್ಲಿಕಾರ್ಜುನಾ.

೪೬

ನಿಮ್ಮ  ನಿಲವಿಂಗೆ ನೀವು ನಾಚಬೇಡವೆ?
ಅನ್ಯರ ಕೈಯಲ್ಲಿ ಅಲ್ಲ ಎನಿಸಿಕೊಂಬುದರಿಂದ
ಅಲ್ಲ ಎನಿಸಿಕೊಂಬುದರಿಂದ
ಆ ಕ್ಷಣವೆ ಸಾವುದು ಲೇಸು
ಕಾಣಾ ಚೆನ್ನಮಲ್ಲಿಕಾರ್ಜುನಾ

೪೭

ಬಲ್ಲಿದ ಹಗೆಯವ ತೆಗೆವನ್ನಬರ
ಬಡವರ ಹರಣ ಹಾರಿಹೋದ ತೆರನಂತಾಯಿತ್ತು
ನೀ ಕಾಡಿ ಕಾಡಿ ನೋಡುವನ್ನಬರ
ಎನಗಿದು ವಿಧಿಯೇ ಹೇಳಾ ತಂದೆ?
ಮುರುವಾರುವನ್ನಬರ
ಎಮ್ಮೆ ಗಾಳಿಗೆ ಹಾರಿಹೋದ ತೆರನಂತಾಯಿತ್ತು
ಎನಗೆ ನೀನಾವ ಪರಿಯಲ್ಲಿ ಕರುಣಿಸುವೆಯಯ್ಯಾ
ಚೆನ್ನಮಲ್ಲಿಕಾರ್ಜುನಾ ?

೪೮

ಬೆಟ್ಟಕ್ಕೆ ಸಾರವಿಲ್ಲೆಂಬರು;
ತರುಗಳು ಹುಟ್ಟುವಪರಿ ಇನ್ನೆಂತಯ್ಯಾ?
ಇದ್ದಲಿಗೆ ರಸವೆಲ್ಲೆಂಬರು;
ಕಬ್ಬುನ ಕರಗುವಪರಿ ಇನ್ನಂತಯ್ಯಾ?
ಎನಗೆ ಕಾಯವಿಲ್ಲೆಂಬರು;
ಚೆನ್ನಮಲ್ಲಿಕಾರ್ಜುನನೊಲಿವಪರಿ ಇನ್ನೆಂತಯ್ಯಾ?

೪೯

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದಡೆಂತಯ್ಯಾ?
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರತೆಗೆಗಳಿಗಂಜಿದಡೆಂತಯ್ಯಾ?
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದಡೆಂತಯ್ಯಾ?
ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ,
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು

೫೦

ಭಾನುವಿನಂತಿಪ್ಪುದು ಜ್ಞಾನ,
ಭಾನುಕರಿಣದಂತಿಪ್ಪುದು ಭಕ್ತಿ,

ಭಾನುವನುಳಿದು ಕಿರಣಂಗಳಿಲ್ಲ
ಕಿರಣಂಗಳನುಳಿದು ಭಾನುವಿಲ್ಲ.
ಜ್ಞಾನವಿಲ್ಲದ ಭಕ್ತಿ, ಭಕ್ತಿಯಿಲ್ಲದ ಜ್ಞಾನವೆಂತಿಪ್ಪುದು
ಚೆನ್ನಮಲ್ಲಿಕಾರ್ಜುನಾ?

೫೧

ಮನೆ ಮನೆದಪ್ಪದೆ ಕೈಯೊಡ್ಡಿ ಬೇಡುವಂತೆ ಮಾಡಯ್ಯ!
ಬೇಡಿದಡೆ ಇಕ್ಕದಂತೆ ಮಾಡಯ್ಯ!
ಇಕ್ಕಿದಡೆ ನೆಲಕ್ಕೆ ಬೀಳುವಂತೆ ಮಾಡಯ್ಯಾ !
ನೆಲಕ್ಕೆ ಬಿದ್ದಡೆ ನಾನೆತ್ತಿಕೊಂಬುದಕ್ಕೆ ಮುನ್ನವೆ
ಸುನಿಯೆತ್ತಿಕೊಂಬಂತೆ ಮಾಡ ಚೆನ್ನಮಲ್ಲಿಕಾರ್ಜುನಯ್ಯ.

೫೨

ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ?
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ?
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ?
ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ?
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ?
ಚೆನ್ನಮಲ್ಲಿಕಾರ್ಜುನಾ?

೫೩

ರತ್ನ ಸಂಕೋಲೆಯಾದಡೆ ತೊಡರಲ್ಲವೆ?
ಮುತ್ತಿನ ಬಲೆಯಾದಡೆ ಬಂಧನವಲ್ಲವೆ?
ಚಿನ್ನದ ಕತ್ತಿಯಲ್ಲಿ ತಲೆಹೊಯ್ದಡೆ ಸಾಯದಿರ್ಪರೆ?
ಲೋಕದ ಭಜನೆಯ ಭಕ್ತಿಯಲ್ಲಿ ಸಿಲುಕಿದಡೆ
ಜನನಮರಣ ಬಿಡುವುದೇ ಚೆನ್ನಮಲ್ಲಿಕಾರ್ಜುನಾ?

೫೪

ರವಿಯ ಕಾಳಗವ ಗೆಲಿದು, ಒಂಬತ್ತು ಬಾಗಿಲ ಮುರಿದು,
ಅಷ್ಟದವಳಾರಮಂ ಸುಟ್ಟು, ಮೇಲುಪ್ಪರಿಗೆಯ ಮೆಟ್ಟಿ,
ಅಲ್ಲ ಅಹುದು, ಉಂಟು–ಇಲ್ಲ ತಾನೆ ಬೇರಿಲ್ಲ
ದ್ವಯಕಮಳದಲ್ಲಿ ಉದಯವಾದ ಚೆನ್ನಮಲ್ಲಿಕಾರ್ಜುನಯ್ಯಾ
ನಿಮ್ಮ ಶರಣ ಸಂಗನಬಸವಣ್ಣನ ಶ್ರೀಪಾದಕ್ಕೆ
ನಮೋ ನಮೋ ಎನುತಿರ್ದೆನು

೫೫

ಲಿಂಗದಿಂದುದಯಿಸಿ ಅಂಗವಿಡಿದಿಪ್ಪ ಪುರಾತನರ
ಇಂಗಿತವನೇನೆಂದು ಬೆಸಗೊಂಬಿರಯ್ಯಾ ?
ಅವರ ನಡೆಯೇ ಆಗಮ, ಅವರ ನುಡಿಯೇ ವೇದ;
ಅವರ ಲೋಕ ಮನವರೆಂದೆನ್ನಬಹುದೆ ಅಯ್ಯಾ?
ಅದೆಂತೆಂದಡೆ ಸಾಕ್ಷಿ:
"ವೃಕ್ಷಾದ್ಭವತಿ ಬೀಜಂ ಹಿ ತದ್‌ವೃಕ್ಷೇ ಲೀಯತೆ ಪುನಃ ।
ರುದ್ರಲೋಕಂ ಪರಿತ್ಯಕ್ತ್ವಾ ಶಿವಲೋಕೇ ಭವಿಷ್ಯತೆ॥"
ಎಂದುದಾಗಿ,
ಅಂಕೋಲೆಯಬೀಜದಿಂದಾಯಿತ್ತು ವೃಕ್ಷವು;
ಆ ವೃಕ್ಷ ಮರಳಿ ಆ ಬೀಜದೊಳಡಗಿತ್ತು

ಆ ಪ್ರಕಾರದಲ್ಲಿ ಲಿಂಗದೊಳಗಿಂದ ಪುರಾತನರುದ್ಭವಿಸಿ,
ಮರಳಿ ಆ ಪುರಾತನರು ಆ ಲಿಂಗದೊಳಗೆ
ಬೆರಸಿದರು ನೋಡಿರಯ್ಯಾ
ಇಂತಪ್ಪ ಪುರಾತನರಿಗೆ ನಾನು ಶರಣೆಂದು ಹುಟ್ಟುಗೆಟ್ಟೆನಯ್ಯಾ
ಚೆನ್ನಮಲ್ಲಿಕಾರ್ಜುನಾ

೫೬

ಲೇಸು ಹಾಸು, ನೋಟವಾಭರಣ, ಆಲಿಂಗನ ವ್ರ
ಚುಂಬನವಾರೋಗಣೆ, ಲಲ್ಲೆವಾತು ತಾಂಬೂಲ,
ಲವಲವಿಕೆಯ ಅನುಲೇಪನವೆನಗೆ,
ಚೆನ್ನಮಲ್ಲಿಕಾರ್ಜುನನ ಕೂಟ ಪರಮಸುಖವವ್ವಾ

೫೭

ಲೋಕದ ಚೇಷ್ಟೆಗೆ ರವಿ ಬೀಜವಾದಂತೆ,
ಕರಣಂಗಳ ಚೇಷ್ಟೆಗೆ ಮನವೇ ಬಈಜ
ಎನಗುಳ್ಳದೊಂದು ಮನ
ಆ ಮನ ನಿಮ್ಮಲ್ಲಿ ಸಿಲುಕಿದ ಬಳಿಕ
ಎನಗೆ ಭವವುಂಟೆ ಚೆನ್ನಮಲ್ಲಿಕಾರ್ಜುನಾ?

೫೮

ವಾನರಂಗಳಿಗೆ ಛೈತ್ರ ತಪ್ಪಿಬಂದಡೆ
ಮುತ್ತು ಮಾಣಿಕ್ಯ ನವರತ್ನದ ಪೆಟ್ಟಿಗೆಗಳು ಸಾರಿದವು
ಸಾರಿದಡೆ ಆ ವಾನರಂಗಳು ಬಲ್ಲವೆ ಮುತ್ತಿನ ರಕ್ಷೆಯ?
ನವರತ್ನದ ಪೆಟ್ಟಿಗೆಯ ತೆರದು ನೋಡಿ,
ಕೆಯ್ಕೊಂಡು, ವಾನರಂಗಳು ಮೆದ್ದು ನೋಡಿ,
ಹಣ್ಣಲ್ಲವೆಂದು ಬಿಟ್ಟು ಕಳದವು
ಲೋಕದೊಳಗೆ ಶರಣ ಸುಳಿದಡೆ,
ಆ ಶರಣನ ನಡೆ ನುಡಿ ಚಾರಿತ್ರವ ಕರ್ಮಿಗಳೆತ್ತ ಬಲ್ಲರು !
ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣರ ಇರವನು ನಿಮ್ಮ ಶರಣರು ಬಲ್ಲರಲ್ಲದೆ
ಆ ವಾನರನಂತಹ ಮನುಜರೆತ್ತ ಬಲ್ಲರು.

೫೯

ಶಿವಗಣಂಗಳ ಮನೆಯಂಗಳ
ವಾರಣಾಸಿಯೆಂಬುದು ಹುಸಿಯೆ
ಪುರಾತನರ ಮನೆಯಂಗಳದಲ್ಲಿ
ಅಷ್ಟಾಷಷ್ಟಿ ತೀರ್ಥಂಗಳು ನೆಲೆಸಿಪ್ಪನಾಗಿ
ಅದೆಂತೆಂದಡೆ ಅದಕ್ಕೆ ಆಗಮ ಸಾಕ್ಷಿ;
"ಕೇದಾರಸ್ಯೋದಕ್ಕೆ ಪೀತೇ ವಾರಣಾಸ್ಯಾ ಮೃತೇ ಸತಿ !
ಶ್ರೀಶೈಲಶಿಖರೇ ದೃಷ್ಟೇ ಪುನರ್ಜನ್ಮನವಿದ್ಯತೇ ॥"
ಎಂಬ ಶಬ್ದಕ್ಕಧಿಕವು
ಸುತ್ತಿಬರಲು ಶ್ರೀಶೈಲ, ಕೆಲಬಲದಲ್ಲಿ ಕೇದಾರ,
ಅಲ್ಲಿಂದ ಹೊರಗೆ ವಾರಣಾಸಿ
ವಿರಕ್ತಿ ಬೆದೆಯಾಗಿ, ಭಕ್ತಿ ಮೊಳೆಯಾಗೆ,
ಎನ್ನ ದೇವ ಆ ಚೆನ್ನಮಲ್ಲಿಕಾರ್ಜುನಾ
ನಿಮ್ಮ ಭಕ್ತರ ಮನೆಯಂಗಳ

ಪ್ರಯಾಗದಿಂದ ಗುರುಗಂಜಿಯಧಿಕ ನೋಡ !

೬೦

ಶಿವ ಶಿವಾ, ಆದಿ ಅನಾದಿಗಳೆಂಬೆರಡಿಲ್ಲದ ನಿರವಯ ಶಿವ,
ನಿಮ್ಮ ನಿಜವನಾರಯ್ಯ ಆ ಬಲ್ಲವರು !
ವೇದಂಗಳಿಗಭೇದ್ಯನು; ಶಾಸ್ತ್ರಂಗಳಿಗಸಾಧ್ಯನು;
ಪುರಾಣಕ್ಕೆ ಆಗಮ್ಯನು; ಆಗಮಕ್ಕೆ ಅಗೋಚರನು;
ತರ್ಕಕ್ಕೆ ಅತರ್ಕ್ಯನು;
ವಾಙ್ಮನಾತೀತವಾಗಿಪ್ಪ ಪರಿಶಿವಲಿಂಗವನು
ಕೆಲಂಬರು ಸಕಲನೆಂಬರು; ಕೆಲಂಬರು ನಿಃಕಲನೆಂಬರು;
ಕೆಲಂಬರು ಸೂಕ್ಷ್ಮನೆಂಬರು; ಕೆಲಂಬರು ನಿಃಕಲನೆಂಬರು;
ಈ ಬಗೆಯ ಭಾವದಿಂದ ಹರಿ, ಬ್ರಹ್ಮ ಇಂದ್ರ, ಚಂದ್ರ ರವಿ
ಕಾಲ, ಕಾಮ, ದಕ್ಷ, ದೇವ, ದಾನವ, ಮಾನವರೆಲ್ಲರೂ
ಕಾಣಲರಿಯದೆ ಅಜ್ಞಾನದಿಂದ ಭವಭಾರಿಗಳಾದರು.
ಈ ಪರಿಯಲ್ಲಿ ಬಯಲಾಗಿ ಹೋಗಬಾರದೆಂದು ನಮ್ಮ ಬಸವಣ್ಣನು
ಜಗದ್ಧಿತಾರ್ಥವಾಗಿ ಮರ್ತ್ಯಕ್ಕೆ ಅವತರಿಸಿ
ವೀರಶೈವ ಮಾರ್ಗವನರುಪುವುದಕ್ಕೆ
ಬಾವನ್ನ ವಿವರವನೊಳಕೊಂಡು ಚರಿಸಿದನದೆಂತೆಂದಡೆ;
ಗುರುಕಾರುಣ್ಯವೇದ್ಯನು, ವಿಭೂತಿ ರುದ್ರಾಕ್ಷಿಧಾರಕನು,
ಪಂಚಾಕ್ಷರೀ ಭಾಷಾ ಸಮೇತನು, ಲಿಂಗಾಂಗ ಸಂಬಂಧಿ
ನಿತ್ಯ ಲಿಂಗಾರ್ಚಕು, ಅರ್ಪಿತದಲ್ಲಿ ಅವಧಾನಿ,
ಪಾದೋದಕಪ್ರಸಾದಗ್ರಾಹಕರನು, ಗುರುಭಕ್ತ ಸಂಪನ್ನನು,
ಏಕಲಿಂಗನಿಷ್ಠಾಪರನು, ಚರಲಿಂಗಲೋಲುಪ್ತನು
ಶರಣಸಂಗಮ್ಯೈಶ್ವರ್ಯನು, ತ್ರಿವಿಧಕ್ಕಾಯತನು,
ತ್ರಿಕರಣ ಶುದ್ಧು, ತ್ರಿವಿಧ ಲಿಂಗಾಂಗಸಂಬಂಧಿ,
ಅನ್ಯದೈವ ಸ್ಮರಣೆಯ ಹೊದ್ದ, ಭವಿಸಂಗವ ಮಾಡ,
ಭವಿಪಾಕವ ಕೊಳ್ಳ, ಪರಸತಿಯ ಬೆರಸ
ಪರಧನವನೊಲ್ಲ, ಪರನಿಂದೆಯನಾಡ, ಅನೃತವ ನುಡಿಯ
ಹಿಂಸೆಯ ಮಾಡ, ತಾಮಸಭಕ್ತಸಂಗವ ಮಾಡ
ಗುರುಲಿಂಗಜಂಗಮಕ್ಕೆ ಅರ್ಥಪ್ರಾಣಾಭಿಮಾನ
ಮುಂತಾದವೆಲ್ಲವ ಸಮರ್ಪಿಸಿ,
ಪ್ರಸಾದ ಮುಂತಾಗಿ ಭೋಗಿಸುವ, ಜಂಗಮನಿಂದೆಯ ಸೈರಿಸ,
ಪ್ರಸಾದನಿಂದೆಯ ಕೇಳ, ಅನ್ಯರನಾಸೆಗೆಯ್ಯ,
ಪಾತ್ರಾಪಾತ್ರವನರಿದೀವ, ಚತುರ್ವಿಧಪದವಿಯ ಹಾರ,
ಅರಿಷಡ್ವರ್ಗಕ್ಕೆ ಅಳುಕ, ಕುಲಾದಿಮದಂಗಳ ಬಗೆಗೊಳ್ಳ
ದ್ವೈತಾದ್ವೈತವ ನುಡಿದವನಲ್ಲ, ಸಂಕಲ್ಪವಿಕಲ್ಪವ ಮಾಡುವನಲ್ಲ,
ಕಾಲೋಚಿತವ ಬಲ್ಲ, ಕ್ರಮಯುಕ್ತನಾಗಿ ಷಟ್‌ಸ್ಥಲಭರಿತ
ಸರ್ವಾಂಗಲಿಂಗಿ, ದಾಸೋಹಸಂಪನ್ನ
ಇಂತೀ ಐವತ್ತೆರಡು ವಿಧದಲ್ಲಿ ನಿಪುಣನಾಗಿ
ಮೆರೆದ ನಮ್ಮ ಬಸವಣ್ಣನು
ಆ ಬಸವಣ್ಣನ ಶ್ರೀಪಾದಕ್ಕೆ ನಾನು ಅಹೋರಾತ್ರಿಯಲ್ಲಿ
ನಮೋ ನಮೋ ಎಂದು ಬದುಕಿದೆನು ಕಾಣಾ, ಚೆನ್ನಮಲ್ಲಿಕಾರ್ಜುನಾ

೬೧

ಸಟೆದಿಟವೆಂಬ ಎರಡುವಿಡಿದು ನಡೆವುದೀ ಲೋಕವೆಲ್ಲವು
ಸಟೆದಿಟವೆಂಬ ಎರಡುವಿಡಿದು ನಡೆವುದೀ ಲೋಕವೆಲ್ಲವು
ಸಟೆದಿಟವೆಂಬ ಎರಡುವಿಡಿದು ನಡೆವನೆ ಶರಣನು?
ಗುರುಲಿಂಗಜಂಗಮದಲ್ಲಿ ಸಟೆಯ ಬಳಸಿದಡೆ
ಅವನು ತ್ರಿವಿಧಕ್ಕೆ ದ್ರೋಹಿ, ಅಘೋರ ನರಕಿ

ಉಂಬುದೆಲ್ಲ ಕಿಲ್ಬಿಷ, ತಿಂಬುದೆಲ್ಲ ಅಡಗು, ಕುಡಿವುದೆಲ್ ಸುರೆ
ಹುಸಿಯೆಂಬುದೆ ಹೊಲೆ, ಶಿವಭಕ್ತಂಗೆ ಹುಸಿಯೆಂಬುದುಂಟೆ ಅಯ್ಯಾ?
ಹುಸಿಯನಾಡಿ ಲಿಂಗವ ಪೂಜಿಸಿದಡೆ
ಹೊಳ್ಳ ಬಿತ್ತಿ ಫಲವನರುಸವಂತೆ

೬೩

ಸದ್ಗುರು ಸ್ವಾಮಿ ಶಿಷ್ಯಂಗೆ ಅನುಗ್ರಹವ ಮಾಡುವಲ್ಲಿ
ತಚ್ಚಿಷ್ಯನ ಮಸ್ತಕದ ಮೇಲೆ ತನ್ನ ಹಸ್ತವನಿರಿಸಿದಡೆ
ಲೋಹದ ಮೇಲೆ ಪರುಷ ಬಿದ್ದಂತಾಯಿತ್ತಯ್ಯಾ
ಒಪ್ಪುವ ಶ್ರೀ ವಿಭೂತಿಯ ನೊಸಲಿಂಗೆ ಪಟ್ಟವಕಟ್ಟಿದಡೆ
ಮುಕ್ತಿರಾಜ್ಯದ ಒಡೆತನಕ್ಕೆ ಪಟ್ಟವಕಟ್ಟಿದಂತಾಯಿತ್ತಯ್ಯಾ
ಸದ್ಯೋಜಾತ ವಾಮದೇವ ಅಘೋರ ತತ್ಪುರುಷ ಈಶಾನವೆಂಬ
ಪಂಚಕಳಶದಭಿಷೇಕವ ಮಾಡಿಸಲು
ಶಿವನ ಕರುಣಾಮೃತದ ಸೋನೆ ಸುರಿದಂತಾಯಿತ್ತಯ್ಯಾ
ನೆರೆದ ಶಿವಗಣಂಗಳ ಮಧ್ಯದಲ್ಲಿ
ಮಹಾಲಿಂಗವನು ಕರತಳಾಮಳಕವಾಗಿ ಶಿಷ್ಯನ ಕರಸ್ಥಳಕ್ಕೆ ಇತ್ತು
ಅಂಗದಲ್ಲಿ ಪ್ರತಿಷ್ಠಿತಿ, ಪ್ರಣವಪಂಚಾಕ್ಷರಿಯುಪದೇಶವ
ಕರ್ಣದಲ್ಲಿ ಹೇಳಿ, ಕಂಕಣವ ಕಟ್ಟಿದಲ್ಲಿ,
ಕಾಯವೆ ಕೈಲಾಸವಾಯಿತ್ತು;
ಪ್ರಾಣವೆ ಪಂಚಬ್ರಹ್ಮಮಯಲಿಂಗವಾಯಿತ್ತು
ಇಂತು ಮುಂದ ತೋರಿ ಹಿಂದ ಬಿಡಿಸಿದ
ಶ್ರೀಗುರುವಿನ ಸಾನ್ನಿಧ್ಯದಿಂದಾನು ಬದುಕಿದೆನಯ್ಯಾ
ಚೆನ್ನಮಲ್ಲಿಕಾರ್ಜುನಾ

೬೪

ಸಪ್ತಧಾತುಗಳಿಮದ ಬಳಸಲ್ಪಟ್ಟ ಈ ಶರೀರವೆ
ಶಿವನ ಪಟ್ಟಣವೆಂದು ಹೇಳಲ್ಪಟ್ಟಿತು
ಈ ಪಿಂಡವೆಂಬ ಪಟ್ಟಣದಲ್ಲಿ
ಸೂಕ್ಷ್ಮವಾದಂಥ ಧಾರಾಕಾಶದಿಂದ ಮನೋಹರವಾಗಿದ್ದ
ಹೃದಯಕಮಲವೆ ಅಂತಃಪುರವು
ಅಲ್ಲಿ ನಿತ್ಯಪರಿಪೂರ್ಣತ್ವದಿಮದ ಸಿದ್ಧನಾಗಿ ಸಚ್ಚಿದಾನಂದವೇ
ಕುರುಹಾಗುಳ್ಳ ಪರಮಶಿವನು ಜಲದಲ್ಲಿ ತೋರುತ್ತಿರ್ದ
ಆಕಾಶದೋಪಾದಿಯಲ್ಲಿ ಪ್ರತ್ಯಕ್ಷವಾಗಿ
ಪ್ರಕಾಶವೆ ಸ್ವರೂಪವಾಗುಳ್ಳಾತನಾಗಿ ಇರುತಿರ್ದನು
ಆ ಜಲಮಧ್ಯದಲ್ಲಿಯ ಆಕಾಸ ಬಿಂಬದಲ್ಲಿರುತಿರ್ದ
ಘಟಾಕಾಶದೋಪಾದಿಯಲ್ಲಿ
(ಅ) ಖಂಡಿತನಾಗಿರ್ದ ಚಿದ್ರೂಪನಾದ ಶಿವನನು
ಭಾವಿಸುವುದಯ್ಯ ಶ್ರೀ ಚೆನ್ನಮಲ್ಲಿಕಾರ್ಜುನದೇವಾ

೬೫

ಸುಟ್ಟ ಬೂದಿಯೊಳಗೊಂದು ಸುಡದ ಬೂದಿಯ ಕಂಡೆ,
ಆ ಸುಡದ ಬೂದಿಯ ಬೆಟ್ಟವ ಮಾಡಿದಾತನ
ಗುಟ್ಟನಾರು ಕಂಡುದಿಲ್ಲ
ನಾನು ಆತನನರಿದು ಶರಣೆಂದು ಬದುಕಿದೆ
ಆ ಬೆಟ್ಟದ ಮೇಲೆ ಅನೇಕ ವಸ್ತುಗಳಕಂಡು
ಚರಿಸುತ್ತಿದ್ದೇನೆ ಚೆನ್ನಮಲ್ಲಿಕಾರ್ಜುನಾ

೬೬

ಹಂದಿಯೂ ಮದಕರಿಯೂ ಒಂದೆ ದಾರಿಯಲ್ಲಿ ಸಂಧಿಸಿದಡೆ
ಹಂದಿಗಂಜಿ ಮದಕರಿ ಕೆಲಕ್ಕೆ ಸಾರಿದಡೆ
ಈ ಹಂದಿಯದು ಕೇಸರಿಯಪ್ಪುದೆ ಚೆನ್ನಮಲ್ಲಿಕಾರ್ಜುನಾ?

೬೭

ಹಗಲು ನಾಲ್ಕು ಜಾವ ಅಶನಕ್ಕೆ ಕುದಿವರು
ಇರುಳು ನಾಲ್ಕು ಜಾವ ವ್ಯಸನಕ್ಕೆ ಕುದಿವರು
ಆಗಸ ನೀರೊಳಗಿರ್ದ ಬಾಯಾರಿ ಸತ್ತಂತೆ,
ತಮ್ಮೊಳಗಿರ್ದ ಮಹಾಘನವನರಿಯರು ಚೆನ್ನಮಲ್ಲಿಕಾರ್ಜುನಾ

೬೮

ಹಸಿವಾದಡೆ ಊರೊಳಗೆ ಭಿಕ್ಷಾನ್ನಗಳುಂಟು
ತೃಷೆಯಾದರೆ ಕೆರೆ ಹಳ್ಳ ಬಾವಿಗಳುಂಟು
ಅಂಗಶೀತಕ್ಕೆ ಬೀಸಾಟ ಅರಿವೆಗಳುಂಟು
ಶಯನಕ್ಕೆ ಹಾಳು ದೇಗುಲಗಳುಂಟು
ಚೆನ್ನಮಲ್ಲಿಕಾರ್ಜುನಯ್ಯಾ
ಆತ್ಮ ಸಂಗಾತಕ್ಕೆ ನೀನೆನಗುಂಟು

೬೯

ಹಾವಿನ ಹಲ್ಲ ಕಲೆದು ಹಾವನಾಡಿಸಬಲ್ಲಡೆ
ಹಾವಿನ ಸಂಗವೆ ಲೇಸು ಕಂಡಯ್ಯಾ
ಕಾಯದ ಸಂಗವ ವಿವರಿಸಬಲ್ಲಡೆ
ಕಾಯದ ಸಂಗವೆ ಲೇಸು ಕಂಡಯ್ಯಾ
ತಾಯಿ ರಕ್ಕಸಿಯಾದಂತೆ ಕಾಯವಿಕಾರವು
ಚೆನ್ನಮಲ್ಲಿಕಾರ್ಜುನಯ್ಯಾ
ನೀನೊಲಿದವರು ಕಾಯಗೊಂಡಿದ್ದರೆನಬೇಡ

೭೦

ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲಡೆ
ಹಾವಿ ಸಂಗವೆ ಲೇಸು ಕಂಡಯ್ಯಾ
ಕಾಯದ ಸಂಗವ ವಿವರಿಸಬಲ್ಲಡೆ
ಕಾಯದ ಸಂಗವೆ ಲೇಸು ಕಂಡಯ್ಯಾ
ತಾಯಿ ರಕ್ಕಸೊಯಾದಂತೆ ಕಾಯವಿಕಾರವು
ಚೆನ್ನಮಲ್ಲಿಕಾರ್ಜುನಯ್ಯಾ
ನೀನೊಲಿದವರು ಕಾಯಗೊಂಡಿದ್ದರೆನಬೇಡ

೭೧

ಹಿಂಡನಗಲಿ ಹಿಡಿವಡೆದ ಕುಂಜರ
ತನ್ನ ವಿಂಧ್ಯವ ನೆನೆವಂತೆ ನೆನೆವೆನ್ನಯಾ
ಬಂಧನಕ್ಕೆ ಬಂದ ಗಿಳಿ
ತನ್ನ ಬಂಧುವ ನೆನೆವಂತೆ ನೆನೆವೆನಯ್ಯಾ
ಕಂದಾ, ನೀನಿತ್ತ ಬಾ ಎಂದು
ನೀವು ನಿಮ್ಮಂದವ ತೋರಯ್ಯಾ, ಚೆನ್ನಮಲ್ಲಿಕಾರ್ಜುನಾ

೭೨

ಹಿಂದಣ ಹಳ್ಳ, ಮುಂದಣ ತೊರೆ
ಸಲ್ಲುವ ಪರಿಯೆಂತು ಹೇಳಾ !
ಹಿಂದಣ ಕೆರೆ, ಮುಂದಣ ಬಲೆ
ಹದುಳವಿನ್ನೆಲಿಯದು ಹೇಳಾ!
ನೀನಿಕ್ಕಿದ ಮಾಯೆ ಕೊಲುತಿಪ್ಪುದು
ಕಾಯಯ್ಯಾ, ಕಾಯಯ್ಯಾ ಚೆನ್ನಮಲ್ಲಿಕಾರ್ಜುನಾ.

೭೩

ಹಿಡಿವೆನೆಂದಡೆ ಹಿಡಿಗೆ ಬಾರನವ್ವಾ
ತಡೆವೆನೆಂದಡೆ ಮೀರಿ ಹೋಹನವ್ವಾ
ಒಪ್ಪಚ್ಚಿ ಅಗಲಿದಡೆ ಕಳವಳಗೊಂಡೆ
ಚೆನ್ನಮಲ್ಲಿಕಾರ್ಜುನನ ಕಾಣದೆ
ಆನಾರೆಂದರಿಯೆ ಕೇಳಾ, ತಾಯೆ.

೭೪

ಹುಟ್ಟಿದೆ ಶ್ರೀ ಗುರುವಿನ ಹಸ್ತದಲ್ಲಿ,
ಬೆಳೆದೆನು ಅಸಂಖ್ಯಾತರ ಕರುಣದೊಳಗೆ,
ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ,
ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ
ಇಂತಪ್ಪ ತ್ರಿವಿಧಾಮೃತವನು ದಣಿಯಲೆರೆದು ಸಲಹಿದಿರೆನ್ನ
ವಿವಾಹವ ಮಾಡಿದಿರಿ, ಸಯವಪ್ಪ ಗಂಡಂಗೆ ಕೊಟ್ಟಿರಿ,
ಕೊಟ್ಟ ಮನೆಗೆ ಕಳುಹಲೆಂದು
ಅಸಂಖ್ಯಾತರೆಲ್ಲರೂ ನೆರೆದು ಬಂದಿರಿ
ಬಸವಣ್ಣ ಮೆಚ್ಚಲು ಒಗತನವ ಮಾಡುವೆ
ಚೆನ್ನಮಲ್ಲಿಕಾರ್ಜುನನ ಕೈವಿಡಿದು
ನಿಮ್ಮ ತಲೆಗೆ ಹೂವ ತಹೆನಲ್ಲದೆ ಹುಲ್ಲ ತಾರೆನು
ಅವಧರಿಸಿ, ನಿಮ್ಮಡಿಗಳೆಲ್ಲರೂ
ಮರಳಿ ಬಿಜಯಂಗೈವುದು ಶರಣಾರ್ಥಿ

೭೫

ಹೆದರದಿರು ಮನವೆ, ಬೆದರದಿರು ತನುವೆ,
ನಿಜವನಿರು ನಿಶ್ಚಿಂತನಾಗಿರು
ಫಲವಾದ ಮರನ ಕಲ್ಲಲಿ ಇಡುವುದೊಂದು ಕೋಟಿ,
ಎಲವದಮರನ ಇಡುವರೊಬ್ಬರ ಕಾಣೆ.
ಭಕ್ತಿಯುಳ್ಳವರ ಬೈವರೊಂದುಕೋಟಿ,
ಭಕ್ತಿಯಿಲ್ಲದವರ ಬೈವರೊಬ್ಬರ ಕಾಣೆ
ನಿಮ್ಮ ಶರಣರ ನುಡಿಯೆ ಎನಗೆ ಗತಿ, ಸೋಪಾನ,
ಚೆನ್ನಮಲ್ಲಿಕಾರ್ಜುನಾ

**ಅಕ್ಕಗಳ ಕುರಿತ ಕೆಲವು ವಚನಗಳು**

೧

ಆದಿಶಕ್ತಿ ಅನಾದಿಶಕ್ತಿಯೆಂಬರು ನೋಡಯ್ಯ
ಆದಿಯೆಂದೆಡೆ ಕುಱುಹಿಂಗೆ ಒಂದಿತ್ತು
ಅನಾದಿಯೆಂದೆಡೆ ನಾಮಕ್ಕೆ ಒಂದಿತ್ತು
ಆದಿಯಲ್ಲ ಅನಾದಿಯಲ್ಲ
ನಾಮವಿಲ್ಲದ ಸೀಮೆಯಿಲ್ಲದ ನಿಜಶಕ್ತಿಯೆ
ನಿಃಶಕ್ತಿಯಾಯಿತ್ತು ನೋಆ
ಅಂತರಂಗದ ಪ್ರಭೆ ಬಹಿರಂಗವೆಲ್ಲಾ ತಾನೆಯಾಗಿ ವೇದಿಸಿ
ಗೋಗೇಶ್ವರಲಿಂಗದಲ್ಲಿ ಸಂದಿಲ್ಲದಿಪ್ಪ
ಮಹದೇವಿಯಕ್ಕನಿಗೆ ನಮೋ ನಮೋ ಎಂಬೆನು

– ಪ್ರಭುದೇವ

೨

ಕಾಯದ ಲಜ್ಜೆಯ ಕಲ್ಪಿತವ ಕಳದು
ಜೀವನದ ಲಜ್ಜೆಯ ಮೋಹವಳಿದು
ಮನದ ಲಜ್ಜೆಯ ನೆನಹುಗೆಟ್ಟು
ಭಾವದ ಕೂಟ ಬತ್ತಲೆಯೆಂದಜಿದು
ತವಕದ ಕೂಟ ಬೇಹಾರಕ್ಕೆ ಹೋಗದ
ಕೂಡಲ ಸಂಗಮದೇವಯ್ಯ
ಎನ್ನ ಹೆತ್ತತಾಯಿ ಮಹದೇವಿಯಕ್ಕಗಳ ನಿಲವ ನೋಡಾ ಪ್ರಭುವೇ
–ಬಸವಣ್ಣ

೩

ಹೆಂಗೂಸಿನಂಗವ ನೋಡಿರೆ ಪುರಾತನರು
ಬಾಲೆತನದಂಗವ ನೋಡಿರೆ ಪುರಾತನರು
ಬ್ರಹ್ಮವನಾಚರಿಸಿ ತನ್ನ ಮಱದಿಪ್ಪುದ ನೋಡಿರೆ ಪುರಾತನರ ಲಿಂಗವಂತರು
ತನ್ನಲ್ಲಿ ತಾ ನಿಶ್ಚಯವಾಗಿ ಭಾಷೆ ಬೀಸರವೋಗದೆ ಇಪ್ಪ ಇರವು
ಕೂಡಲಸಂಗಮದೇವರಲ್ಲಿ
ನಮ್ಮ ಹೆತ್ತ ತಾಯಿ ಮಹದೇವಿಯಕ್ಕಂಗಾಯಿತ್ತು

– ಬಸವಣ್ಣ

೪

ಅಜಕಲ್ಪಕೋಟಿ ವರುಷದವರೆಲ್ಲಾ ಹಿರಿಯರೆ?
ಹುತ್ತೇಜಿ ಬೆತ್ತ ಬೆಳೆವರೆಲ್ಲಾ ಹಿರಿಯರೆ?
ನಡು ಮುಱಿದು ಗುಡುಗಿರಿದು ತಲೆ ನಡುಗಿ
ನರೆತೆರೆ ಹೆಚ್ಚಿ ಮತಿಗೆಟ್ಟು ಒಂದನಾಡ ಹೋಗಿ ಒಂಬತ್ತ ನುಡಿವ
ಅಜ್ಞಾನಿಗಳೆಲ್ಲ ಹಿರಿಯರೆ?
ಅನುವಱಿದು ಘನವ ಬೆರಸಿ
ಹಿರಿದು ಕಿಱಿದೆಂಬ ಭೇದವ ಮಱಿದು
ಕೂಡಲ ಚೆನ್ನಸಂಗಯ್ಯನಲ್ಲಿ ಬೆರಸಿ ಭೇದವಿಲ್ಲದ ಹಿರಿಯತನ
ನಮ್ಮ ಮಹದೇವಯಕ್ಕಂಗಾಯಿತ್ತು

–ಚೆನ್ನಬಸವಣ್ಣ

೫

ತನುವಿನೊಳಗಿದ್ದು ತನುವ ಗೆದ್ದಳು
ಮನದೊಳಗಿದ್ದು ಮನವ ಗೆದ್ದಳು
ವಿಷಯದೊಳಗಿದ್ದು ವಿಷಯವ ಗೆದ್ದಳು
ಭವಿಯ ಸಂಗದೊಳಗಿದ್ದು ಭವವ ಗೆದ್ದಳು
ಕೂಡಲ ಚೆನ್ನಸಂಗಯ್ಯನ
ಹೃದಯ ಕಮಳವ ಬಗಿದು ಹೊಕ್ಕ ನಿಜಪದವನೆಯಿದಿದ
ಮಹದೇವಿಯಕ್ಕನ ಪಾದಕ್ಕೆ ನಮೋ ನಮೋ ಎಂಬೆನು

– ಚೆನ್ನಬಸವಣ್ಣ

೬
ಅಹುದಹುದು ಮತ್ತೇನು?
ಮಱಹಿಂಗೆ ಹಿರಿದು ಹಿಱಿದುಂಟಲ್ಲದೆ
ಅಱುಹಿಂಗೆ ಹಿರಿದು ಕಿಱಿದುಂಟೆ?
ಸಾವಿಂಗೆ ಭಯವುಂಟಲ್ಲದೆ ಅಜಾತಂಗೆ ಭಯವಿಲ್ಲ
ಕಪಿಲಸಿದ್ಧ ಮಲ್ಲಿನಾಥನಲ್ಲಿ
ಮಹದೇವಿಯಕ್ಕನ ನಿಲವೀಮಗೆ ಶರಣೆಂದು
ಶುದ್ಧನಾದೆನು ಕಾಣಾ ಚೆನ್ನಬಸವಣ್ಣಾ
– ಸಿದ್ದರಾಮಣ್ಣ

೭

ಕಂಗಳನೋಟಕರ ಸ್ಥಲದಲ್ಲಿಯ ಪ್ರಾಣ
ಅಂಗವಿಕಾರ ನಿರ್ವಿಕಾರವಾಯಿತ್ತು
ಆ ಸಂಗಸುಖ ನಿಸ್ಸಂಗವಾಯಿತ್ತು
ಹೆಂಗೂಸೆಂಬ ಭಾವವಳಿದು ಬಯಲ ಬೆರಸಿತ್ತು
ಕಲಿದೇವರ ದೇವ ನಿಮ್ಮನೊಲಿಸಿ ಒಚ್ಚತವಾದ
ಮಹದೇವಿಯಕ್ಕ ಪಾದವ ನೆನೆದು ಬದುಕಿದೆನು
–ಮಡಿವಾಳ ಮಾಚಯ್ಯ

೮
ಮಸ್ತಕವ ಮುಟ್ಟಿ ನೋಡಿದರೆ ಮನೋಹರನ ಉಳಿವು ಕಾಣಬಂದಿತ್ತು
ಮುಖಮಂಡಲವ ಮುಟ್ಟಿನೋಡಿದರೆ ಮೂರ್ತಿಯ ಉಳಿವು ಕಾಣಬಂದಿತ್ತು
ಕೊರಳ ಮುಟ್ಟಿ ನೋಡಿದರೆ ಗರಳಧರನಿರವು ಕಾಣಬಂದಿತ್ತು
ತೋಳುಗಳ ಮುಟ್ಟಿ ನೋಡಿದರೆ ಶಿವನಪ್ಪುಗೆ ಕಾಣಬಂದಿತ್ತು
ಉರಸ್ಥಲವ ಮುಟ್ಟಿ ನೋಡಿದರೆ ಕರಸ್ಥಲದಂಗಲೇಪ ಕಾಣಬಂದಿತ್ತು
ಬಸುಱ ಮುಟ್ಟಿ ನೋಡಿದರೆ ಬ್ರಹ್ಮಾಂಡವಡಗಿತ್ತ ಕಾಣಬಂದಿತ್ತು
ಗುಹ್ಯವ ಮುಟ್ಟಿನೋಡಿದರೆ ಕಾಮದಹನ ಕಾಣಬಂದಿತ್ತು
ಮಹಾಲಿಂಗ ತ್ರಿಪುರಾಂತಕದೇವ
ಮಹದೇವಿಯಕ್ಕನ ನಿಲವನಱಿಯದೆ ಅಳುಪಿ ಕೆಟ್ಟನು
– ಕಿನ್ನರಿ ಬ್ರಹ್ಮಯ್ಯ.

## ಕಠಿಣ ಪದಗಳ ಅರ್ಥಕೋಶ

ಅಂಗವಿಸಿ = ಕೂಡಿಒಳ್ಳೂ
ಅಂಗಶೀತ=ಛಳಿ, ಹೆ. ವ ೬೬
ಅಂಕೋಲೆ= ಒಂದು ಜಾತಿಗಯ ಗಿಡ ಹೆ.ವ ೫೪
ಅಂತು = ಪರಿಪೂರ್ಣತೆ, ಒಟ್ಟು ರೂಪು ೯೮
ಅಗ್ಗವಣಿ (ತ್ವ) = ಅರ್ಘ್ಯಮಣಿ (ತ್ಸ),ಪೂಜೆಗಾಗಿ ಬಳಸುವ ನೀರು (ಹೆ.ವ.೬)
ಅಗಲು= ಊಟದ ತಟಟೆ, ಕಂಚು, ತಳಿಗೆ ಹೆ.ವ. ೫೧
ಅಚ್ಚುಕ– (ತ್ವ) = ಅಚ್ಯುತ (ತ್ಸ), ಅವಿನಾಶಿ, ಶಾಶ್ವತ, ಚಿರಂತನ ೮೭
ಅಟ್ಟು = ಕಳುಹು ೫
ಅಡಗು = ಮಾಂಸ, ಹೆ.ವ. ೬೦
ಅಡ್ಡವಿಸು = ಅಡ್ಡಿಮಾಡು, ೧೩೯
ಅನಂತ = ಮನ್ಮಥ, ೧೫೪
ಅನುವಾಗು = ಹಿತವಾಗು, ಮೆಚ್ಚಾಗು, ೪೦ ೪೧
ಅನುವು – ಅಂದ, ಅಚ್ಚುಕಟ್ಟು, ೧೦೪
ಅನುಸರಿಗಳು = ಹೊಂದುಕೊಳ್ಳುವರು, ಜಾರಿಕೊಳ್ಳುವವರು, ಹೆ.ವ. ೪೩
ಅಮೇಧ್ಯ – ಮಲ, ಹೇಸಿಗೆ ೭೫
ಅಮ್ಮೆ = ಶ್ಕತಳಲ್ಲ ೯೩
ಅರಕೆಗೆಡು= ಕೊರತೆ ಇಲ್ಲವಾಗಿ ಹೆ.ವ.೬
ಅಱಸು = ಹುಡುಕು ೧೬೮
ಅಱಲು = ಮಣ್ಣು, ಹೂಳಲು ೧೧೭
ಅರಳು = ಹೂವು ೧೩೯
ಅಱಿಕೆ– ತಿಳಿದಿರು ೫೯
ಅಲಗು – ಕತ್ತಿ ೬೪
ಅವಧಾನಿ = ವೇದಗಳನ್ನು ಅಧ್ಯಯನ ಮಾಡಿದವನು
ಅವಸರ = ಸಮಯ, ಸನ್ನಿವೇಶ, ಅಗತ್ಯ ೧೭೧, ೧೭೩
ಅನನ= ಅನ್ನ, ಹೆ.ವ.೧೪
ಅಳಿ = ದುಂಬಿ, ೧೮೭
ಳಿಮನ = ದುರ್ಬಲವಾದ ಮನಸ್ಸು ೧೪೬
ಅಶ್ರುಜಲ = ಆನಂದದ ಕಣ್ಣೀರು ೪೨
ಅಷ್ಟಮದ = ಧನಮದ, ಕುಲಮದ, ವಿದ್ಯಾಮದ, ರೂಪಮದ, ಯೌವನಮದ, ಬಲಮದ, ಪರಿವಾರಮದ, ಅಧಿಕಾರಮದ, ಎಂಬ ಎಂಟು ಮದಗಲು – ೨೦

ಆ
ಆಗುಮಾಡು = ಪೂರ್ಣಗೊಳಿಸು, ನೆರವೇರಿಸು ಹೆ.ವ.
ಆದ್ಯರು = ಪೂವಿಕರು, ಹಿರಿಯರು ೪೪
ಆಱಡಿಗೊಳ್ಳು = ವ್ಯಾಇಸು ೬
ಆರತ = ಹಷ್ ೩೯
ಆವಿಗೆ = ಕುಂಬಾರನ ಮಡಕೆ ಸುರುವ ಓಲೆ ಹೆ.ವ. ೨೩
ಆಳಿಗೊಳು = ಮೋಸಹೋಗು ೧೭೫
ಆಳುತನ = ಪರಾಕ್ರಮ ದೊಡ್ಡಸ್ತಿಕೆ, ಹೆ.ವ.೧೭

ಇ
ಇಂಬು= ಅವಕಾಶ, ಆಶ್ರಯ ೩೮, ೨೯೭ ೧೯೪
ಇಮ್ಮೈಗಾಣು = ಎಡರೂ ಮಗ್ಗಲು ಕಾಣು, ೧೯೦

ಈ
ಈರೇಳು = ಎರಡು ಏಳು (ಹದಿನಾಲ್ಕು ) ೨೦೧

ಉ
ಉದುಮದ = ಅತಿಶಯವಾದ ಮದ, ೧೯

ಉನ್ಮನಿ – ಆವೇಶಭರಿತೆ ೧೦೦
ಉಪ್ಪರಿಸು – ಮೇಲೇಊ ೪೨
ಉರ = ಎದೆ, ೫೦
ಉಜೆ = ಸಂಪುರ್ನ, ವಿಶೇಷ ೧೦೨
ಉರವಣೆ = ಕಾಟ, ಪೀಡೆ ೧೯
ಉಲಿ = ಶಬ್ದ, ನುಡಿ, ೧೫೯

ಊ
ಊಡು = ತಿನ್ನಿಸು ೮೫
ಊಣೆಯ = ಕುಂದು ೧೫೦

ಎ
ಎಗ್ಗ = ದಡ್ಡ, ಹುಂಬ ೨೩, ೧೧೬
ಎಚ್ಚು = ಬಾಣ ಪ್ರಯೋಗ ಮಾಡು ೮೭
ಎಡೆಗೋಲು – ತಡೆಗೋಲು, ಅಡ್ಡಗೋಲು ಹೆ.ವ.೭
ಎರಳೆ = ಜಿಂಕೆ ೨೯
ಎಸುಗೆಗಜೆ = ಬಾಣದ ಹಿಂಭಾಗದ ಗರಿ ೮೭
ಎಳಸು – ಅಪೇಕ್ಷಿಸು, ಬಯಸು ೧೫೭

---

ಹೆ.ವ. = ಹೆಚ್ಚಿನ ವಚನಗಳ ಸಂಕ್ಷಿಪ್ತ ರೂಪ

ಏ
ಏರು = ಗಾಯ, ಹೆ.ವ.೫೬

ಒ
ಒಕ್ಕುದ = ತೆಗೆದುಹಾಕಿದ್ದ ೯೨
ಒಚ್ಚತ = ಹಿತಕರ ೪೮, ೭೬
ಒಜ್ಜರಿಸು = ಚೆಲುವಮೇಯಗು ಪುಟ ೪೨
ಒಡತಣ = ಸಂಬಮದಿಸಿದ ಸಹವಾಸ ೪೩
ಒಪ್ಪಿಚ =ತುಸು, ಸ್ವಲ್ಪ ಹೆ.ವ. ೭೦
ಒಱಗು – ಮಲಗು ೩೫
ಒರೆ = ಪರೀಕ್ಷಸು , ತಿಕ್ಕಿನೋಡು ೮೯
ಒಳುಗುಂದದ = ಕಳೆಗುಂದದ, ೬೩

ಓ
ಓಗರ = ಪಕ್ವವಾದ ಆಹಾರ ಹೆ.ವ. ೧೯
ಓತು = ಒಲಿದು, ಹೆ.ವ. ೩೧
ಓಸರಿಸು = ಸರಿಸು ೯೦, ೧೮೩

ಕ
ಕಂತಿ = ಜೈನ ಭಿಕ್ಷುಣಿ ೧೦
ಕಟಹು = ಗಟ್ಟ, ಬಿರುಸು ಹೆ.ವ. ೩೧
ಕಣ್ಬೇಟ = ನೋಡುವ ಮೂಲಕವೇ ಕಾಮಿಸುವುದು೨೯
ಕದಪು = ಕೆನ್ನೆ ೩೩
ಕರಣ = ಇಂದ್ರಿಯ ೧೯೭
ಕರಿಗೊಳ್ಳು – ಸಉಟ್ಟು ಕರಿಕಾಗು, ನಾಶವಾಗು ೨೦೨
ಕರು = ಎರಕ, ಹೆ.ವ.೩೩
ಕಱುವಿಡು = ಎರಕ ಹೊಯ್ಯು ೪೧, ೧೫೪
ಕಳ = ಯುದ್ಧ ಭೂಮಿ ೧೫೨
ಕಳವೆ = ಬತ್ತ, ನೆಲ್ಲು, ಹೆ.ವ. ೧೯

ಕಾತು = ಚಿಗುರು, ಹೂ ಬಿಡು ೨೯
ಕುಂಜರ= ಆನೆ ಹೆ.ವ. ೬೮
ಕುಂಟಣಿ = ಪ್ರೇಮಿಗಳನ್ನು ಕೂಡಿಸವವನು ೩೧
ಕೈಕೊಳಿಸು = ಸ್ವೀಕರಿಸುವಂತೆ ಮಾಡು ೧೨೧
ಕೈದು = ಆಯುಧ ೧೨, ೧೯೮
ಕೈವಾರಿಸು =ಹೊಗಳು, ಪ್ರಾರ್ಥನೆ ಮಾಡು ೯೦
ಕೊಂಬು = ತುತ್ತೂರಿ ೧೮೪

ಗ

ಗುಣಮೇಳಾಪ = ಸಮೂಹಿಕ ಸೌಹಾರ್ದತೆ, ಪ್ರೀತಿ ವಿಶ್ವಾಸ ಹೆ.ವ. ೫೨
ಗಹ್ವರ = ಗವಿ, ಗುಹೆ ೧೮೬
ಗುಮಫ = ಆಲ ಹೆ.ವ. ೩೯
ಗುಡುಗಿರ = ದಮ್ಮಬರು [ಅಕ್ಕನ ಕುರಿತ ವಚನ]
ಗೊಟ್ಟಿ (ತವ) = ಗೋಷ್ಠಿ (ತ್ವ)೪೩
ಗೊಂದಣ = ಗಉಂಪು ಹೆ.ವ. ೧೩೯
ಗೊರವ = ಶಿವ, ಭಿಕ್ಷುಕ ೩೬, ೩೭

ಚ
ಚಂದನ = ಶ್ರಿಗಂಧ ೮೯
ಚಳೆಯ = ನೀರು ಇಸಂಪಡಿತು ೨೪
ಚೋಹ = ವೇಷ ೧೧
ಜಂಗುಳಿ  ಗುಂಪು ೩
ಜಕ್ಕವಕ್ಕಿ – ಚಕ್ರವಾಕ ಪಕ್ಷಿ (ತ್ಸ) ೨೮

ತ
ತಟ್ಟು = ಇಚ್ಛೆ, ಬಯಕೆ ಹೆ.ವ. ೧

ತಡಬಡ = ಕಾತರ ೮೨
ತಜಿದು = ಕತ್ತರಿಸು, ಕಡಿ ೧೯೨
ತಳವಾರ = ನಗರ ರಕ್ಷಕ, ಕಳ್ಳರನ್ನುಪತ್ತೆ ಹಚ್ಚುವವ ಹೆ.ವ. ೧೫
ತಳವೆಳಗಾಗು = ಬೆರಾಗು ೩೬
ತಾಮಸ = ಜಡತ್ವ ಹೆ.ವ. ೧೬
ತಿಂಥಿಣಿ = ಸಮೂಹ ಹೆ.ವ. ೧೬
ತಿರುಗು = ಅತ್ತರು ಮೊದಲಾದ ಸುವಾಸನಾ ವಸ್ತು ೧೫೨ ಹೆ.ವ.೭
ತಿಲ = ಎಳ್ಳು ೧
ತುಷ = ತೌಡು, ಹೊಟ್ಟ ಹೆ.ವ.೬
ತೂರ್ಯ ಸಂಭಾಷಣೆ = ಮೋಕ್ಷಕ್ಕೆ ಯೋಗ್ಯವಾದ ಸಂಭಾಷಣೆ ಹೆ.ವ.೮
ತಿಲ = ಎಲ್ಲೂ ೧
ತುಷ = ತೌಡು, ಹೊಟ್ಟು ಹೆ.ವ.೬
ತೂರ್ಯ ಸಂಭಾಷಣೆ = ಮೋಕ್ಷಕ್ಕೆ ಯೋಗ್ಯವಾದ ಸಂಭಾಷಣೆ ಹೆ.ವ.೮
ತೂರ್ಯಾವಸ್ಥೆ = ಮೋಕ್ಷ ಪಡೆಯುವ ತುತ್ತತುದಿಯ ಸ್ಥಿತಿ ೩೦
ತೆರಣಿಯ ಹುಳು = ತನ್ನ ದೇಹದ ಒಂದು ದ್ರವದಿಂದ ಗೂಡುಕಟ್ಟುವ ಹುಳು (ಜೇಡ ಅಥವ ರೇಷ್ಮೆ ಹುಳು)
ತೆರಹು = ಖಾಲಿ, ಅವಕಶ ೫೩, ೪೧
ತೊಂಗವಾಙು = ಜೋತಾಡು ೧೭೬
ತೊಮಡಿಲು = ಶಿರೋರತ್ನ ೬೩, ೬೬
ತೊಡರು = ಕೂಡುವುದು, ಸೇರುವುದು ಹೆ.ವ. ೩೪
ತೊಡಿಗೆ = ಆಭರಣ ೧೩೩

ದ
ದಂಡುಮಂಡಲ = ಯುದ್ಧಭೂಮಿ ೩೧

ದಂದುಗ = ಕಷಟ ೧೬
ದಿನಬಂಜೆ = ದಿನ ವ್ಯರ್ಥ ೧೨೯
ದಿಮ್ಮಿತ್ತು = ಭಾರವಾದದ್ದು, ಹೆ.ವ. ೧೭

ಧ
ಧಾತು = ಸತ್ವ ೯೮
ಧಾವತಿ =ಶ್ರಮ ೯೮

ಮ
ನಾರಿವಳ = ತೆಂಗು ಹೆ.ವ. ೧೯
ನಾಳ = ಯೋನಿ ೧೨೭ ೧೬೩
ನಿಧ = ಹೂತಿಟ್ಟ ಹಣ ೧, ೮೪
ನಿರಕೆ = ಸತ್ಯ, ನ್ಯಾಯ ಹೆ.ವ. ೧೬
ನಿರವಯ = ಪ್ರತ್ಯೇಕಗೊಳ್ಳದಿರುವುದು, ಬಯಲು ಸ್ಥಿತಿ ೧೮೨
ನಿರ್ಜರ ಜಲ = ದೇವಲೋಕದ ನೀರು (ದೇವಗಂಗೆ)೨೦೦
ನುಂಪು = ಕೋಮಲತೆ೬೨
ನುಲಿ = ಹಗ್ಗ ೧೧೨
ನೂಲಮಜಿ = ಬಟ್ಟೆಯ ಹೊದಿಕೆ ೧೬೩
ನೆರೆ = ಕೂಡು ೩೦
ನೊರಜ = ಸೊಳೆ ಹೆ.ವ. ೩೯

ಪ
ಪಟಲ = ಪೊರೆ ೧೭೮
ಪರಿಣಾಮಿಸು = ತೃಪ್ತಿಪಡು, ಆನಂದಪಡು
ಪರಾಕಿ = ಹೊಗಳು ಭಟ ೦
ಪಳಿ = ಒಂದು ಬಗೆಯ ಉತ್ತಮ ಬಟ್ಟೆ ೩೦
ಪುಶೂ =ಳೆಫೀಶೂ, ಶೌಖು ೮೬
ಪೈಸರ = ಹುಸಿ, ಜಾರು ೭೧, ೧೮೩
ಪ್ರಪಂಚು = ಲೌಕಿಕವಾದ ಬದುಕು, ಸಂಸಾರ ೮

ಬ
ಬಟ್ಟಣಿಗಳು = ವಂಚಕರು, ಮೋಸಗಾರರು, ಹೆ.ವ. ೪೩
ಬಂಟಬೆಟ್ಟ = ಬೆಟ್ಟದಂತೆ ಅಚಲವಾಗಿನಿಲ್ಲಬಲ್ಲ ಯೋಧ ಹೆ.ವ. ೧೭
ಬಟ್ಟೆಹ = ದುಂಡಾಗಿರುವ ೧೯೫
ಬಟ್ಟೆ = ದಾರಿ ೪, ೨೬
ಬತ್ತೀಸ = ಮೂವತ್ತೆರಡು ಹೆ.ವ.೧೦
ಬಜಲು = ಬೋಳಾದ ಕಡ್ಡಿಕಡ್ಡಿಆದ ೧೧೭
ಬಲುಗೈಯರು = ಬುದ್ಧಿವಂತರು ೬
ಖಾತೆ- ಪ್ರಯೋಜನ ಹೆ.ವ.೩೨
ಬಾನ = ಅನ್ನ ಹೆ.ವ. ೫೨
ಬಾಯಾರು = ಹಂಬಲಿಸು ೨೬
ಬಾನ್ನ = ಶ್ರೀಗಂಧ ಹೆ.ವ. ೫೯
ಬಾವುಲಿ =ಕಾಲ್ಗಡಗ ೧೪೦
ಬಾಸಿಗ = ಹೂಮಾಲೆ೬೩, ೫೦
ಬಿರಿದು = ಬಇರುದು, ಖ್ಯಾತಿ ಹೆ.ವ.೭
ಬೀಸರು = ವ್ಯರ್ಥ, ಕಕ್ಕಾಬಿಕ್ಕಿ ಆಗು ೪೮, ೭೧, ೧೦೨
ಬೆಂಗೊಡು = ಬೆನ್ನು ತೋರು, ಓಡಿಹೋಗು ೧೯೮
ಬೆಂಗೋಳು = ಬಾರುಕೋಲು ೭
ಬೆಂಬಳಿವಿಡಿ = ಹಿಂಬಾಲಿಸು ೯೧
ಬೆಂಬೀಳು = ತಳಮಳಗೊಳ್ಳು ೩೫
ಬೆಸನ = ಆಜ್ಞೆ ೫

ಬೆಸಗೊಳು = ಕೇಳು ೨೨
ಬೆಸಲಾಗು = ಹೆರಿಗೆ ೭೬
ಬೆಸಸು = ಬೆಸಗುಎ ಹಾಕು ೧೫೬
ಬೇಟ= ಮೋಹ, ಅಪೇಕ್ಷೆ ೧೫೭
ಬೊಬ್ಬುಲಿ= ಜಾಲಿಯ ಮರ ೧೭೩
ಭವ= ಜನ್ಮ ಲೋಕ ಸಂಸಾರ ೫೩, ೧೨೬
ಭೈತ್ರ = ಹಡಗು ಹೆ.ವ. ೮
ಮಜ್ಜನ = ಸ್ನಾನ ೪೦
ಮಥನ = ಕಡೆಯುವುದು, ಉಜ್ಜುವುದು ೧೩೨
ಮನಕತ = ದುಃಖ ಸಿಟ್ಟು ೩೨
ಮಱುಜವಣಿ = ಸಂಜೀವಿನಿ ೨೦೦
ಮರೀಚಿಕಾಜಲ = ಬಿಸಲು ಕುದುರೆ ೧೫೪
ಮಾಟ = ಕರ್ಮ, ಕ್ರಿಯೆ ೪೯
ಮಾಣಿಸು = ದೂರಮಾಡು, ತಡೆ ೬, ೧೩
ಮಾರಾಂಕ = ಎದುರಾಳಿ ವೈರಿ, ಶತ್ರು, ೧೯೦
ಮಿಟ್ಟೆ = ಮಣ್ಣಿನ ಹೆಂಟೆ ೧೦೨
ಮಿಡಿ = ಮಿಣಿ, ನೇಗಿಲು ಕಟ್ಟುವ ಹಗ್ಗ೧೯೮
ಮುಡಿವಾಳ = ಹೆಗಲು, ಭು ೮೩
ಮುರುವ = ಕಲಗಚ್ಚು ಹೆ.ವ. ೪೭
ಮೆದದು = ತಿಂದು, ಕಡಿದು, ಹೆ.ವ.೫೭
ಮೊರಡಿ = ಸಣ್ಣಗುಡ್ಡ ೫೪
ಮೊಱೆ = ಪ್ರಾರ್ಥನೆ, ಆಶ್ರಯ ೬೯, ೧೯೫

ರ
ರಾಜಾನ್ನ = ಒಂದು ಬಗೆಯ ಶ್ರೇಷ್ಠ ಜಾತಿ ಬತ್ತ ಹೆ.ವ. ೧೯
ರುಚಿ = ಶಾಂತಿ, ಆಸಕ್ತಿ ಹೆ.ವ. ೦೭
ರೂಹು (ಪ) = ರೂಪು, ಆಕಾರ ೧೯೪
ಲೇಸು = ಒಳಿತು ೧೪೧
ವಾಯ = ಸುಳ್ಳು, ಕೃತಕ ೧೧೪
ವಾರಿಕಲ್ಲು = ಮಂಜುಗಡ್ಡೆ ೨೦೨
ವಾರುವ = ಕುದುರೆ ೧೯೮
ವಿಕಳಾವಸ್ಥೆ = ವಿಯೋಗ ಸ್ಥಿತಿ ೪
ವಿಷಯ = ಕಾಮ ೭೮, ೧೧೫
ವೇಧಿಸು  ಕೂಡಿಸು, ಬೆರಸು (ಹೆ.ವ.೧)
ವ್ಯಾಧ = ಬೇಢ ೧೫೪
ಶಾಲ್ಯಾನ್ನ = ಒಂದು ಬಗೆಯ ಉತ್ತಮ ಅಕ್ಕಿ ಹೆ.ವ. ೧೯
ಶ್ರೋತ್ರ = ಕಿವಿ ೧೯೪
ಸಟೆ = ಸುಳ್ಳು ೪೮
ಸಪ್ತಧಾತು = ಶರೀರದಲ್ಲಿರುವ ರಸ, ರಕ್ತ, ಮಾಂಸ, ಮೇಸ್ಸು, ಮಜ್ಜೆ, ಅಸ್ತಿ ಮತ್ತು ಶುಕ್ರಗಳೆಂಬ ಧಾತುಗಳು ೨೦, (ಧಾತು = ಮೂಲವಸ್ತು ಸತ್ತ್ವ)
ಸಪ್ತ ವ್ಯಸನಗಳು = ಸ್ತ್ರೀ ದೂತ, ಬೇಟೆ, ಕುಡಿತ ವಾಕ್ಪಾರುಷ್ಯ, ದುಡಪಾರುಷ್ಯ ಮತ್ತು ಅರ್ಥದೂಷಣ ಎಂಬ ಏಳು ವ್ಯಸನಗಳು ೧೪೩
ಸಮಗಾಱ = ಮೋಚೆ ೧೧೫
ಸಮರತಿ = ಪರಸ್ಪರ ಪ್ರೇಮ ೪೦
ಸಯದಾನ = ನೈವೇದ್ಯ, ಜಂಗಮಕ್ಕೆ ನೀಡುವ ನೈವೇದ್ಯ ೯೫
ಸಱೆ = ಕೋಡುಗಲ್ಲು ೧೭೫
ಸವಣ = ಜೈನ ಸನ್ಯಾಸಿ ೧೦
ಸಾದು = ಸುಗಂಧ ದ್ರವ್ಯ ೪೬
ಸಾರೆ = ಕೂಡಿ ೩೯
ಸೀತಳ = ಎಳನೀರು ೧೫೧
ಸುನಿ = ನಾಯಿ ಹೆ.ವ. ೫೦

ಸುಲಿಪಲ್ಲು = ಸ್ವಚ್ಛಹಲ್ಲು ೩೭, ೨೦೧
ಸೂನೆಗಾಱ = ಕಟುಕ ಕೊಲೆಗಡುವಕ ೪೫, ೭೩
ಸೂಱುತಿ = ಸೂರೆ ೫೬
ಸೇಸೆ = ಅಕ್ಷತೆ, ಅಕ್ಕಿಕಾಳು ಹಾಕು ೫೧

ಸೈವೆಱಗು =ಆಶ್ಚರ್ಯ ೧೦೬, ೧೩೬
ಸ್ವಯ = ಸ್ವಂತ, ತನ್ನ ೧೦೧
ಸ್ವಾಯತ = ತನ್ನ ಅಧೀನದಲ್ಲಿರುವುದು ೨೩

ಹ
ಹಗೆಯವು = (ಹಗೇವು) ಕಾಳು ತುಂಬುವ ನೆಲದ ರಾಜ ಹೆ.ವ. ೪೭
ಹಡಿಕೆ = ಕುಳಿ ೭೫, ೧೧೩
ಹತ್ತೆನಾರು = ಸಮೀಪಿಸು ೧೨೦
ಹಂದರ = ಚಪ್ಪರ ೬೬
ಹಂದೆ =ಹೇಡಿ ೧೪೫ ಹೆ.ವ. ೨೪
ಹದುಳಿಗ = ಕ್ಷೆಮಿ, ಸುಖ ೧೩೫
ಹಯನು = ಹಾಲು ಕರೆಯುವುದು ಹೆ.ವ. ೫೧
ಹರಳು = ಕಲ್ಲು ೨೦೦
ಹವಣಿಸು = ಪ್ರಮಾಣಿಸು ೫೭
ಹಾರು = ನಿರೀಕಷಿಸು ೨೪
ಹುಲ್ಲೆ = ಜಿಂಕೆ ೨೯
ಹೂನೆ ಹೊಗು = ಪ್ರತಿಷ್ಠೆಮಾಡು ೧೨೯
ಹೇಸು = ಅಸಹ್ಯಪಡು ೧೧೩
ಹೊದಕುಳು = ಸಂಕಟ, ಅಸಂಬರ್ಧದ ೧೫೮, ೧೫೬
ಹೊದ್ದು = ಸೇರು, ೧೮, ೭೭
ಹೊಲಬು = ರೀತಿ – ಹರಸ್ಯ ಹೆ.ವ.೧೧
ಹೊಲ್ಲೆಹ = ಕೆಟ್ಟದ್ದು ೧೪೧
ಹೊಳಲು = ಪಟ್ಟಣ, ನಗರ, ಹೆ.ವ.೯
ಹೊಳ್ಳು = ಜೊಳ್ಳು ಹೆ.ವ. ೬೦
ಹೋಕು = ಹೋಗುವಿಕೆ ೧೭೩